

ಅಖಿಲ ಭಾರತ ಪತ್ರಿಕೆ
ಜುಲೈ 2016

# ನಂಬಿಕೆಯ ಅರಳಿಕೊಳ್ಳುವಿಕೆ

ಬೆಲೆ : 15/–



*In quietness you will feel*
*that the divine force, help and protection*
*are always with you.*

- The Mother

## ಅಖಿಲ ಭಾರತ ಪತ್ರಿಕೆ

**ಸಂಪಾದಕರು**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ – 580 007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಕಾರ್ಯಾಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು–560078.
ಫೋನ್ : 080 – 2244 9882
http://abp.sirinudi.org


## ಪರಿವಿಡಿ

### “ನಂಬಿಕೆಯ ಅರಳಿಕೊಳ್ಳುವಿಕೆ”


**ಅನು : ಶ್ರೀ ವೀರೇಂದ್ರ ಸಿಂಪಿ**

ಜ್ಞಾನದ ರೀತಿಯಲ್ಲಿ ನಂಬಿಕೆ 5

**ಅನು : ಡಾ. ಕೆ.ಎಸ್. ಆಮೂರ**

ನಂಬಿಕೆಯ ಸಾಮರ್ಥ್ಯ 13

ನಂಬಿಕೆಯ ಸೇತುವೆಯನ್ನು ನಿರ್ಮಾಣ ಮಾಡುವುದು 28

**ಅನು : ಶ್ರೀ ಪುರುಷೋತ್ತಮ ಗಲಗಲಿ**

ನಂಬಿಕೆಯನ್ನು ಕುರಿತು ಧ್ಯಾನ 46

**ವಾರ್ತಾಪತ್ರ** 52

**All India Magazine ಸಂಪಾದಕರ ಟಿಪ್ಪಣಿ:**

ಅತ್ಯಂತ ಅಂಧಕಾರವಿರುವ ದಿನಗಳಲ್ಲಿ 'ನಂಬಿಕೆ' ಅತ್ಯಂತ ಸುನಿಶ್ಚಿತ ಮಾರ್ಗದರ್ಶಿ. ಅದು ಅವಿತುಕೊಂಡ ಜ್ಞಾನವಾಗಿದ್ದು ಗುರಿಯೆಡೆಗೆ ಬೆರಳಿಟ್ಟು ತೋರಿಸುವ ಪ್ರಕಾಶದ ಹಾಗಿದ್ದು ಆತ್ಮದಿಂದ ಮೇಲೆ ಜಿಗಿದು ಬರುತ್ತದೆ. ಅದೊಂದು ದಿಕ್ಸೂಚಿಯಂತಿದ್ದು, ನಮ್ಮ ಇತರ ಭಾಗಗಳು ನಮ್ಮನ್ನು ದಾರಿ ತಪ್ಪಿಸಿದ್ದಾಗ್ಯೂ ನಾವು ಸರಿಯಾಗಿ ತಿರುಗಿಕೊಳ್ಳುವುದನ್ನು ಕಾಪಾಡಿಕೊಂಡು ಬರುತ್ತದೆ. ನಂಬಿಕೆ ಸಹಾಯ ಮಾಡುವ ಸಾಮರ್ಥ್ಯ ಕೂಡ ಆಗಿದ್ದು, ಇತರ ಸಾಮರ್ಥ್ಯಗಳಿಗೆ ಗ್ರಹಣ ಹಿಡಿದಾಗ ನಮ್ಮನ್ನು ರಕ್ಷಿಸುತ್ತದೆ. ನಮ್ಮಲ್ಲಿರುವ ಉಳಿದೆಲ್ಲವನ್ನು ನಮ್ಮಿಂದ ತೆಗೆದುಕೊಂಡು ಹೋದಂತಾದಾಗ ಅದು ನಮ್ಮ ಜೀವನವನ್ನು ಪುನರ್‌ನಿರ್ಮಾಣ ಮಾಡಬಲ್ಲದು. ಅದು ದೈವೀ ಕೃಪೆಯ ಕೊಡುಗೆ, ನಾವು ಉತ್ಸಾಹದಿಂದ ನಿಯಂತ್ರಣದಲ್ಲಿರಿಸಿಕೊಂಡು ಬರಬೇಕಾದ ಸಂಪತ್ತು. ಮನುಷ್ಯ ನಂಬಿಕೆಯಿಲ್ಲದೆ ಜೀವಿಸಲಾರ. ಸರ್ವಸಾಧಾರಣ ಪ್ರಾಪಂಚಿಕ ಜೀವನದಲ್ಲಿ ಅವನು ಬದುಕಿ ಉಳಿಯುವುದಕ್ಕಾಗಿಯೇ ಆಗಲಿ ಇಲ್ಲವೆ ಎಂದೆಂದಿಗೂ ಹೊಸದಾದುದನ್ನು ಹಾಗೂ ಅಜ್ಞಾತವಾದದ್ದನ್ನು ಎದುರಿಸಬೇಕಾದ ಯೌಗಿಕ ಜೀವನದಲ್ಲಿಯೇ ಆಗಲಿ ನಂಬಿಕೆ ಅವಶ್ಯವಾಗಿದೆ. ಯೋಗದ ಈ ಮೂಲಭೂತ ಆಧಾರ ಕಂಬದ ಮೇಲೆ ಶ್ರೀ ಅರವಿಂದರು ಹಾಗೂ ಶ್ರೀಮಾತೆಯವರು ಅತಿ ಹೆಚ್ಚಿನ ಮಹತ್ವ ನೀಡಿದ್ದಾರೆ. ಈ ಹಿಂದಿನ ಸಂಚಿಕೆ (ಜೂನ್ 2016) ನಂಬಿಕೆ ಕುರಿತು ಶ್ರೀ ಅರವಿಂದರ ಪ್ರಕಾಶಮಯ ಶಬ್ದಗಳನ್ನು ಒಳಗೊಂಡಿತ್ತು. ಈ ಸಂಚಿಕೆಯಲ್ಲಿ ನಂಬಿಕೆಯ ವಿಷಯಗಳನ್ನು ಕುರಿತು ಆಚರಣೆಗೆ ಅನುಕೂಲವಾಗುವ ಶ್ರೀಮಾತೆಯವರ ಮಾರ್ಗದರ್ಶನವನ್ನು ಕೈಗೆತ್ತಿಕೊಳ್ಳುತ್ತಿದ್ದೇವೆ, ನಂಬಿಕೆಯನ್ನು ಹೊಂದುವುದನ್ನು, ಹೆಚ್ಚಿಸುವುದನ್ನು ಹಾಗೆಯೇ ಅದನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವುದನ್ನು, ಉಪಯೋಗಿಸುವುದನ್ನು ಕುರಿತು ಹೇಳಲಾಗಿದೆ.

*

(ಈ ಸಂಚಿಕೆಯ ಮುಖಪುಟದ ಮೇಲೆ ಚೆರಿ ಗಿಡದ ಹೂವಿನ ಚಿತ್ರವನ್ನು ಮುದ್ರಿಸಲಾಗಿದೆ. ಆ ಹೂವಿನ ಮಹತ್ವ ಕುರಿತು ಶ್ರೀಮಾತೆಯವರು ಬರೆದಿದ್ದನ್ನು ಕೆಳಗೆ ಕೊಡಲಾಗಿದೆ.)

ಆಳವಾದ ಏಕಾಗ್ರತೆ ನನ್ನನ್ನು ಹಿಡಿದುಕೊಂಡಿತು ಮತ್ತು ನಾನು ಚೆರಿ ಗಿಡದ ಒಂದೇ ಒಂದು ಹೂವಿನೊಂದಿಗೆ ನನ್ನನ್ನು ಗುರುತಿಸಿಕೊಳ್ಳುತ್ತಿದ್ದೇನೆ ಎಂಬ ಗ್ರಹಿಕೆ ಬಂದಿತು, ನಂತರ ಅದರ ಮೂಲಕ ಎಲ್ಲ ಚೆರಿ ಹೂವುಗಳೊಂದಿಗೆ ಗುರುತಿಸಿ–ಕೊಳ್ಳುವಂತಾಯಿತು. ನೀಲಿ ವರ್ಣದ ಶಕ್ತಿಯಿರುವ ಪ್ರವಾಹದೊಂದಿಗೆ ನಾನು ಪ್ರಜ್ಞೆಯ ಆಳದಲ್ಲಿ ಇಳಿದು ಹೋದಾಗ ಹಠಾತ್ತನೆ ಚೆರಿ ಗಿಡವೇ ಆಗಿಬಿಟ್ಟೆ. ಅದು ಯಜ್ಞಾಹುತಿಯಿಂದ ಕೂಡಿದ ಹೂವುಗಳಿರುವ ತನ್ನ ಅಸಂಖ್ಯಾತ ಟೊಂಗೆಗಳನ್ನು ತೋಳುಗಳ ಹಾಗೆ ಆಕಾಶದತ್ತ ಚಾಚಿಕೊಳ್ಳುತ್ತಿತ್ತು. ಆಗ ನಾನು ಸ್ಪಷ್ಟವಾಗಿ ಕೇಳಿಸಿಕೊಂಡ ವಾಕ್ಯ ಹೀಗಿದೆ: “ಹೀಗೆ ನಿನ್ನನ್ನು ಚೆರಿ ಗಿಡಗಳ ಆತ್ಮದೊಂದಿಗೆ ಗುರುತಿಸಿಕೊಂಡೆ, ಹಾಗಾಗಿ ಭಗವಂತನೇ ಹೂವಿನ ಪ್ರಾರ್ಥನೆಯನ್ನು ಸ್ವರ್ಗಕ್ಕೆ ಅರ್ಪಿಸುತ್ತಿದ್ದಾನೆ ಎಂಬುದನ್ನು ನೀನು ಗಮನಿಸಬೇಕು.”

ನಾನದನ್ನು ಬರೆದು ತೆಗೆದಾಗ ಎಲ್ಲವೂ ಅಳಿಸಿಹೋಗಿತ್ತು. ಆದರೆ ಈಗ ಚೆರಿ ಗಿಡದ ರಕ್ತ ನನ್ನ ಧಮನಿಗಳಲ್ಲಿ ಹರಿಯುತ್ತಿದೆ ಮತ್ತು ಅದರೊಂದಿಗೆ ಹೋಲಿಸಲಾಗದ ಶಾಂತಿ ಹಾಗೂ ಶಕ್ತಿ ಇವು ಪ್ರವಹಿಸುತ್ತಿವೆ. ಚೆರಿ ಗಿಡದ ದೇಹ ಹಾಗೂ ಮಾನವ ದೇಹ ಇವುಗಳಲ್ಲಿ ಭೇದವೇನಿದೆ? ಸತ್ಯ ಹೇಳುವುದಾದರೆ ಯಾವ ಭೇದವೂ ಇಲ್ಲ, ಅವುಗಳಿಗೆ ಚೈತನ್ಯ ತುಂಬುವ ಪ್ರಜ್ಞೆ ಒಂದೇ ಆಗಿದೆ.

ಆಗ ಚೆರಿ ಗಿಡ ನನ್ನ ಕಿವಿಯಲ್ಲಿ ಪಿಸುಗೊಟ್ಟು ಹೇಳಿದ್ದು ಹೀಗಿದೆ: “ವಸಂತ ಋತುವಿನ ಅವ್ಯವಸ್ಥೆಗೆ ಉಪಾಯ ಚೆರಿ ಹೂವಿನಲ್ಲಿದೆ.”

**CWM, 1/364** **– ಶ್ರೀಮಾತೆ**

*



ಪ್ರತಿಯೊಂದೂ ಕೆಟ್ಟದ್ದಾಗುತ್ತಿದೆ, ಇನ್ನೂ ಹೆಚ್ಚು ಕೆಟ್ಟದ್ದಾಗುತ್ತ ಹೋಗುತ್ತದೆ ಎಂದು ತೋರಿಬರುವ ಕ್ಷಣದಲ್ಲಿಯೇ ನಾವು ನಂಬಿಕೆಯನ್ನಿರಿಸಿಕೊಳ್ಳಬೇಕು ಮತ್ತು ದೈವೀ ಕೃಪೆ ನಮ್ಮನ್ನು ಕೈಬಿಡುವುದಿಲ್ಲ ಎಂಬುದನ್ನು ತಿಳಿದು–ಕೊಂಡಿರಬೇಕು.

**CWM, 15/169** **– ಶ್ರೀಮಾತೆ**

*

# ಜ್ಞಾನದ ರೀತಿಯಲ್ಲಿ ನಂಬಿಕೆ

## ನಂಬಿಕೆ ಆತ್ಮದ ಸ್ವಯಂಪ್ರೇರಿತ ಜ್ಞಾನ

ಬಾಹ್ಯ ಪ್ರಜ್ಞೆಯ ಗ್ರಹಿಕೆ ಚೈತ್ಯದ ಗ್ರಹಿಕೆಯನ್ನು ನಿರಾಕರಿಸಬಹುದು, ಆದರೆ ಚೈತ್ಯಕ್ಕೆ ನಿಜವಾದ ಜ್ಞಾನವಿರುತ್ತದೆ, ಅದು ಅಂತರ್ಬೋಧೆಯ, ಹುಟ್ಟು ಸ್ವಭಾವದ ಜ್ಞಾನವಾಗಿರುತ್ತದೆ. ಅದು "ನನಗೆ ತಿಳಿದಿದೆ, ನಾನು ಕಾರಣಗಳನ್ನು ಕೊಡಲಾರೆ, ಆದರೆ ನನಗೆ ತಿಳಿದಿದೆ" ಎಂದು ಹೇಳುತ್ತದೆ. ಏಕೆಂದರೆ ಅದರ ಜ್ಞಾನ ಮನಸ್ಸಿನದಲ್ಲ, ಅನುಭವದ ಆಧಾರ ಪಡೆದು ಪ್ರಮಾಣೀಕರಿಸಿದ್ದಲ್ಲ. ಪ್ರಮಾಣಗಳನ್ನು ಒದಗಿಸಿದ ನಂತರ ಅದು ನೆಚ್ಚಿಕೊಳ್ಳುವುದಿಲ್ಲ: ನಂಬಿಕೆ ಆತ್ಮದ ಚಲನೆ, ಅದರ ಜ್ಞಾನ ಸ್ವಯಂಪ್ರೇರಿತ ಮತ್ತು ನೇರವಾದದ್ದು. ತನ್ನ ನಂಬಿಕೆಯನ್ನು ಇಡೀ ಜಗತ್ತು ನಿರಾಕರಿಸಿದಾಗಲೂ ಮತ್ತು ಅದರ ವಿರುದ್ಧ ಸಾವಿರಾರು ಪ್ರಮಾಣಗಳನ್ನು ಒದಗಿಸಿದರೂ, ಅದು ಆಂತರಿಕ ಜ್ಞಾನದ ಮೂಲಕ, ನೇರ ಗ್ರಹಿಕೆಯ ಮೂಲಕ ತಿಳಿದುಕೊಂಡಿರುತ್ತದೆ, ಅನನ್ಯತೆ(identity)ಯ ಮೂಲಕ ಉಂಟಾದ ಆ ಗ್ರಹಿಕೆ ಪ್ರತಿಯೊಂದರ ವಿರುದ್ಧ ನಿಲ್ಲಬಲ್ಲದು. ಚೈತ್ಯದ ಜ್ಞಾನ ಮೂರ್ತರೂಪದ್ದಾದ, ಸ್ಫುಟವಾದ (tangible) ಹಾಗೂ ಘನರೂಪದ ಮೊತ್ತದಂತಹ ಏನೋ ಒಂದು. ನೀವದನ್ನು ಮಾನಸಿಕ, ಪ್ರಾಣಿಕ ಹಾಗೂ ಭೌತಿಕವಾದವುಗಳಲ್ಲಿ ತಂದುಕೊಳ್ಳಬಹುದು ಮತ್ತು ಆಗ ನಿಮಗೆ ಸಮಗ್ರ ನಂಬಿಕೆ ಇರುತ್ತದೆ – ಆ ನಂಬಿಕೆ ನಿಜವಾಗಿ ಪರ್ವತಗಳನ್ನು ಚಲಿಸುವಂತೆ ಮಾಡಬಲ್ಲದು. ಆದರೆ ಸತ್ತೆಯಲ್ಲಿರುವ ಏನೋ ಒಂದು ಬಂದು "ಅದು ಹಾಗಿರುವುದಿಲ್ಲ" ಎಂದು ಹೇಳಬಾರದು, ಮತ್ತು ಅದನ್ನು ಪರೀಕ್ಷೆಗೆ ಒಳಪಡಿಸೆಂದು ಕೇಳಬಾರದು. ಕನಿಷ್ಠ ಮಟ್ಟದ ಅರ್ಧ ನಂಬಿಕೆಯಿಂದ ನೀವು ವಿಷಯಗಳನ್ನು ಹಾಳು ಮಾಡುತ್ತೀರಿ. ನಂಬಿಕೆ ಸಮಗ್ರವಾಗಿರದಿದ್ದರೆ, ಅಲುಗಾಡದಂತಿರದಿದ್ದರೆ ಪರಮೋಚ್ಚನು ತನ್ನನ್ನು ಪ್ರಕಟಪಡಿಸಿ ಹೇಗೆ ತೋರಿಸಬಲ್ಲ? ನಂಬಿಕೆ ತನ್ನಲ್ಲಿಯೇ ಸ್ವತಃ ಅಲುಗಾಡದಂತಿರುತ್ತದೆ – ಅದು ಅದರ ಸ್ವಭಾವ, ಹಾಗಿಲ್ಲದಿದ್ದರೆ ಅದು ನಂಬಿಕೆಯೇ ಅಲ್ಲ. ಆದರೆ ಮನಸ್ಸಾಗಲಿ, ಪ್ರಾಣಿಕವಾಗಲಿ ಇಲ್ಲವೆ ಭೌತಿಕವಾಗಲಿ ಚೈತ್ಯದ ಚಲನೆಯನ್ನು ಅನುಸರಿಸಲಾಗದಿರುವ ಸಂಭವವಿರುತ್ತದೆ. ಮನುಷ್ಯ ಯೋಗಿಯೊಬ್ಬನ ಬಳಿ ಹೋದಾಗ ಅವನನ್ನು ನೋಡಿ ಈ ವ್ಯಕ್ತಿ ನನ್ನನ್ನು ನನ್ನ ಗುರಿಯತ್ತ ಕರೆದೊಯ್ಯಬಲ್ಲ ಎಂಬ ನಂಬಿಕೆಯನ್ನು ಹಠಾತ್ತನೆ ಹೊಂದಬಲ್ಲ. ಆ

ವ್ಯಕ್ತಿಯಲ್ಲಿ ಜ್ಞಾನವಿದೆಯೋ ಇಲ್ಲವೋ ಎಂಬುದು ಆ ಮನುಷ್ಯನಿಗೆ ತಿಳಿದಿರುವುದಿಲ್ಲ. ಅವನಿಗೆ ಚೈತ್ಯಾತ್ಮಿಕ ಆಘಾತವುಂಟಾದುದರ ಭಾವನೆ ಬರುತ್ತದೆ, ಮತ್ತು ಅವನು ತನ್ನ ಗುರುವನ್ನು ಭೇಟಿ ಮಾಡಿದೆ ಎಂದು ತಿಳಿದುಕೊಳ್ಳುತ್ತಾನೆ. ದೀರ್ಘ ಕಾಲದ ಮಾನಸಿಕ ಪರಿಗಣನೆಯಿಂದ ಇಲ್ಲವೆ ಹಲವಾರು ಪವಾಡಗಳನ್ನು ನೋಡಿದ ನಂತರ ಅವನಲ್ಲಿ ನಂಬಿಕೆ ಉಂಟಾಗುವುದಿಲ್ಲ. ಮತ್ತು ಇದು ಮಾತ್ರ ಯೋಗ್ಯವಾದ ನಂಬಿಕೆಯಾಗಿರುತ್ತದೆ. ನೀವು ವಾದ ಮಾಡಲು ಪ್ರಾರಂಭಿಸಿದರೆ ನಿಮ್ಮ ಅದೃಷ್ಟದಿಂದ ಯಾವಾಗಲೂ ತಪ್ಪಿಸಿಕೊಳ್ಳುತ್ತೀರಿ.

**CWM, 3/152** **– ಶ್ರೀಮಾತೆ**

*

**ನಂಬಿಕೆ ತಪ್ಪು ದಾರಿ ಹಿಡಿಯುವಂತೆ ಮಾಡುವುದಿಲ್ಲ**

ಕುರುಡು ನಂಬಿಕೆ ಎಂದು ಕರೆಯಲಾದದ್ದರಿಂದ ಜನರು ತಪ್ಪು ದಾರಿ ಹಿಡಿಯುವಂತಾಗುವುದಿಲ್ಲ. ಅವರು ಬಹಳಷ್ಟು ಸಲ ಹೇಳುತ್ತಾರೆ: "ಓಹ್, ಈ ಅಥವಾ ಆ ಮನುಷ್ಯನನ್ನು ನಂಬಿದೆ, ಅವನು ನನಗೆ ದ್ರೋಹ ಮಾಡಿದ." ವಾಸ್ತವದಲ್ಲಿ ದೋಷ ಆ ಮನುಷ್ಯನಲ್ಲಿರುವುದಿಲ್ಲ. ದೋಷ ನಂಬಿಕೆಗೆ ಪಾತ್ರನಾದವನಲ್ಲಿರುವುದಿಲ್ಲ ಆದರೆ ನಂಬಿಕೊಂಡವನಲ್ಲಿರುತ್ತದೆ, ಅವನಲ್ಲಿಯೇ ಇರುವ ದೌರ್ಬಲ್ಯದಿಂದಾಗಿರುತ್ತದೆ. ಅವನು ತನ್ನ ನಂಬಿಕೆಯನ್ನು ಅಖಂಡ–ವಾಗಿರಿಸಿಕೊಂಡಿದ್ದರೆ ನಂಬಿಕೆಗೆ ಪಾತ್ರನಾದವನನ್ನು ಬದಲುಮಾಡಿ ಬಿಡುತ್ತಿದ್ದ. ಅವನು ಅದೇ ಬಗೆಯ ನಂಬಿಕೆಯ ಪ್ರಜ್ಞೆಯಲ್ಲಿ ಉಳಿದುಕೊಳ್ಳದೆ ಇದ್ದುದರಿಂದ ತನಗೆ ದ್ರೋಹವಾಯಿತೆಂದು ಕಂಡುಕೊಂಡ ಮತ್ತು ನಂಬಿಕೆಗೆ ಪಾತ್ರನಾಗಿದ್ದವನು ಏನಾಗಿರಲಿ ಎಂದು ಬಯಸಿದ್ದನೋ ಅದಾಗುವಂತೆ ಮಾಡಲಿಕ್ಕಾಗಲಿಲ್ಲ. ಅವನಲ್ಲಿ ಸಮಗ್ರ ನಂಬಿಕೆ ಇದ್ದರೆ ನಂಬಿಕೆಗೆ ಪಾತ್ರನಾದವನು ಬದಲಾಗಬೇಕಾದ ನಿರ್ಬಂಧಕ್ಕೆ ಒಳಗಾಗುತ್ತಿದ್ದ. ಯಾವಾಗಲೂ ನಂಬಿಕೆಯ ಮೂಲಕ ಪವಾಡಗಳು ಸಂಭವಿಸುತ್ತವೆ. ಮನುಷ್ಯನೊಬ್ಬ ಇನ್ನೊಬ್ಬನ ಬಳಿ ಹೋಗುತ್ತಾನೆ ಅವನಲ್ಲಿ ದೈವೀ ಸಾನ್ನಿಧ್ಯದ ಸಂಪರ್ಕ ಪಡೆಯುತ್ತಾನೆ, ಅವನು ಆ ಸಂಪರ್ಕವನ್ನು ಪರಿಶುದ್ಧವಾದ ಹಾಗೂ ಪೋಷಿಸಿಕೊಂಡು ಬರುವ ರೀತಿಯಲ್ಲಿ ಕಾಪಾಡಿಕೊಂಡು ಬರಬಲ್ಲನಾದರೆ ಅದು ದೈವೀ ಪ್ರಜ್ಞೆ ಅತ್ಯಂತ ಭೌತಿಕವಾದುದರಲ್ಲಿ ಪ್ರಕಟವಾಗುವಂತೆ ನಿರ್ಬಂಧ–ಕ್ಕೊಳಪಡಿಸುತ್ತದೆ. ಆದರೆ ಎಲ್ಲವೂ ನಿಮ್ಮದೇ ಮಾನದಂಡದ ಮೇಲೆ,

ನಿಷ್ಕಾಪಟ್ಯದ ಮೇಲೆ ಅವಲಂಬಿಸಿರುತ್ತದೆ; ಮತ್ತು ನೀವು ಹೆಚ್ಚಿನ ರೀತಿಯಲ್ಲಿ ಚೈತ್ಯಾತ್ಮಿಕವಾಗಿ ತಯಾರಾದ ಹಾಗೆ, ನಿಮ್ಮನ್ನು ಹೆಚ್ಚಿನ ರೀತಿಯಲ್ಲಿ ಮೂಲದತ್ತ ಹಾಗೂ ಸರಿಯಾದ ಗುರುವಿನತ್ತ ಕರೆದೊಯ್ಯಲಾಗುತ್ತದೆ. ಚೈತ್ಯ ಹಾಗೂ ಅದರ ನಂಬಿಕೆ ಯಾವಾಗಲೂ ನಿಷ್ಕಪಟವಾಗಿರುತ್ತವೆ, ಆದರೆ ನಿಮ್ಮ ಬಾಹ್ಯ ಸತ್ತೆಯಲ್ಲಿ ಕಾಪಟ್ಯವಿದ್ದರೆ, ಆಧ್ಯಾತ್ಮಿಕ ಜೀವನವನ್ನು ಅರಸದೆ ವೈಯಕ್ತಿಕ ಸಾಮರ್ಥ್ಯಗಳನ್ನು ಅರಸುತ್ತಿದ್ದರೆ ಅದು ನಿಮ್ಮನ್ನು ತಪ್ಪು ದಾರಿಗೆಳೆಯಬಹುದು, ನಿಮ್ಮ ನಂಬಿಕೆ ದಾರಿ ತಪ್ಪಿಸುವುದಿಲ್ಲ. ತನ್ನಲ್ಲಿಯೇ ಪರಿಶುದ್ಧವಾಗಿರುವ ನಂಬಿಕೆ ಸತ್ತೆಯಲ್ಲಿ ನಿಮ್ಮ ಚಲನೆಗಳೊಂದಿಗೆ ಮಿಶ್ರಣಕ್ಕೊಳಗಾಗಬಹುದು, ಆಗ ಮಾತ್ರ ನೀವು ತಪ್ಪು ದಾರಿ ಹಿಡಿಯುವಂತಾಗುತ್ತದೆ.

**CWM, 3/152–53** **– ಶ್ರೀಮಾತೆ**

*

**ಮನುಷ್ಯ ಮನಸ್ಸಿನಿಂದ ದಾಟಿ ನಂಬಿಕೆಯ ಪ್ರಾಂತದಲ್ಲಿ ಸಾಗಿಹೋಗಬೇಕು**

ಮನುಷ್ಯ ಸುರಕ್ಷಿತತೆಯಿಂದ ಕಾರ್ಯಕೈಕೊಳ್ಳಲು ಶಕ್ತನಾಗಬೇಕಾದರೆ ಅವನು ಮನಸ್ಸಿನಿಂದ ದಾಟಿ ನಂಬಿಕೆಯ ಇಲ್ಲವೆ ಉಚ್ಚತರ ಪ್ರಜ್ಞೆಯ ಪ್ರಾಂತದಲ್ಲಿ ಸಾಗಿಹೋಗಬೇಕು. ದೇಹದ ಮೇಲೆ ಕಾರ್ಯಕೈಕೊಳ್ಳಲು ಇರುವ ಅತ್ಯಂತ ಹೆಚ್ಚಿನ ಸಾಮರ್ಥ್ಯವಿರುವ ಸಾಧನಗಳಲ್ಲಿ ನಂಬಿಕೆಯೂ ಒಂದು ಎಂಬುದು ಸ್ಪಷ್ಟವಿದೆ. ಸರಳ ಹೃದಯವಿದ್ದ, ಬಹಳ ಸಂಕೀರ್ಣ ಮನಸ್ಸನ್ನು ಹೊಂದಿರದ ಸರಳ ಜನರು, ಬಹಳ ಶ್ರೇಷ್ಠ, ಬಹಳ ಸಂಕೀರ್ಣ ಮಾನಸಿಕ ಅಭಿವೃದ್ಧಿ ಹೊಂದಿರದೆ ಇರುವವರು, ಆದರೆ ಆಳವಾದ ನಂಬಿಕೆ ಹೊಂದಿದವರು ತಮ್ಮ ದೇಹದ ಮೇಲೆ ಕಾರ್ಯಕೈಕೊಳ್ಳಲು ಶ್ರೇಷ್ಠ ಸಾಮರ್ಥ್ಯವನ್ನು ಹೊಂದಿರುತ್ತಾರೆ. ಆ ಕಾರಣದಿಂದಾಗಿಯೇ ಮನುಷ್ಯ ಕೆಲವೊಮ್ಮೆ ಆಶ್ಚರ್ಯಚಕಿತನಾಗುತ್ತಾನೆ: "ಶ್ರೇಷ್ಠ ಸಿದ್ಧಿ ಪಡೆದ ಮನುಷ್ಯನೊಬ್ಬ ಇಲ್ಲಿದ್ದಾನೆ, ಅವನು ಅಸಾಧಾರಣ ವ್ಯಕ್ತಿ ಮತ್ತು ಅವನು ಅತ್ಯಂತ ಚಿಕ್ಕ ಭೌತಿಕ ವಿಷಯಗಳ ಗುಲಾಮನಾಗಿದ್ದಾನೆ, ಅದು ಹಾಗಿರುವಾಗ ಈ ಇನ್ನೊಬ್ಬ ಮನುಷ್ಯ ಎಷ್ಟೊಂದು ಸರಳನಾಗಿದ್ದಾನೆ, ಎಷ್ಟೊಂದು ಅಸಂಸ್ಕೃತನಾಗಿರುವಂತೆ ಕಂಡುಬರುತ್ತಾನೆ, ಆದರೆ ಅವನಲ್ಲಿ ಶ್ರೇಷ್ಠ ನಂಬಿಕೆಯಿದೆ, ಅವನು ಅಡೆತಡೆಗಳು ಹಾಗೂ ತೊಂದರೆಗಳಾದ್ಯಂತ ಜಯಶಾಲಿಯ ಹಾಗೆ ಸಾಗಿಹೋಗುತ್ತಾನೆ!"

ಅತ್ಯಂತ ಸುಸಂಸ್ಕೃತನಾದ ಮನುಷ್ಯ ನಂಬಿಕೆಯನ್ನು ಹೊಂದಿರುವುದು ಸಾಧ್ಯವಿಲ್ಲ ಎಂದು ನಾನು ಹೇಳುತ್ತಿಲ್ಲ, ಆದರೆ ಅದು ಹೆಚ್ಚು ಕಠಿಣವಾದದ್ದು, ವಿರೋಧಿಸುವ, ಚರ್ಚೆ ಮಾಡುವ, ಅರ್ಥಮಾಡಿಕೊಳ್ಳಲು ಪ್ರಯತ್ನ ಮಾಡುವ ಮಾನಸಿಕ ಅಂಶ ಅವನಲ್ಲಿ ಯಾವಾಗಲೂ ಇದ್ದೇ ಇರುತ್ತದೆ. ಅದಕ್ಕೆ ಮನವರಿಕೆ ಮಾಡಿಕೊಡುವುದು ಕಷ್ಟಕರವಾದದ್ದು, ಅದಕ್ಕೆ ಪ್ರಮಾಣಗಳು ಬೇಕಾಗಿರುತ್ತವೆ. ಅವನ ನಂಬಿಕೆ ಕಡಿಮೆ ಪರಿಶುದ್ಧವಾಗಿರುತ್ತದೆ. ಹಾಗಾಗಿ ಉತ್ಕ್ರಾಂತಿಯ ಸುರುಳಿಯಲ್ಲಿ ಉಚ್ಚತರ ದರ್ಜೆಯತ್ತ, ಮಾನಸಿಕವಾದುದರಿಂದ ಆಧ್ಯಾತ್ಮಿಕ–ವಾದುದರತ್ತ ಸಾಗಿಹೋಗುವುದು ಅವಶ್ಯವಾಗಿರುತ್ತದೆ. ಆಗ ಸ್ವಾಭಾವಿಕವಾಗಿ ನಂಬಿಕೆ ಉಚ್ಚಮಟ್ಟದ ಗುಣಲಕ್ಷಣವನ್ನು ಪಡೆಯುತ್ತದೆ. ಸರ್ವಸಾಧಾರಣ ದೈನಂದಿನ ಜೀವನದಲ್ಲಿ, ಉತ್ಸಾಹಪೂರ್ಣ ನಂಬಿಕೆಯನ್ನು ಹೊಂದಿದ ಮನುಷ್ಯ ತನ್ನ ದೇಹದ ಮೇಲೆ ಪ್ರಭುತ್ವ ಪಡೆಯಬಲ್ಲ – ಅದು ನಿಜವಾಗಿಯೂ ಪ್ರಭುತ್ವ ಆಗಿರಲಿಕ್ಕಿಲ್ಲ, ಕೇವಲ ಸ್ವಯಂಪ್ರೇರಿತ ಚಲನೆ – ತನ್ನ ದೇಹದ ಮೇಲೆ ಹೊಂದಿರುವ ನಿಯಂತ್ರಣ. ಈ ನಿಯಂತ್ರಣ ಉಚ್ಚತರ ಅಭಿವೃದ್ಧಿಯನ್ನು ತಲುಪಿದವನಲ್ಲಿ ಇರುವುದಕ್ಕಿಂತ ಶ್ರೇಷ್ಠತರವಾಗಿರುತ್ತದೆ – ಇದು ನಾನು ಹೇಳುತ್ತಿರುವುದರ ಅರ್ಥ.

**CWM, 9/126** **– ಶ್ರೀಮಾತೆ**

*

## ದೃಢ ನಂಬಿಕೆಯನ್ನು ಅಂತರಂಗದಲ್ಲಿ ಕಂಡುಕೊಳ್ಳಿರಿ

ತಾವು ಹೇಳಿದ ಹಾಗೂ ಭವಿಷ್ಯ ನುಡಿದ ಸತ್ಯಕ್ಕೆ, ಅದನ್ನು ಸಿದ್ಧಿಸಿಕೊಳ್ಳುವವರೆಗೆ ಖಂಡಿಸಲಾಗದ ಪ್ರಮಾಣಗಳಿರುವುದಿಲ್ಲ, ಪ್ರತಿಯೊಂದನ್ನೂ ಸಿದ್ಧಿಸಿಕೊಂಡಾಗ ಮಾತ್ರ, ನಂಬಲು ತಿರಸ್ಕರಿಸುವ ಜನರು ತಮ್ಮ ತಪ್ಪನ್ನು ಗುರುತಿಸುವ ನಿರ್ಬಂಧಕ್ಕೊಳಗಾಗುತ್ತಾರೆ ಎಂದು ಶ್ರೀ ಅರವಿಂದರು ಹಲವಾರು ಸಲ ಹೇಳಿದ್ದಾರೆ – ಆದರೆ ಬಹುಶಃ ಅದನ್ನು ಕೈಕೊಳ್ಳಲು ಅವರಲ್ಲಿರುವುದಿಲ್ಲ! ಹಾಗಾಗಿ ಕೈಕೊಳ್ಳಬೇಕಾದ ವಿಷಯ ಒಂದೇ ಆಗಿದೆ: ಮನುಷ್ಯ ತನ್ನ ಮಾರ್ಗದ ಮೇಲೆ ಮುಂದುವರಿದುಕೊಂಡು ಹೋಗಬೇಕು, ತನ್ನ ನಂಬಿಕೆ ಹಾಗೂ ದೃಢ ವಿಶ್ವಾಸಗಳನ್ನು ಕಾಪಾಡಿಕೊಂಡಿರಬೇಕು, ವೈರುಧ್ಯಗಳಿಗೆ ಹಾಗೂ ನಿರಾಕರಣೆಗಳಿಗೆ ಲಕ್ಷ್ಯಗೊಡಬಾರದು. ಇತರರ ಆಧಾರ, ವಿಶ್ವಾಸ ಹಾಗೂ ದೃಢ ನಂಬಿಕೆಗಳ

ಆವಶ್ಯಕತೆ ಇರುವ ಜನರಿರುತ್ತಾರೆ, ಅವುಗಳಿಂದಾಗಿ ಅವರು ಸಮಾಧಾನ ಪಡೆಯುತ್ತಾರೆ, ಆರಾಮಾಗಿರುತ್ತಾರೆ. – ಅವರು ಯಾವಾಗಲೂ ಅಸಂತುಷ್ಟ–ರಾಗಿರುತ್ತಾರೆ, ಏಕೆಂದರೆ, ಸ್ವಾಭಾವಿಕವಾಗಿ, ನಂಬಿಕೆಯಿಲ್ಲದ ಜನರು ಅವರೆದುರಿಗೆ ಬರುತ್ತಾರೆ, ಹಾಗಾಗಿ ಅವರು ಅಸ್ತವ್ಯಸ್ತರಾಗುತ್ತಾರೆ, ತೊಂದರೆಗೊಳಗಾಗುತ್ತಾರೆ. ಮನುಷ್ಯ ದೃಢ ನಂಬಿಕೆಯನ್ನು ತನ್ನಂತರಂಗದಲ್ಲಿ ಕಂಡುಕೊಳ್ಳಬೇಕು, ಪ್ರತಿಯೊಂದು ಇದ್ದಾಗಲೂ ಅದನ್ನು ಕಾಪಾಡಿಕೊಂಡು ಬರಬೇಕು ಮತ್ತು ಎಷ್ಟೇ ಬೆಲೆ ತೆತ್ತಾದರೂ, ಕೊನೆಯವರೆಗೆ ತನ್ನ ದಾರಿಯ ಮೇಲೆ ಸಾಗಬೇಕು. ಬಹಳ ತಾಳ್ಮೆಯಿದ್ದವನಿಗೆ ಜಯ ದೊರಕುತ್ತದೆ. ಎಲ್ಲ ವೈರುಧ್ಯಗಳಿದ್ದಾಗ್ಯೂ ಮನುಷ್ಯ ತನ್ನ ತಾಳ್ಮೆಯನ್ನು ಉಳಿಸಿಕೊಳ್ಳಲು ಆಧಾರ ಅಲುಗಾಡದಂತಿರಬೇಕು, ಕೇವಲ ಒಂದು ಆಧಾರ ಅಲುಗಾಡದಂತಿದೆ, ಅದು ದೈವೀ ನೈಜತೆಯ, ಪರಮೋಚ್ಚ ದೈವೀ ಸತ್ಯದ ಆಧಾರ.

ಬೇರೆ ಆಧಾರವನ್ನು ನೋಡಬಯಸುವುದು ನಿರುಪಯುಕ್ತವಾದದ್ದು. ಎಂದೆಂದಿಗೂ ವಿಫಲವಾಗದ ಆಧಾರ ಇದೊಂದೇ.

**CWM, 9/255** – **ಶ್ರೀಮಾತೆ**

*

**ನಂಬಿಕೆ – ದೈವೀ ಕೃಪೆಯ ಒಂದು ಕೊಡುಗೆ**

ನಿಶ್ಚಿತವಾಗಿ ನಂಬಿಕೆ ದೈವೀ ಕೃಪೆ ನಮಗೆ ಒದಗಿಸಿದ ಒಂದು ಕೊಡುಗೆ. ಅದು ಸನಾತನ ಸತ್ಯದ ಮೇಲೆ ಹಠಾತ್ತನೆ ತೆರೆದುಕೊಂಡ ಒಂದು ದ್ವಾರವಿದ್ದ ಹಾಗಿದೆ, ಅದರ ಮೂಲಕ ಆ ಸತ್ಯವನ್ನು ನೋಡಬಹುದು, ಬಹುಮಟ್ಟಿಗೆ ಸ್ಪರ್ಶಿಸಬಹುದು.

ಬೇರೆ ಪ್ರತಿಯೊಂದರಲ್ಲಿ ಇರುವ ಹಾಗೆ ಮನುಕುಲದ ಆರೋಹಣದಲ್ಲಿ – ವಿಶೇಷವಾಗಿ ಪ್ರಾರಂಭಿಕ ಹಂತದಲ್ಲಿ – ವೈಯಕ್ತಿಕ ಪ್ರಯತ್ನದ ಆವಶ್ಯಕತೆ ಇದೆ. ಕೆಲವೊಂದು ಅಸಾಧಾರಣ ಪರಿಸ್ಥಿತಿಗಳಲ್ಲಿ, ನಮ್ಮ ಬುದ್ಧಿಮತ್ತೆಯನ್ನು ಉಪಾಯವಾಗಿ ಸಂಪೂರ್ಣ ರೀತಿಯಲ್ಲಿ ತಪ್ಪಿಸಿಕೊಳ್ಳುತ್ತದೆ ಎಂಬ ಕಾರಣಗಳಿಂದಾಗಿ, ನಂಬಿಕೆ, ಬಹುಮಟ್ಟಿಗೆ, ಅಕಸ್ಮಾತ್ತಾಗಿ, ಬಹಳ ಅನಿರೀಕ್ಷಿತವಾಗಿ ಬರಬಹುದು, ಅದು ಎಂದಾದರೂ ಬರಲಿ ಎಂದು ಕೋರಿಕೊಂಡಿರದೆ

ಇರಬಹುದು, ಆದರೆ ಮೇಲಿಂದ ಮೇಲೆ ಅದು ಹಾತೊರೆತಕ್ಕೆ, ಆವಶ್ಯಕತೆಗೆ, ಅಭೀಪ್ಸೆಗೆ, ಸತ್ತೆಯಲ್ಲಿ ಅರಸುತ್ತಿರುವ, ಬಯಸುತ್ತಿರುವ ಏನೋ ಒಂದಕ್ಕೆ ಉತ್ತರ ನೀಡುವ ರೀತಿಯಲ್ಲಿ ಬರಬಹುದು, ಆದಾಗ್ಯೂ ಅದು ಪ್ರಜ್ಞಾಪೂರ್ಣವಾದ ಮತ್ತು ವ್ಯವಸ್ಥಿತಗೊಳಿಸಿದ ರೀತಿಯಲ್ಲಿರುವುದಿಲ್ಲ. ಆದರೆ ಸಂದರ್ಭ ಯಾವುದೇ ಇರಲಿ, ನಂಬಿಕೆಯನ್ನು ಅನುಗ್ರಹಿಸಿದಾಗ, ಮನುಷ್ಯ ಹಠಾತ್ತನೆ ಆಂತರಿಕ ಪ್ರಕಾಶವನ್ನು ಪಡೆದಾಗ ಅದನ್ನು ಸತತ ಕ್ರಿಯಾಶೀಲ ಪ್ರಜ್ಞೆಯಲ್ಲಿ ಕಾಪಾಡಿಕೊಂಡು ಬರಲು ವೈಯಕ್ತಿಕ ಪ್ರಯತ್ನ ಒಟ್ಟಿನಲ್ಲಿ ಅತ್ಯಗತ್ಯದ್ದಾಗಿರುತ್ತದೆ. ಮನುಷ್ಯ ತನ್ನ ನಂಬಿಕೆಯನ್ನು ಗಟ್ಟಿಯಾಗಿ ಹಿಡಿದಿಟ್ಟುಕೊಳ್ಳಬೇಕು, ತನ್ನ ನಂಬಿಕೆಗಾಗಿ ಸಂಕಲ್ಪ ಮಾಡಬೇಕು, ಅದನ್ನು ಅರಸಬೇಕು, ರೂಢಿಸಿಕೊಳ್ಳಬೇಕು, ರಕ್ಷಿಸಬೇಕು. ಮನುಷ್ಯನ ಮನಸ್ಸಿನಲ್ಲಿ ಸಂಶಯಪಡುವ, ವಾದ ಮಾಡುವ, ಸಂದೇಹವಾದದ ರೋಗಗ್ರಸ್ತ ಹಾಗೂ ಶೋಚನೀಯ ರೂಢಿಯಿರುತ್ತದೆ. ಇಲ್ಲಿಯೇ ಮನುಷ್ಯ ತನ್ನ ಪ್ರಯತ್ನವನ್ನಿರಿಸಬೇಕು: ಅವುಗಳಿಗೆ ಒಪ್ಪಿಗೆ ನೀಡುವುದನ್ನು ನಿರಾಕರಿಸುವುದು, ಕಿವಿಗೊಡುವುದನ್ನು, ಇನ್ನೂ ಹೆಚ್ಚಿನದಾಗಿ ಅವುಗಳನ್ನು ಅನುಸರಿಸುವುದನ್ನು ನಿರಾಕರಿಸುವುದು. ಮಾನಸಿಕವಾಗಿ ಸಂಶಯ ಹಾಗೂ ಸಂದೇಹವಾದ ಇವುಗಳೊಡನೆ ಆಟವಾಡುವುದಕ್ಕಿಂತ ಹೆಚ್ಚು ಅಪಾಯಕಾರಿ ಕ್ರೀಡೆ ಬೇರೊಂದಿಲ್ಲ. ಅವು ಶತ್ರುಗಳಷ್ಟೇ ಅಲ್ಲ, ಸಂದೇಹ ಹುಟ್ಟಿಸದ ಭಯಾನಕ ಪ್ರಲೋಭನೆ–ಗಳಾಗಿರುತ್ತವೆ. ಮತ್ತು ಒಮ್ಮೆ ಮನುಷ್ಯ ಅವುಗಳಲ್ಲಿ ಪತನಗೊಂಡರೆ ತನ್ನನ್ನು ಅವುಗಳಿಂದ ಹೊರಗೆಳೆದುಕೊಂಡು ಬರುವುದು ಅತ್ಯಂತ ಕಠಿಣವಾಗುತ್ತದೆ. ಕೆಲವು ಜನರು ವಿಚಾರಗಳೊಡನೆ ಆಟವಾಡುವುದು, ಅವುಗಳನ್ನು ಕುರಿತು ಚರ್ಚೆ ಮಾಡುವುದು, ತಮ್ಮ ನಂಬಿಕೆಯನ್ನು ವಿರೋಧಿಸುವುದು ಇದೆಲ್ಲ ಮನಸ್ಸಿನ ಬಹಳ ಶ್ರೇಷ್ಠ ಅಭಿರುಚಿ (elegance) ಎಂದು ಯೋಚಿಸುತ್ತಾರೆ. ಇದು ತಮಗೆ ಬಹಳ ಉಚ್ಚ ಮನೋಭಾವ ಕೊಡುತ್ತದೆ ಮತ್ತು ಈ ರೀತಿಯಲ್ಲಿ ತಾವು ಎಲ್ಲ 'ಮೂಢ ನಂಬಿಕೆಗಳ' ಮೇಲೆ 'ಅಜ್ಞಾನದ' ಮೇಲಿದ್ದೇವೆ ಎಂದು ಅವರು ಯೋಚಿಸುತ್ತಾರೆ. ಆದರೆ ನೀವು ಸಂಶಯ ಹಾಗೂ ಸಂದೇಹವಾದಗಳು ನೀಡುವ ಸೂಚನೆಗಳಿಗೆ ಕಿವಿಗೊಟ್ಟರೆ ಆಗ ಅತ್ಯಂತ ದಟ್ಟ ಅಜ್ಞಾನದಲ್ಲಿ ಬಿದ್ದು ಬಿಡುತ್ತೀರಿ ಮತ್ತು ಸರಿಯಾದ ಮಾರ್ಗವನ್ನು ತಪ್ಪಿಸಿಕೊಳ್ಳುತ್ತೀರಿ. ಗೊಂದಲ, ದೋಷ, ವೈರುಧ್ಯಗಳ

ಜಟಿಲ ಮಾರ್ಗಜಾಲ ಇವೆಲ್ಲವುಗಳಲ್ಲಿ ಪ್ರವೇಶಿಸುತ್ತೀರಿ. ನೀವು ಅದರಿಂದ ಹೊರಗೆ ಬರಬಹುದೆಂಬುದರ ಬಗ್ಗೆ ನಿಮಗೆ ನಿಶ್ಚಿತತೆ ಇರುವುದಿಲ್ಲ. ನೀವು ಸತ್ಯದಿಂದ ಎಷ್ಟು ದೂರ ಹೋಗಿಬಿಡುವಿರೆಂದರೆ ನೀವು ಅದರ ಬಗೆಗಿನ ದೃಷ್ಟಿಯನ್ನು ಕಳೆದುಕೊಳ್ಳುತ್ತೀರಿ ಮತ್ತು ಕೆಲವೊಮ್ಮೆ ನಿಮ್ಮ ಆತ್ಮದೊಂದಿಗೆ ಸಾಧ್ಯವಾಗುವ ಎಲ್ಲ ಸಂಪರ್ಕವನ್ನು ಕೂಡ ಕಳೆದುಕೊಳ್ಳುತ್ತೀರಿ.

**CWM, 9/351–52** **– ಶ್ರೀಮಾತೆ**

*

**ನಂಬಿಕೆ ಹಾಗೂ ವಿಶ್ವಾಸ**

**ಪ್ರಶ್ನೆ :** *ಮನುಷ್ಯ ಭಗವಂತನಲ್ಲಿ ನಂಬಿಕೆ ಹೊಂದಿದ್ದಾನೆ ಹಾಗೂ ವಿಶ್ವಾಸವಿರಿಸಿ–ಕೊಂಡಿದ್ದಾನೆ ಎಂಬುದಿರುವಾಗ ನಂಬಿಕೆ ಮತ್ತು ವಿಶ್ವಾಸ ಇವುಗಳಲ್ಲಿ ಭೇದವೇನಿರುತ್ತದೆ.*

**ಶ್ರೀಮಾತೆ :** ನಂಬಿಕೆ ಹೆಚ್ಚು ಸಮಗ್ರವಾದ ಏನೋ ಒಂದು – ಹೀಗೆಂದು ಶ್ರೀ ಅರವಿಂದರು ಬರೆದಿದ್ದಾರೆ – ವಿಶ್ವಾಸಕ್ಕಿಂತ ಹೆಚ್ಚು ಸಮಗ್ರವಾದದ್ದು. ನಿಮಗೆ ಭಗವಂತನಲ್ಲಿ ವಿಶ್ವಾಸವಿದೆ, ಯಾವ ಅರ್ಥದಲ್ಲಿ ಎಂದರೆ ಅವನಿಂದ ಬರುವುದೆಲ್ಲ ಅತ್ಯಂತ ಒಳ್ಳೆಯದಕ್ಕಾಗಿರುತ್ತದೆ, ಅವನ ನಿರ್ಣಯ ಏನೇ ಇರಲಿ, ನಿಮಗೆ ಕಳಿಸಿಕೊಡುವ ಅನುಭವ ಏನೇ ಆಗಿರಲಿ, ಅದು ಯಾವಾಗಲೂ ನಿಮಗೆ ಅತ್ಯಂತ ಒಳ್ಳೆಯದಕ್ಕಾಗಿ ಇರುತ್ತದೆ. ಇದು ವಿಶ್ವಾಸ. ಆದರೆ ನಂಬಿಕೆ – ಭಗವಂತನ ಅಸ್ತಿತ್ವದಲ್ಲಿ ಆ ಬಗೆಯ ಅಲುಗಾಡದ ದೃಢ ನಂಬಿಕೆ – ನಂಬಿಕೆ ನಿಮ್ಮ ಇಡೀ ಸತ್ತೆಯನ್ನು ಇಡಿಯಾಗಿ ಹಿಡಿದುಕೊಳ್ಳುವ ಏನೋ ಒಂದು. ನಂಬಿಕೆ, ನೇರವಾಗಿ ಅನುಭವದತ್ತ ಕರೆದೊಯ್ಯುತ್ತದೆ.

**CWM, 6/121–25** **– ಶ್ರೀಮಾತೆ**

*

ದೈವೀ ಕೃಪೆ ನಮ್ಮೊಂದಿಗಿದೆ, ತೋರಿಕೆಗಳು ಅಂಧಕಾರದಿಂದ ಕೂಡಿದ್ದರೂ ಅದು ನಮ್ಮನ್ನು ಎಂದಿಗೂ ಬಿಟ್ಟು ಹೋಗುವುದಿಲ್ಲ.

**CWM, 14/88** **– ಶ್ರೀಮಾತೆ**

*



ನೀನು ಏಕಾಕಿಯಾಗಿಲ್ಲ ಎಂಬುದನ್ನು ಎಂದಿಗೂ ಮರೆಯದಿರು. ನಿನಗೆ ಸಹಾಯ ಮಾಡುತ್ತ, ಮಾರ್ಗದರ್ಶನ ಮಾಡುತ್ತ ಭಗವಂತ ನಿನ್ನ ಜೊತೆಗಿದ್ದಾನೆ. ಅವನು ಎಂದಿಗೂ ವಿಫಲನಾಗದ ಜೊತೆಗಾರ, ಅವನ ಪ್ರೇಮ ಸಮಾಧಾನ ನೀಡುತ್ತದೆ, ಮತ್ತು ಬಲಪಡಿಸುತ್ತದೆ. ನಂಬಿಕೆ ಹೊಂದಿರು, ಅವನು ನಿನಗಾಗಿ ಎಲ್ಲವನ್ನೂ ಕೈಕೊಳ್ಳುತ್ತಾನೆ.

**CWM, 14/9** **– ಶ್ರೀಮಾತೆ**

*

# ನಂಬಿಕೆಯ ಸಾಮರ್ಥ್ಯ

## ನಿಜವಾಗಿ ಜೀವಂತವಿರುವ ನಂಬಿಕೆಯ ಸಾಮರ್ಥ್ಯ

ಪ್ರತಿಯೊಂದು ಕ್ಷಣ ಮೊದಲು ಕಂಡುಕೊಂಡಿರದ, ಅನಿರೀಕ್ಷಿತವಾದ, ಅಪರಿಚಿತವಾದ ಎಲ್ಲವೂ ನಮ್ಮೆದುರಿಗಿರುತ್ತದೆ. ಪ್ರತಿಯೊಂದು ಕ್ಷಣದಲ್ಲಿ ವಿಶ್ವ ಅದರ ಇಡಿಯಾದುದರಲ್ಲಿ ಮತ್ತು ಅದರ ಭಾಗಗಳ ಪ್ರತಿಯೊಂದರಲ್ಲಿ ಮರುಸೃಷ್ಟಿಯಾಗುತ್ತಿರುತ್ತದೆ. ನಿಜವಾಗಿ ಜೀವಂತವಿರುವ ನಂಬಿಕೆ ನಮ್ಮಲ್ಲಿದ್ದರೆ, ಪ್ರಭು, ನಿನ್ನ ಸರ್ವಶಕ್ತತೆ ಮತ್ತು ನಿನ್ನ ಏಕೈಕ ನೈಜತೆ ಇವುಗಳ ಬಗ್ಗೆ ಖಂಡಿತ ಭಾವನೆಯಿದ್ದರೆ, ಪ್ರತಿಕ್ಷಣ ನಿನ್ನ ಪ್ರಕಟಣೆ ಎಷ್ಟೊಂದು ಸ್ಪಷ್ಟವಾಗುತ್ತದೆಂದರೆ, ಅದರಿಂದಾಗಿ ಇಡೀ ವಿಶ್ವ ಪರಿವರ್ತನೆಗೊಳಗಾಗುವುದು. ಆದರೆ ನಾವು ನಮ್ಮ ಸುತ್ತಲಿರುವ ಪ್ರತಿಯೊಂದಕ್ಕೆ ಮತ್ತು ನಮ್ಮೆದುರು ಸಂಭವಿಸಿದ್ದುದರ ಬಗ್ಗೆ ಎಷ್ಟೊಂದು ಗುಲಾಮರಾಗಿರುವೆವೆಂದರೆ, ನಾವು ಪ್ರಕಟವಾಗಿರುವ ಇಡಿಯಾದು–ದರಿಂದ ಎಷ್ಟೊಂದು ಪ್ರಭಾವಿತರಾಗಿರುವೆವೆಂದರೆ ಮತ್ತು ನಮ್ಮ ನಂಬಿಕೆ ಎಷ್ಟೊಂದು ದುರ್ಬಲವಾಗಿದೆಯೆಂದರೆ ರೂಪಪರಿವರ್ತನೆಯ ಶ್ರೇಷ್ಠ ಪವಾಡಕ್ಕೆ ಮಧ್ಯವರ್ತಿಗಳೆಂದು ಸೇವೆ ಸಲ್ಲಿಸಲು ನಾವಿನ್ನೂ ಶಕ್ತರಾಗಿಲ್ಲ. ಆದರೆ ದೈವೀ ಪ್ರಭು, ಅದು ಒಂದು ದಿನ ಬರಲಿದೆ ಎಂಬುದು ನನಗೆ ತಿಳಿದಿದೆ. ನಮ್ಮೆಡೆಗೆ ಬರುವ ಎಲ್ಲರನ್ನೂ ನೀನು ಪರಿವರ್ತಿಸುವ ದಿನ ಬರಲಿದೆ ಎಂಬುದು ನನಗೆ ತಿಳಿದಿದೆ. ನೀನು ಅವರನ್ನು ನೀನು ಎಷ್ಟೊಂದು ಮೂಲಭೂತವಾಗಿ ಪರಿವರ್ತಿಸುವೆ ಎಂದರೆ ಗತಕಾಲದ ಬಂಧನಗಳಿಂದ ಸಂಪೂರ್ಣವಾಗಿ ಮುಕ್ತರಾದ ಅವರು ನಿನ್ನಲ್ಲಿ ಇಡಿಯಾದ ಹೊಸ ಜೀವನವನ್ನು ಜೀವಿಸಲು ಪ್ರಾರಂಭಿಸುತ್ತಾರೆ, ಆ ಜೀವನವನ್ನು ನೀನೇ ಮಾಡಿರುತ್ತೀ, ನೀನೇ ಅದರ ಸಾರ್ವಭೌಮ ಪ್ರಭುವಾಗಿರುತ್ತೀ. ಮತ್ತು ಈ ರೀತಿಯಲ್ಲಿ ತಳಮಳಗಳು ಪ್ರಶಾಂತತೆಯಾಗಿ, ಎಲ್ಲ ಕಡು ಸಂಕಟ ಶಾಂತಿಯಾಗಿ, ಎಲ್ಲ ಸಂಶಯಗಳು ದೃಢ ನಂಬಿಕೆಯಾಗಿ, ಎಲ್ಲ ಕುರೂಪ ಸಾಮರಸ್ಯವಾಗಿ, ಎಲ್ಲ ಅಹಂಕಾರ ಸ್ವ–ಸಮರ್ಪಣೆಯಾಗಿ, ಎಲ್ಲ ಅಂಧಕಾರ ಪ್ರಕಾಶವಾಗಿ ಮತ್ತು ಎಲ್ಲ ವೇದನೆ ಬದಲಾಗದ ಸಂತೋಷವಾಗಿ ಪರಿವರ್ತನೆ ಹೊಂದುತ್ತವೆ. ಆದರೆ ಈಗಾಗಲೇ ನೀನು ಈ ಪವಾಡವನ್ನು ಮಾಡಿ ತೋರಿಸುತ್ತಿರುವಿಯಲ್ಲವೆ? ಅದು ಎಲ್ಲೆಡೆಯಲ್ಲಿ ನಮ್ಮ ಸುತ್ತಲೂ ಅರಳಿಕೊಳ್ಳುತ್ತಿದೆ. ಸೌಂದರ್ಯ ಹಾಗೂ ಪ್ರೇಮಗಳ ಓ ದೈವೀ

ನಿಯಮವೆ, ಪರಮೋಚ್ಚ ಮುಕ್ತದಾಯಕವಾದದ್ದೇ, ನಿನ್ನ ದೈವೀ ಸಾಮರ್ಥ್ಯಕ್ಕೆ ಯಾವ ಅಡೆತಡೆಯೂ ಇಲ್ಲ. ಸಮಾಧಾನ ನೀಡುವ ನಿನ್ನ ಸತತ ವಿಜಯದ ದೃಶ್ಯವನ್ನು ಕೇವಲ ನಮ್ಮ ಕುರುಡುತನ ನಮ್ಮಿಂದ ಕಿತ್ತುಕೊಳ್ಳುತ್ತದೆ.

ನನ್ನ ಹೃದಯ ಸಂತೋಷದ ಸ್ತೋತ್ರವನ್ನು ಹಾಡಿ ಹೇಳುತ್ತದೆ, ನನ್ನ ಯೋಚನೆ ಸಂತೋಷದಿಂದ ಪ್ರಕಾಶಿತವಾಗಿದೆ. ನಿನ್ನ ವಿಶ್ವಾತೀತ ಮತ್ತು ಅದ್ಭುತ ಪ್ರೇಮ ಜಗತ್ತಿನ ಸಾರ್ವಭೌಮ ದೈವೀ ಪ್ರಭುವಾಗಿದೆ.

**CWM, 1/54–55** **– ಶ್ರೀಮಾತೆ**

*

**ಪರಿಶುದ್ಧ ನಂಬಿಕೆಯು ಸರ್ವಸಾಮರ್ಥ್ಯಪೂರ್ಣವಾದ ಹಾಗೂ ಪ್ರತಿರೋಧಿಸಲಾಗದ ಏನೋ ಒಂದು**

ಮನುಷ್ಯ ಪರಿಪೂರ್ಣವಾಗಿ ಪರಿಶುದ್ಧವಾಗಿರುವ ನಂಬಿಕೆಯನ್ನು ಹೊಂದ–ಬಲ್ಲನಾದರೆ, ಅದು ನಿಜವಾದ ನಂಬಿಕೆಯಾಗಿರಬೇಕು, ಸರಿ, ಆಗ ಯಾವುದೂ ಅಸಾಧ್ಯವಾಗುವುದಿಲ್ಲ. ಮನುಷ್ಯ ದಿನ ಬೆಳಗಾಗುವುದರಲ್ಲಿ ಪರಿವರ್ತನೆ ಹೊಂದಬಲ್ಲ, ಒಂದು ಕ್ಷಣದಲ್ಲಿ ಅತಿಮನಸ್ಸನ್ನೂ ಕೆಳಗಿಳಿಸಿ ತರಬಲ್ಲ. ಮನುಷ್ಯನಲ್ಲಿ ನಂಬಿಕೆ ಇದ್ದರೆ ಅವನು ಏನನ್ನಾದರೂ ಕೈಕೊಳ್ಳಬಲ್ಲ, ಆದರೆ ಆ ನಂಬಿಕೆ ಪರಿಶುದ್ಧವಾಗಿರಬೇಕು, ಅದರಲ್ಲಿ ವೈಯಕ್ತಿಕ ಪ್ರತಿಕ್ರಿಯೆಗಳು ಇಲ್ಲವೆ ಯಾವುದೇ ವೈಯಕ್ತಿಕ ಸಂಕಲ್ಪ ಮಿಶ್ರಣಕ್ಕೊಳಗಾಗಿರಬಾರದು.

ಪರಿಶುದ್ಧ ನಂಬಿಕೆಯು ಸರ್ವಸಾಮರ್ಥ್ಯವುಳ್ಳ ಮತ್ತು ಪ್ರತಿರೋಧಿಸಲಾಗದ ಏನೋ ಒಂದು. ಮನುಷ್ಯ ಬಹಳಷ್ಟು ಸಲ ಸರ್ವಸಾಮರ್ಥ್ಯವುಳ್ಳ ಹಾಗೂ ಪ್ರತಿರೋಧಿಸಲಾಗದ ನಂಬಿಕೆಯನ್ನು ಕಂಡುಕೊಳ್ಳುವುದಿಲ್ಲ, ಇದು ನಂಬಿಕೆ ಸಾಕಷ್ಟು ಪರಿಶುದ್ಧವಾಗಿರುವುದಿಲ್ಲ ಎಂಬುದನ್ನು ತೋರಿಸಿಕೊಡುತ್ತದೆ. ಪ್ರಶ್ನೆಯನ್ನು ಈ ರೀತಿ ಕೇಳಬಹುದು: ನಮ್ಮಲ್ಲಿ ಪ್ರತಿಯೊಬ್ಬನಲ್ಲಿ ಒಂದು ನಂಬಿಕೆ ಇರುತ್ತದೆ, ಉದಾಹರಣೆಗೆ ನಮ್ಮೊಳಗಿರುವ ದೈವೀ ಸಾನ್ನಿಧ್ಯದಲ್ಲಿ ಇರಿಸಿದ ನಂಬಿಕೆ. ನಮ್ಮ ನಂಬಿಕೆ ಪರಿಶುದ್ಧವಾಗಿದ್ದರೆ ನಮ್ಮೊಳಗಿರುವ ಈ ಸಾನ್ನಿಧ್ಯದ ಬಗ್ಗೆ ಕೂಡಲೆ ಅರಿವುಳ್ಳವರಾಗುತ್ತೇವೆ. ಈ ಉದಾಹರಣೆ ತಿಳಿದುಕೊಳ್ಳಲು ಬಹಳ ಸರಳವಾಗಿದೆ. ನೀವು ನಂಬಿಕೆ ಹೊಂದಿದ್ದೀರಿ, ಅದಲ್ಲಿದೆ, ಆದರೆ ನಿಮಗೆ ಅದರ

ಅನುಭವವಾಗುತ್ತಿಲ್ಲ. ಏಕೆ? ಏಕೆಂದರೆ ನಂಬಿಕೆ ಪರಿಶುದ್ಧವಾಗಿಲ್ಲ. ನಂಬಿಕೆ ಬಹಳ ಪರಿಶುದ್ಧವಾಗಿದ್ದರೆ ಆ ಕಾರ್ಯವನ್ನು ಕೂಡಲೆ ಕೈಕೊಳ್ಳಲಾಗುವುದು. ಇದು ಬಹಳ ಸತ್ಯವಾದ ಸಂಗತಿ. ಹಾಗಾಗಿ ಆ ವಿಷಯವನ್ನು ಕೂಡಲೆ ಸಿದ್ಧಿಸಿಕೊಳ್ಳಲಾಗಲಿಲ್ಲ ಎಂಬುದು ನಿಮ್ಮ ಅರಿವಿಗೆ ಬಂದಾಗ ನೀವು ನೋಡಲು ಪ್ರಾರಂಭಿಸಬಹುದು: "ಆದರೆ ಅದನ್ನು ಏಕೆ ಸಿದ್ಧಿಸಿಕೊಳ್ಳಲಾಗಲಿಲ್ಲ?" ನನ್ನ ನಂಬಿಕೆಯಲ್ಲಿ ಏನಿದೆ? ಅದೇ ನಿಷ್ಕಾಪಟ್ಯದಿಂದ ನೀವು ನೋಡುತ್ತ ಹೋದರೆ ನೀವು ಅದರಲ್ಲಿ ಅನೇಕ ಅತಿ ಚಿಕ್ಕ ವಿಷಯಗಳಿರುವುದನ್ನು ಕಂಡುಕೊಳ್ಳುತ್ತೀರಿ, ಬಹಳ ದೊಡ್ಡವಲ್ಲ, ಜುಗುಪ್ಸೆ ತರಿಸುವಂತಹವಲ್ಲ, ಚಿಕ್ಕ ವಿಷಯಗಳು. ಎಷ್ಟೋ ಸಲ ಚಿಕ್ಕ ಜಂಬವೊಂದು ಒಳಗೆ ಬರುತ್ತದೆ, ನಂತರ ಒಂದು ಆಸೆ, ಬಹಳ ಪ್ರಚಂಡವಾದದ್ದಲ್ಲ – ಅದು ತನ್ನನ್ನು ಹೆಚ್ಚಾಗಿ ತೋರಿಸಿಕೊಡುವುದಿಲ್ಲ. ಅದು ನಿಮಗೆ ಮಹತ್ವ ನೀಡುತ್ತದೆ, ತೃಪ್ತಿ ತಂದುಕೊಡುತ್ತದೆ ಇತ್ಯಾದಿ. ...

**CWM, 15/320** **– ಶ್ರೀಮಾತೆ**

*

ವಿಷಯಗಳು ಹೆಚ್ಚು ಕಠಿಣವಾಗುತ್ತಿದ್ದಂತೆ, ನೀವು ಹೆಚ್ಚಿನ ರೀತಿಯಲ್ಲಿ ಅಚಂಚಲರಾಗಿ ಉಳಿಯಬೇಕು ಮತ್ತು ಅಲುಗಾಡದ ನಂಬಿಕೆಯನ್ನು ಹೊಂದಬೇಕು ಎಂಬುದರ ಮೇಲೆ ನಾನು ಒತ್ತುಕೊಟ್ಟು ಹೇಳುತ್ತೇನೆ, ಎಲ್ಲ ವಿಷಯಗಳಲ್ಲಿ ಇದು ಅತ್ಯಂತ ಮಹತ್ವವಾದದ್ದು.

**CWM, 6/453** **– ಶ್ರೀಮಾತೆ**

*

## ದೈವೀ ಸಹಾಯದಲ್ಲಿ ನಿಜವಾದ ಗಾಢ ನಂಬಿಕೆ ಹೊಂದಿರಬೇಕು

ನೀವು ಹೆಚ್ಚು ಅಚಂಚಲರಾದ ಹಾಗೆ ಹೆಚ್ಚು ಬಲಿಷ್ಠರಾಗುತ್ತೀರಿ. ಎಲ್ಲ ಆಧ್ಯಾತ್ಮಿಕ ಸಾಮರ್ಥ್ಯದ ಆಧಾರ ಸಮತೆಯಾಗಿರುತ್ತದೆ. ನಿಮ್ಮ ಸಮಸ್ಥಾಯಿತ್ವವನ್ನು ಕ್ಷೋಭೆಗೊಳಪಡಿಸಲು ಯಾವುದಕ್ಕೂ ಅನುವು ಮಾಡಿಕೊಡಬಾರದು: ಆಗ ನೀವು ಪ್ರತಿಯೊಂದು ಬಗೆಯ ಆಕ್ರಮಣವನ್ನು ಪ್ರತಿರೋಧಿಸಬಹುದು. ಅಲ್ಲದೆ ವ್ಯತ್ಯಾಸ ಗುರುತಿಸುವುದನ್ನು ಸಾಕಷ್ಟು ರೀತಿಯಲ್ಲಿ ನಿಮ್ಮ ವಶದಲ್ಲಿಟ್ಟುಕೊಂಡಿದ್ದರೆ ಮತ್ತು ಅನಿಷ್ಟ ಸೂಚನೆಗಳು ಬರುತ್ತಿದ್ದ ಹಾಗೆ ಅವುಗಳನ್ನು ನೋಡಬಲ್ಲಿರಾದರೆ,

ಹಿಡಿದುಕೊಳ್ಳಬಲ್ಲಿರಾದರೆ ನೀವು ಅವುಗಳನ್ನು ದೂರ ನೂಕಿಬಿಡುವುದು ಇನ್ನೂ ಹೆಚ್ಚು ಸುಲಭವಾಗುತ್ತದೆ. ಆದರೆ ಕೆಲವೊಮ್ಮೆ ಅವು ಲಕ್ಷ್ಯಕ್ಕೆ ಬಂದಿರುವುದಿಲ್ಲ. ಆಗ ಅವುಗಳೊಡನೆ ಹೋರಾಡುವುದು ಹೆಚ್ಚು ಕಠಿಣವಾಗುತ್ತದೆ. ಅದು ಸಂಭವಿಸಿದಾಗ ನೀವು ಅಚಂಚಲರಾಗಿ ಕುಳಿತುಕೊಂಡು ಶಾಂತಿಗಾಗಿ, ಮತ್ತು ಆಳವಾದ ಆಂತರಿಕ ಅಚಂಚಲತೆಗೆ ಕರೆಕೊಡಬೇಕು. ನಿಮ್ಮನ್ನು ದೃಢವಾಗಿರಿಸಿಕೊಳ್ಳಿರಿ, ಗಾಢ ವಿಶ್ವಾಸ ಹಾಗೂ ನಂಬಿಕೆಯೊಂದಿಗೆ ಕರೆಕೊಡಿರಿ: ನಿಮ್ಮ ಅಭೀಪ್ಸೆ ಪರಿಶುದ್ಧವಾಗಿದ್ದರೆ ಹಾಗೂ ಏಕಪ್ರಕಾರದ್ದಾಗಿದ್ದರೆ ನೀವು ನಿಶ್ಚಿತವಾಗಿ ಸಹಾಯ ಪಡೆಯುತ್ತೀರಿ. ವಿರೋಧೀ ಶಕ್ತಿಗಳಿಂದ ಆಕ್ರಮಣ ಅನಿವಾರ್ಯವಾದದ್ದು: ಅವುಗಳನ್ನು ನಿಮ್ಮ ಮಾರ್ಗದ ಮೇಲೆ ಎದುರಿಸಬೇಕಾದ ಪರೀಕ್ಷೆಗಳೆಂದು ಭಾವಿಸಬೇಕು ಮತ್ತು ಸತ್ವ ಪರೀಕ್ಷೆಯಾದ್ಯಂತ ಧೈರ್ಯದಿಂದ ಸಾಗಿ ಹೋಗಬೇಕು. ಹೋರಾಟ ಕಠಿಣವಾಗಬಹುದು, ಆದರೆ ಒಮ್ಮೆ ನೀವು ಅದರಿಂದ ಹೊರಗೆ ಬಂದಾಗ ಏನನ್ನೋ ಗಳಿಸಿರುತ್ತೀರಿ, ಒಂದು ಹೆಜ್ಜೆ ಮುಂದೆ ಸಾಗಿರುತ್ತೀರಿ. ಶತ್ರು ಶಕ್ತಿಗಳ ಅಸ್ತಿತ್ವಕ್ಕೂ ಒಂದು ಆವಶ್ಯಕತೆ ಇದೆ, ಅವು ನಿಮ್ಮ ನಿರ್ಧಾರ ಹೆಚ್ಚು ದೃಢವಾಗುವಂತೆ ನಿಮ್ಮ ಅಭೀಪ್ಸೆ ಹೆಚ್ಚು ಸ್ಪಷ್ಟವಾಗುವಂತೆ ಮಾಡುತ್ತವೆ. ಹಾಗಿದ್ದರೂ ಅವು ಅಸ್ತಿತ್ವದಲ್ಲಿರುವುದಕ್ಕೆ ನೀವು ಕಾರಣ ಒದಗಿಸಿರುತ್ತೀರಿ ಎಂಬುದರಿಂದಾಗಿ ಅಸ್ತಿತ್ವದಲ್ಲಿರುತ್ತವೆ ಎಂಬುದು ನಿಜ. ಅವುಗಳಿಗೆ ಉತ್ತರ ನೀಡುವಂತಹ ಏನೋ ಒಂದು ನಿಮ್ಮಲ್ಲಿರುವವರೆಗೆ ಅವುಗಳ ಮಧ್ಯಸ್ಥಿಕೆ ನ್ಯಾಯಯುತವಾದದ್ದು. ನಿಮ್ಮಲ್ಲಿ ಯಾವುದೂ ಅವುಗಳಿಗೆ ಉತ್ತರ ನೀಡದಿದ್ದರೆ, ನಿಮ್ಮ ಸ್ವಭಾವದ ಯಾವುದೇ ಭಾಗದ ಮೇಲೆ ಅವುಗಳ ಹಿಡಿತವಿಲ್ಲದಿದ್ದರೆ ಅವು ನಿವೃತ್ತಿ ಹೊಂದುತ್ತವೆ, ನಿಮ್ಮನ್ನು ತ್ಯಜಿಸಿ ಹೋಗುತ್ತವೆ. ಸಂದರ್ಭ ಯಾವುದೇ ಇರಲಿ, ಅವುಗಳಿಗೆ ನಿಮ್ಮ ಆಧ್ಯಾತ್ಮಿಕ ಪ್ರಗತಿಯನ್ನು ನಿಲ್ಲಿಸಿಬಿಡುವ ಇಲ್ಲವೆ ಅದಕ್ಕೆ ಅಡ್ಡಿಯನ್ನುಂಟು ಮಾಡುವ ಆವಶ್ಯಕತೆ ಇರುವುದಿಲ್ಲ.

ನಿಮ್ಮ ಹೋರಾಟದಲ್ಲಿ ವಿಫಲರಾಗಲು ಇರುವ ಏಕೈಕ ರೀತಿಯೆಂದರೆ ದೈವೀ ಸಹಾಯದಲ್ಲಿ ನಿಜವಾದ ಗಾಢ ನಂಬಿಕೆಯನ್ನು ಹೊಂದಿರದೆ ಇರುವುದಾಗಿದೆ. ಅಭೀಪ್ಸೆಯಲ್ಲಿಯ ನಿಷ್ಕಾಪಟ್ಯ, ಯಾವಾಗಲೂ, ಅವಶ್ಯವಾಗಿರುವ ನೆರವನ್ನು ಕೆಳಗಿಳಿಸಿ ತರುತ್ತದೆ. ಅಚಂಚಲ ಕರೆಕೊಡುವಿಕೆ, ಸಿದ್ಧಿಯತ್ತ ಆರೋಹಣದಲ್ಲಿ ನೀವು ಎಂದಿಗೂ ಏಕಾಕಿಯಾಗಿರುವುದಿಲ್ಲ ಎಂಬ ಮನವರಿಕೆ,

ಸಹಾಯ ಅವಶ್ಯವಾದಾಗ ಅದಲ್ಲಿ ಇದ್ದೇ ಇರುತ್ತದೆ ಎಂಬ ನಂಬಿಕೆ ಇವೆಲ್ಲ ನಿಮ್ಮನ್ನು ಸುಲಭವಾಗಿ ಹಾಗೂ ಸುರಕ್ಷಿತವಾಗಿ ಆದ್ಯಂತ ಕರೆದೊಯ್ಯುತ್ತವೆ.

**CWM, 3/33–34** **– ಶ್ರೀಮಾತೆ**

*

## ಪ್ರಯತ್ನದಲ್ಲಿ ಪಟ್ಟುಹಿಡಿಯುವಿಕೆ ಮತ್ತು ಅಲುಗಾಡದ ನಂಬಿಕೆ ಅವಶ್ಯವಾಗಿವೆ

ಯಾವುದೊಂದು ಮತತತ್ವವನ್ನಾಗಲಿ, ಧರ್ಮವನ್ನಾಗಲಿ ನೆಚ್ಚಿಕೊಂಡಿರುವುದು ನಂಬಿಕೆಯಲ್ಲ, ಅದು ಗುರುವಿನ ಬೋಧನೆಯನ್ನು ನೆಚ್ಚಿಕೊಳ್ಳುವುದೂ ಕೂಡ ಅಲ್ಲ, ಅದು ಮನುಷ್ಯ ತನ್ನದೇ ಸಾಧ್ಯತೆಗಳಲ್ಲಿ ನಂಬಿಕೆ ಹೊಂದಿರುವುದಾಗಿದೆ, ತೊಂದರೆಗಳೇನೇ ಇರಲಿ, ಅಡೆತಡೆ ಏನೇ ಇರಲಿ, ಅಪರಿಪೂರ್ಣತೆಗಳೇನೇ ಇರಲಿ, ಸತ್ತೆಯಲ್ಲಿ ಅಭಾವಗಳೇನೇ ಇರಲಿ, ಮನುಷ್ಯ ಸಿದ್ಧಿಸಿಕೊಳ್ಳುವುದಕ್ಕಾಗಿ ಜನ್ಮ ತಾಳಿರುತ್ತಾನೆ ಮತ್ತು ಅವನು ಸಿದ್ಧಿಸಿಕೊಳ್ಳುವನು. ಸಂಕಲ್ಪ ಎಂದೆಂದಿಗೂ ಮುಗ್ಗರಿಸಬಾರದು, ಪ್ರಯತ್ನ ಪಟ್ಟುಹಿಡಿದು ಮುಂದುವರಿಯಬೇಕು ಮತ್ತು ನಂಬಿಕೆ ಅಲುಗಾಡದಂತಿರಬೇಕು. ಆಗ ಸಿದ್ಧಿಗಾಗಿ ಹಲವಾರು ವರ್ಷಗಳ ಕಾಲ ಕಾದುಕೊಂಡಿರುವುದರ ಬದಲಾಗಿ ಅದನ್ನು ಅವನು ಕೆಲವೇ ತಿಂಗಳುಗಳಲ್ಲಿ, ಕೆಲವೊಮ್ಮೆ ಕೆಲವೇ ದಿನಗಳಲ್ಲಿ ಅದನ್ನು ಕೈಕೊಳ್ಳಬಲ್ಲ, ಮತ್ತು ಹಠಾತ್ತನೆ ಸಾಕಷ್ಟು ಗಾಢತೆ ಬಂದರೆ ಅದನ್ನು ಕೆಲವೇ ಗಂಟೆಗಳಲ್ಲಿ ಕೈಕೊಳ್ಳಬಲ್ಲ. ಅದರರ್ಥ ನೀವು ನಿಮ್ಮೊಳಗೆ ನಿಲುವೊಂದನ್ನು ತಳೆಯಬಲ್ಲಿರಿ, ಸಿದ್ಧಿಯ ಮೇಲೆ ಆಕ್ರಮಣ ಮಾಡುವ ಯಾವುದೇ ಕೆಟ್ಟ ಸಂಕಲ್ಪ, ಬಂಡೆಗಲ್ಲ ಮೇಲೆ ಹಾದು ಹೋಗುವ ಗಾಳಿಯ ಸಾಮರ್ಥ್ಯಕ್ಕಿಂತ ಹೆಚ್ಚಿನ ಸಾಮರ್ಥ್ಯವನ್ನು ಹೊಂದಿರುವುದಿಲ್ಲ. ಅನಂತರ ಮಾರ್ಗ ಕಠಿಣವಾಗುವುದಿಲ್ಲ; ಅದು ಅಸಾಧಾರಣವಾದ ರೀತಿಯಲ್ಲಿ ಸ್ವಾರಸ್ಯಕರವಾಗುತ್ತದೆ.

**CWM, 3/189** **– ಶ್ರೀಮಾತೆ**

*

## ವೇದನೆಯನ್ನು ಧೈರ್ಯದಿಂದ ಹಾಗೂ ದೈವೀಕೃಪೆಯಲ್ಲಿರಿಸಿದ ನಂಬಿಕೆಯಿಂದ ಎದುರಿಸಿರಿ

ವೇದನೆ ನಮ್ಮನ್ನು ಯಾವುದರತ್ತ ಕರೆದೊಯ್ಯುತ್ತಿದೆಯೋ ಅದರ ರಹಸ್ಯವೇನು ಎಂದು ನಮ್ಮನ್ನು ನಾವೇ, ಸ್ವಾಭಾವಿಕವಾಗಿ, ಕೇಳುತ್ತೇವೆ. ಮೇಲ್ಮೈಯಲ್ಲಿಯ

ಮತ್ತು ಅಪರಿಪೂರ್ಣ ತಿಳಿವಳಿಕೆಯಿರುವ ಮನುಷ್ಯ ಅದು ಆತ್ಮ ಅರಸುತ್ತಿರುವ ನೋವು ಎಂದು ನೆಚ್ಚಿಕೊಳ್ಳಬಹುದು. ಅದು ಅಂತಹದಲ್ಲವೇ ಅಲ್ಲ. ಸತತ, ಮಾರ್ಪಾಡಾಗದ, ಕಟ್ಟುಪಾಡಿಗೆ ಒಳಪಟ್ಟಿರದ ಭಾವಪರವಶಗೊಳಿಸುವ ದಿವ್ಯಾನಂದ ಆತ್ಮದ ಸ್ವಭಾವವಾಗಿದೆ; ಆದರೆ ಇರುವ ಸತ್ಯ ಇದು: ಮನುಷ್ಯ ವೇದನೆಯನ್ನು ಧೈರ್ಯದಿಂದ, ತಾಳ್ಮೆಯಿಂದ, ದೈವೀಕೃಪೆಯಲ್ಲಿ ಅಲುಗಾಡದ ನಂಬಿಕೆಯೊಂದಿಗೆ ಎದುರಿಸಬಲ್ಲನಾದರೆ, ವೇದನೆ ಬಂದಾಗ ಅದನ್ನು ಅವನು ದೂರವಿರಿಸದೆ ಅದರಾದ್ಯಂತ ಸಾಗಿಹೋಗಿ ಎಲ್ಲದರ ತಿರುಳಿನಲ್ಲಿರುವ ಪ್ರಕಾಶಮಯ ಸತ್ಯವನ್ನು, ಅದರಲ್ಲಿ ಪ್ರವೇಶಿಸಿ ಬದಲಾಗದ ದಿವ್ಯಾನಂದವನ್ನು ಕಂಡುಕೊಳ್ಳುವ ಈ ಸಂಕಲ್ಪ ಹಾಗೂ ಅಭೀಪ್ಸೆ ಅವನಲ್ಲಿದ್ದರೆ, ನೋವಿನ ದ್ವಾರ ಸಮಾಧಾನ ಇಲ್ಲವೆ ತೃಪ್ತಿಗಳಿಗಾಗಿ ಇರುವ ದ್ವಾರಕ್ಕಿಂತ ಹೆಚ್ಚು ನೇರವಾಗಿರುತ್ತದೆ, ತೀವ್ರಗತಿಯದಾಗಿರುತ್ತದೆ. ನಾನು ಇಂದ್ರಿಯ ಸುಖ ಕುರಿತು ಹೇಳುತ್ತಿಲ್ಲ, ಏಕೆಂದರೆ ಆ ಸುಖ ಈ ಗಾಢ ದಿವ್ಯಾನಂದದತ್ತ ತನ್ನ ಬೆನ್ನನ್ನು ಸತತ, ಬಹುಮಟ್ಟಿಗೆ ಸಂಪೂರ್ಣವಾಗಿ ತಿರುಗಿಸುತ್ತದೆ.

ಇಂದ್ರಿಯ ಸುಖ ಮೋಸಗೊಳಿಸುವ ಹಾಗೂ ವಿರೂಪಗೊಂಡ ಮುಖವಾಡ. ಅದು ನಮ್ಮನ್ನು ನಮ್ಮ ಗುರಿಯಿಂದ ದೂರ ಹೊರಳಿಸುತ್ತದೆ ಮತ್ತು ನಾವು ಸತ್ಯವನ್ನು ಕಂಡುಕೊಳ್ಳಲು ಆತುರರಾಗಿದ್ದರೆ ಇಂದ್ರಿಯ ಸುಖವನ್ನು ನಿಶ್ಚಿತವಾಗಿ ಅರಸಬಾರದು. ಇಂದ್ರಿಯ ಸುಖ ನಮ್ಮನ್ನು ಉಗಿಯಾಗುವಂತೆ ಮಾಡುತ್ತದೆ, ಮೋಸಗೊಳಿಸುತ್ತದೆ, ಮಾರ್ಗದಿಂದ ದೂರ ಕರೆದೊಯ್ಯುತ್ತದೆ. ನೋವು ನಮ್ಮನ್ನು ಹೆಚ್ಚು ಆಳವಾದ ಸತ್ಯದತ್ತ ಮರಳಿ ಕರೆತರುತ್ತದೆ, ಅದನ್ನು ಸಹಿಸಬೇಕಾಗುತ್ತದೆ, ನಮ್ಮನ್ನು ಚೂರು ಚೂರು ಮಾಡುವ ಇದನ್ನು ಎದುರಿಸಲು ಶಕ್ತರಾಗಬೇಕಾಗಿರುತ್ತದೆ. ಮನುಷ್ಯ ಬಲವಂತನಾಗಿದ್ದಾಗ, ನೋವಿನಲ್ಲಿಯೇ ಬಹಳ ಸುಲಭವಾಗಿ, ನಿಜವಾದ ನಂಬಿಕೆಯನ್ನು ಮರಳಿ ಕಂಡುಕೊಳ್ಳುತ್ತಾನೆ, ಎಲ್ಲ ನೋವಿನ ಮೇಲೆ ಹಾಗೂ ಅದರಾಚೆಗೆ ಇರುವುದರಲ್ಲಿ ಆ ನಂಬಿಕೆ ಇದೆ.

**CWM, 9/41–42** **– ಶ್ರೀಮಾತೆ**

*

**ಭಯಕ್ಕೆ ಒಂದು ಚಿಕಿತ್ಸೆ**

ನಿಮ್ಮಲ್ಲಿ ನಂಬಿಕೆ ಇದ್ದರೆ ಮತ್ತು ನೀವು ಭಗವಂತನಿಗೆ ನಿಮ್ಮನ್ನು ಮುಡಿಪಾಗಿರಿಸಿಕೊಂಡಿದ್ದರೆ ಆಗ ಒಂದು ಸರಳ ಮಾರ್ಗ ಇದೆ. ಅದು:

“ಭಗವಂತ ನಿನ್ನ ಸಂಕಲ್ಪವಿದ್ದಂತಾಗಲಿ, ಯಾವುದೂ ನನಗೆ ಭಯವನ್ನುಂಟು ಮಾಡಲಾರದು, ಏಕೆಂದರೆ ನೀನು ನನ್ನ ಜೀವನಕ್ಕೆ ಮಾರ್ಗದರ್ಶನ ಮಾಡುತ್ತಿರುವಿ. ನಾನು ನಿನಗೆ ಸೇರಿದವನಾಗಿದ್ದೇನೆ ಮತ್ತು ನೀನು ನನ್ನ ಜೀವನಕ್ಕೆ ಮಾರ್ಗದರ್ಶನ ಮಾಡುತ್ತಿರುವಿ,” ಎಂದು ಹೇಳುವುದಾಗಿರುತ್ತದೆ. ಅದು ಕೂಡಲೆ ಕಾರ್ಯ ಕೈಕೊಳ್ಳುತ್ತದೆ. ಎಲ್ಲ ಸಾಧನಗಳಲ್ಲಿ ಇದು ಅತ್ಯಂತ ಪರಿಣಾಮಕಾರಿಯಾದದ್ದು: ನಿಜವಾಗಿಯೂ ಅದು ಹಾಗಿದೆ. ಅದರರ್ಥ ಮನುಷ್ಯ ತನ್ನನ್ನು ನಿಜವಾಗಿ ಭಗವಂತನಿಗೆ ಮುಡಿಪಾಗಿರಿಸಿಕೊಂಡಿರಬೇಕು. ಮನುಷ್ಯನಲ್ಲಿ ಆ ಮುಡಿಪಾಗಿರಿಸಿ–ಕೊಳ್ಳುವಿಕೆ ಇದ್ದರೆ ಅದು ಕೂಡಲೆ ಕಾರ್ಯಕೈಕೊಳ್ಳುತ್ತದೆ; ಎಲ್ಲ ಭಯ ಕನಸೊಂದರ ಹಾಗೆ ಕೂಡಲೆ ಮಾಯವಾಗುತ್ತದೆ. ಕೆಟ್ಟ ಪ್ರಭಾವದೊಂದಿಗಿರುವ ಸತ್ತೆ ಕೂಡ, ತನ್ನ ಭಯದೊಂದಿಗೆ ಕನಸಿನ ಹಾಗೆ ಮಾಯವಾಗುತ್ತಾನೆ. ಭಯ ಪೂರ್ತಿ ವೇಗದೊಂದಿಗೆ ಓಡುವುದನ್ನು ನೀವು ನೋಡಬೇಕು.

**CWM, 5/117–18** **– ಶ್ರೀಮಾತೆ**

*

ಭಯಕ್ಕೊಳಗಾದ ಜನರು ಎಲ್ಲೆಡೆಯಲ್ಲಿ ಭಯಪಟ್ಟುಕೊಳ್ಳುತ್ತಾರೆ, ನಂಬಿಕೆಯನ್ನಿರಿಸಿಕೊಂಡವನು ಎಲ್ಲೆಡೆಯಲ್ಲಿ ಸುರಕ್ಷಿತನಾಗಿರುತ್ತಾನೆ.

*

ದೈವೀ ಕೃಪೆಯಲ್ಲಿ ಅಲುಗಾಡದ ನಂಬಿಕೆ ಅತ್ಯಂತ ಒಳ್ಳೆಯ ಸುರಕ್ಷಿತತೆ.

*

ದೈವೀ ರಕ್ಷಣೆ ಕ್ರಿಯಾಶೀಲವಾಗಿದೆ, ಮತ್ತು ನಿಮ್ಮೊಡನೆ ಪರಿಪೂರ್ಣ ಹಾಗೂ ಸತತ ಇರುವ ನಂಬಿಕೆ ಇದ್ದಾಗ ಮಾತ್ರ ಅದು ಪರಿಣಾಮಕಾರಿಯಾಗಬಲ್ಲದು.

**CWM, 15/46–47** **– ಶ್ರೀಮಾತೆ**

*

**ದೇಹದಲ್ಲಿರುವ ನಂಬಿಕೆ**

ದೇಹದಲ್ಲಿಯೂ ಕೂಡ, ಉದಾಹರಣೆಗೆ, ಅದರ ಮೇಲೆ ಆಕ್ರಮಣ–ವೇನಾದರೂ ಇದ್ದಾಗ, ಅಪಘಾತವಾದಾಗ, ಒಳಬರಲು ಪ್ರಯತ್ನಿಸುವ ರೋಗವಿದ್ದಾಗ – ಏನೋ ಒಂದರ – ದೇಹದ ಮೇಲೊಂದು ಆಕ್ರಮಣವಿದ್ದಾಗ

ದೇಹವನ್ನು ಅದರ ಸ್ವಾಭಾವಿಕ ಸ್ವಯಂಪ್ರೇರಣೆಗೆ ಬಿಟ್ಟುಕೊಟ್ಟಾಗ ಸಹಾಯಕ್ಕಾಗಿ ಕರೆ ಕೊಡುವುದಕ್ಕಾಗಿ ಅದಕ್ಕೆ ಒಂದು ಪ್ರೇರಣೆ, ಅಭೀಪ್ಸೆ, ಸ್ವಯಂಪ್ರೇರಿತ ಸಂಕಲ್ಪ, ಇದೆಲ್ಲ ಇರುತ್ತದೆ. ಆದರೆ ಆ ವಿಷಯ ತಲೆಯತ್ತ ಹೋದ ಕೂಡಲೆ, ಮನುಷ್ಯ ರೂಢಿಸಿಕೊಂಡ ರೂಪ ತಾಳುತ್ತದೆ, ಎಲ್ಲವೂ ಹಾಳಾಗುತ್ತದೆ. ಆದರೆ ದೇಹವನ್ನು ಅದರಲ್ಲಿಯೇ ಅದಿರುವ ಹಾಗೆ ನೋಡಿದರೆ, ಅಲ್ಲಿ ಹಠಾತ್ತನೆ ಎಚ್ಚತ್ತುಕೊಂಡ ಏನೋ ಒಂದಿರುತ್ತದೆ ಮತ್ತು ಅದು ಸಹಾಯಕ್ಕಾಗಿ ಕರೆಕೊಡುತ್ತದೆ, ಆ ಕರೆಕೊಡುವುದು ಮಗುವೊಂದು ತನ್ನ ತಾಯಿಗೆ ಕರೆಕೊಡುವ ರೀತಿಯ–ದಾಗಿರುತ್ತದೆ, ಅದರಲ್ಲಿ ಗಾಢತೆಯಿರುತ್ತದೆ – ಇಲ್ಲವೆ ಅದಕ್ಕೆ ಮಾತನಾಡಲು ಬಾರದಿದ್ದರೆ ಅಲ್ಲಿ ಅದು ಯಾರ ಹತ್ತಿರವೂ ಮಾತನಾಡುವುದಿಲ್ಲ. ಆದರೆ ದೇಹವನ್ನು ಈ ಬಗೆಯ ಮನಸ್ಸಿನ ಸತತ ಕ್ರಿಯೆಗೆ ಒಳಪಡಿಸದೆ ಅದನ್ನು ಅದರಷ್ಟಕ್ಕೆ ಬಿಟ್ಟುಕೊಟ್ಟಾಗ, ಸರಿ, ಅದರಲ್ಲಿ ಇರುವುದು ಇದು: ಅಲ್ಲಿ ಒಂದಿಷ್ಟು ಕ್ಷೋಭೆ ಉಂಟಾದಾಗ ಕೂಡಲೆ ಅದರಲ್ಲಿ ಒಂದು ಅಭೀಪ್ಸೆ, ಕರೆ ಕೊಡುವಿಕೆ, ಸಹಾಯ ಅರಸುವ ಒಂದು ಪ್ರಯತ್ನ ಇವೆಲ್ಲ ಇರುತ್ತವೆ, ಅದು ಬಹಳ ಸಾಮರ್ಥ್ಯಪೂರ್ಣವಾದದ್ದು. ಬೇರೆ ಯಾವುದೂ ಮಧ್ಯೆ ಪ್ರವೇಶಿಸದಿದ್ದರೆ ಅದು ಬಹಳ ಸಾಮರ್ಥ್ಯಪೂರ್ಣವಾದದ್ದು. ಅದು ಸ್ವತಃ ಜೀವಕೋಶಗಳೇ ಅಭೀಪ್ಸೆಯೊಂದಿಗೆ, ಕರೆ ಕೊಡುವುದರೊಂದಿಗೆ ಮೇಲೆದ್ದು ಬಂದ ಹಾಗಿರುತ್ತದೆ.

ತನ್ನಷ್ಟಕ್ಕೆ ತಾನಿರುವಂತೆ ಬಿಟ್ಟುಕೊಟ್ಟ ದೇಹ ಅಸಾಧಾರಣವಾಗಿರುತ್ತದೆ, ಏಕೆಂದರೆ ಅದು ಸಮತೋಲನಕ್ಕೆ ಅಭೀಪ್ಸೆ ಪಡುತ್ತದಷ್ಟೇ ಅಲ್ಲ, ಆದರೆ ಅದು ತನ್ನ ಸಮತೋಲನವನ್ನು ಪುನಃ ಸ್ವಾಧೀನಪಡಿಸಿಕೊಳ್ಳುವ ಕ್ಷಮತೆಯನ್ನೂ ಹೊಂದಿರುತ್ತದೆ. ಆ ಎಲ್ಲ ಯೋಚನೆಗಳು, ಎಲ್ಲ ಪ್ರಾಣಿಕ ಪ್ರತಿಕ್ರಿಯೆಗಳು, ಖಿನ್ನತೆಗಳು ಮತ್ತು ಹಾಗೆಯೇ ಜ್ಞಾನವೆಂದು ಕರೆಯಲಾದದ್ದು ಹಾಗೂ ಮಾನಸಿಕ ರಚನೆಗಳು ಹಾಗೂ ಭಯಗಳು ಇವೆಲ್ಲ ಮಧ್ಯೆ ಪ್ರವೇಶಿಸದಂತೆ ದೇಹವನ್ನು ಏಕಾಕಿಯಾಗಿರಲು ಬಿಟ್ಟುಕೊಟ್ಟಾಗ ಸ್ವಯಂಪ್ರೇರಣೆಯಿಂದ ತನ್ನನ್ನು ಮತ್ತೆ ಸರಿಯಾಗಿರಿಸಲು ಅವಶ್ಯವಾದದ್ದನ್ನು ಕೈಕೊಳ್ಳುವುದು. ತನ್ನ ಸ್ವಾಭಾವಿಕ ಸ್ಥಿತಿಯಲ್ಲಿ ದೇಹ ಸಮತೋಲನವನ್ನು, ಸಾಮರಸ್ಯವನ್ನು ಇಷ್ಟಪಡುತ್ತದೆ, ಸತ್ತೆಯ ಇತರ ಭಾಗಗಳು ಪ್ರತಿಯೊಂದನ್ನೂ ಹಾಳುಮಾಡುತ್ತವೆ.

**CWM, 6/139–41** **– ಶ್ರೀಮಾತೆ**

*

ನಂಬಿಕೆಯನ್ನು ಹೊಂದಿರಿ. ದೈವೀ ಕೃಪೆಯಿಂದ ಚಿಕಿತ್ಸೆಗೆ ಒಳಪಡಿಸಲಾಗದ ಯಾವ ರೋಗವೂ ಇರುವುದಿಲ್ಲ.

**CWM, 6/139–41** **– ಶ್ರೀಮಾತೆ**

*

**ರಕ್ಷಣಾತ್ಮಕ ತಾಯಿತದ ರೂಪದಲ್ಲಿ ಇರುವವುಗಳಲ್ಲಿ ನಂಬಿಕೆ**

**ಪ್ರಶ್ನೆ :** *ನಿಮ್ಮ ಪ್ರತೀಕ ಇರುವ ಉಂಗುರವನ್ನು ಇಲ್ಲವೆ ಆಭರಣವೊಂದನ್ನು ನಾವು ಧರಿಸಿದಾಗ ಅದು ನಮಗೆ ರಕ್ಷಣೆ ನೀಡುವುದೆ?*

**ಶ್ರೀಮಾತೆ :** ಎಲ್ಲದಕ್ಕಿಂತಲೂ ಹೆಚ್ಚಾಗಿ ನೀವು ಅದನ್ನು ಕುರಿತು ಏನನ್ನು ಯೋಚಿಸುತ್ತೀರಿ ಎಂಬುದರ ಮೇಲೆ ಅದು ಅವಲಂಬಿಸಿದೆ. ನಾನು ನನ್ನ ಕೈಗಳಿಂದ ಕೊಡುತ್ತೇನೆ – ಅದರಲ್ಲಿ ನಾನು ಸ್ವಲ್ಪ ಏನನ್ನೋ ಇರಿಸಿರುತ್ತೇನೆ. ಆದರೆ ನಿಮ್ಮದೇ ಆಯ್ಕೆಯ ಪ್ರಕಾರ ಒಂದು ಉಂಗುರವನ್ನು, ಭಾವಚಿತ್ರವನ್ನು ತೆಗೆದುಕೊಂಡಿರುತ್ತೀರಿ ಮತ್ತು ಅದನ್ನು ಧರಿಸುತ್ತೀರಿ. ಅದು ನಿಮ್ಮನ್ನು ರಕ್ಷಿಸುತ್ತದೆ ಎಂಬ ನಂಬಿಕೆ ನಿಮ್ಮಲ್ಲಿದ್ದರೆ ನಿಮಗೆ ರಕ್ಷಣೆ ದೊರೆಯುತ್ತದೆ. ನಾನು ಕೊಟ್ಟಾಗ, ಆ ವಸ್ತುವಿಗಿಂತ ಸಂಪೂರ್ಣವಾಗಿ ಭಿನ್ನವಾದ ಏನೋ ಒಂದನ್ನು ಅದರ ಜೊತೆಗಿರಿಸಿ ಕೊಟ್ಟಿರುತ್ತೇನೆ. ಈ ವಿಷಯವನ್ನು ನಾನದರಲ್ಲಿ ಇರಿಸಿದಾಗ ಅದು ಅದರಲ್ಲಿರುತ್ತದೆ, ಇಲ್ಲವಾದರೆ ಇಲ್ಲ. ಶ್ರೀ ಅರವಿಂದರು ಹೇಳುತ್ತಿದ್ದುದು ಹೀಗಿತ್ತು: ತಮ್ಮ ಭಾವಚಿತ್ರವಿರುವ ಒಂದು ಉಂಗುರವನ್ನು ಧರಿಸುವುದು ಮತ್ತು ಅದು ನಿಮ್ಮನ್ನು ರಕ್ಷಿಸುತ್ತದೆ ಎಂದು ಯೋಚಿಸುವುದು ಒಂದು ಮೂಢ ನಂಬಿಕೆ. ಅದು ಮೂಢ ನಂಬಿಕೆ ಎಂದು ಅವರು ಹೇಳಬಲ್ಲವರಾಗಿದ್ದರು. ಎಂದರೆ ನೀವು ಅದನ್ನು ಕುರಿತು ಏನನ್ನು ಯೋಚಿಸುತ್ತೀರಿ ಎಂಬುದರ ಮೇಲೆ ಮಾತ್ರ ಎಲ್ಲವೂ ಅವಲಂಬಿಸಿದೆ. ಅವರು ನಿಮಗೆ ಒಂದು ಉಂಗುರವನ್ನು "ಇದನ್ನು ಧರಿಸು, ನನ್ನ ಶಕ್ತಿ ನಿನ್ನೊಂದಿಗಿರುತ್ತದೆ" ಎಂದು ಹೇಳಿ ಕೊಟ್ಟಿದ್ದರಾದರೆ ವಿಷಯ ಒಟ್ಟಿನಲ್ಲಿ ಬೇರೆಯೇ ಆಗುತ್ತಿತ್ತು. ಅದರಲ್ಲಿ ವ್ಯತ್ಯಾಸ ಜಗತ್ತಿನಗಲದಷ್ಟಿದೆ.

**CWM, 6/234** **– ಶ್ರೀಮಾತೆ**

*

## ಬಿನ್ನಹಕ್ಕಾಗಿ ಪ್ರಾರ್ಥನೆಗಳಲ್ಲಿರುವ ನಂಬಿಕೆ

ಒಮ್ಮೆಗೆ ಸ್ವಯಂಪ್ರೇರಿತವಾದ, ನಿಸ್ವಾರ್ಥದ್ದಾದ ಪ್ರಾರ್ಥನೆಯೊಂದಿದೆ, ಅದೊಂದು ಶ್ರೇಷ್ಠ ಕರೆ ಕೊಡುವಿಕೆಯ ರೀತಿಯದಾಗಿದೆ. ಸಾಮಾನ್ಯವಾಗಿ ಅದು ವೈಯಕ್ತಿಕ ಉದ್ದೇಶಕ್ಕಾಗಿ ಅಲ್ಲ, ಆದರೆ ಅದನ್ನು ಭಗವಂತನಲ್ಲಿ ಬಿನ್ನಹ ಮಾಡಿಕೊಳ್ಳುವುದಕ್ಕೆ ಇರುವ ಏನೋ ಒಂದೆಂದು ಹೇಳಬಹುದು. ಅದು ಅತ್ಯಂತ ಸಾಮರ್ಥ್ಯಪೂರ್ಣವಾದದ್ದು. ಈ ಬಗೆಯ ಪ್ರಾರ್ಥನೆಗಳಿಂದಾಗಿ ವಿಷಯಗಳನ್ನು ತತ್ಕ್ಷಣ ಸಿದ್ಧಿಸಿಕೊಂಡ ಉದಾಹರಣೆಗಳು ಲೆಕ್ಕವಿಡಲು ಸಾಧ್ಯವಿಲ್ಲದಷ್ಟಿವೆ. ಅದು ಶ್ರೇಷ್ಠತರವಾದ ನಂಬಿಕೆ, ಉತ್ಸಾಹ, ನಿಷ್ಕಾಪಟ್ಯ ಮತ್ತು ಹೃದಯದ ಸರಳತೆ ಇರುವುದನ್ನು ಸೂಚಿಸುತ್ತದೆ, ಅದು ಕೊಡಕೊಳ್ಳುವ ಕರಾರ(bargain)–ನ್ನಿರಿಸುವುದಿಲ್ಲ. ಪ್ರತಿಯಾಗಿ ಏನನ್ನಾದರೂ ಕೊಡಲಿ ಎಂಬ ವಿಚಾರದಿಂದ ಕೊಡುವುದಿಲ್ಲ. ಏಕೆಂದರೆ ಬಹಳಷ್ಟು ಜನರು ಒಂದು ಕೈಯಿಂದ ಕೊಡುತ್ತಾರೆ ಮತ್ತು ಪ್ರತಿಯಾಗಿ ಏನನ್ನಾದರೂ ದೊರಕಿಸುವುದಕ್ಕೆ ಇನ್ನೊಂದು ಕೈಯನ್ನು ಮುಂದೆ ಚಾಚುತ್ತಾರೆ. ಅತಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಾರ್ಥನೆಗಳು ಇಂತಹ ಬಗೆಯವಾಗಿರುತ್ತವೆ. ಆದರೆ ನಾನು ವರ್ಣಿಸಿದ ರೀತಿಯಲ್ಲಿರುವ ಇತರ ಪ್ರಾರ್ಥನೆಗಳಿವೆ, ಅವು ಕೃತಜ್ಞತಾ ನಿವೇದನೆ ಮಾಡುವ ಕ್ರಿಯೆಗಳು, ಮತ್ತು ಸ್ತೋತ್ರ ಗೀತೆಯಂತಹವಾಗಿರುತ್ತವೆ, ಅವು ಬಹಳ ಒಳ್ಳೆಯವಾಗಿರುತ್ತವೆ.

**CWM, 5/141–42** **– ಶ್ರೀಮಾತೆ**

*

## ನೈತಿಕ ಷರತ್ತು ಅತಿ ಹೆಚ್ಚು ಮಹತ್ವದ್ದು

ಸಾಧುಗಳಲ್ಲಿ ಕೆಲವರಿದ್ದಾರೆ, ಅವರು ಸಾಧುತ್ವದ ಮೂಲಕ ಹೊಲಸಿನಲ್ಲಿ ಬದುಕುವ ಜೀವನವನ್ನು ಒಪ್ಪಿಕೊಳ್ಳುತ್ತಾರೆ, ಅವರು ತಮ್ಮನ್ನು ಎಂದಿಗೂ ಸ್ವಚ್ಛಗೊಳಿಸಿಕೊಳ್ಳುವುದಿಲ್ಲ, ಆರೋಗ್ಯ ಶಾಸ್ತ್ರ ಒತ್ತಾಯದಿಂದ ಬೇಡುವ ಯಾವುದೂ ಅವರಲ್ಲಿರುವುದಿಲ್ಲ. ಅವರು ನಿಜವಾಗಿ ಕೊಳಕಾದ ಸ್ಥಿತಿಯಲ್ಲಿ ಜೀವಿಸುತ್ತಾರೆ – ಮತ್ತು ಎಲ್ಲ ರೋಗದಿಂದ ಮುಕ್ತರಾಗಿರುತ್ತಾರೆ. ಏಕೆಂದರೆ ಬಹುಶಃ ಅವರಲ್ಲಿ ನಂಬಿಕೆ ಇರುತ್ತದೆ ಎಂಬ ಕಾರಣದಿಂದಾಗಿ ಅವರು ಉದ್ದೇಶಪೂರ್ವಕವಾಗಿ ಹಾಗೆ ಮಾಡುತ್ತಾರೆ. ಅವರ ಆತ್ಮ ಉಜ್ವಲವಾಗಿರುತ್ತದೆ. ನಾನು ನಿಷ್ಕಪಟ ಜನರನ್ನು ಕುರಿತು ಹೇಳುತ್ತಿದ್ದೇನೆ, ನಟನೆ ಮಾಡುವವರನ್ನು

ಕುರಿತಾಗಿ ಅಲ್ಲ. ಅವರಲ್ಲಿ ನಂಬಿಕೆ ಇರುತ್ತದೆ. ಅವರು ತಮ್ಮ ದೇಹವನ್ನು ಕುರಿತು ಯೋಚಿಸುವುದಿಲ್ಲ. ಅವರು ತಮ್ಮ ಆತ್ಮದ ಜೀವನವನ್ನು ಕುರಿತು ಯೋಚಿಸುತ್ತಾರೆ. ಅವರಲ್ಲಿ ರೋಗವಿರುವುದಿಲ್ಲ. ಅವರಲ್ಲಿ ಕೆಲವರು ಒಂದು ಸ್ಥಿತಿಯತ್ತ ಬರುತ್ತಾರೆ, ಆ ಸ್ಥಿತಿಯಲ್ಲಿ ಅವರ ಒಂದು ತೋಳು ಇಲ್ಲವೆ ಕಾಲು ಇಲ್ಲವೆ ದೇಹದ ಯಾವುದೋ ಒಂದು ಭಾಗ, ಅವರ ವೈರಾಗ್ಯದ ನಿಲುವಿನ ಭಂಗಿ (posture) ಯಿಂದಾಗಿ ಸಂಪೂರ್ಣವಾಗಿ ಗಡುಸಾಗಿರುತ್ತದೆ. ಅವರಿಗೆ ಈ ನಂತರ ಚಲಿಸಲಾಗುವುದಿಲ್ಲ. ಬೇರೆಯವರಾಗಿದ್ದರೆ ಆ ಸ್ಥಿತಿಯಲ್ಲಿ ಮರಣ ಹೊಂದುತ್ತಿದ್ದರು. ಅವರು ಜೀವಿಸುವುದನ್ನು ಮುಂದುವರಿಸುತ್ತಾರೆ, ಏಕೆಂದರೆ ಅವರಲ್ಲಿ ನಂಬಿಕೆಯಿರುತ್ತದೆ ಮತ್ತು ಅವರು ಅದನ್ನು ಉದ್ದೇಶಪೂರ್ವಕವಾಗಿ ಹಾಗೆ ಮಾಡುತ್ತಾರೆ, ಏಕೆಂದರೆ ಅವರು ತಮ್ಮ ಮೇಲೆ ಹೇರಿಕೊಂಡ ವಿಷಯ ಅದಾಗಿರುತ್ತದೆ. ಹಾಗಾಗಿ ನೈತಿಕ ಸ್ಥಿತಿ ಭೌತಿಕ ಸ್ಥಿತಿಗಿಂತ ಹೆಚ್ಚು ಮಹತ್ವದ್ದು. ನಿಮ್ಮಲ್ಲಿ ಪ್ರತಿಯೊಬ್ಬನೂ ಅಚ್ಚುಕಟ್ಟಾಗಿರುವ ಪರಿಸರದಲ್ಲಿ ಇದ್ದರೆ ಮತ್ತು ಆಗ ಮೂರು ದಿನಗಳ ಕಾಲ ಸ್ನಾನ ಮಾಡದಿದ್ದರೆ ರೋಗಪೀಡಿತರಾಗುತ್ತೀರಿ. ಇದು ನೀವು ಸ್ನಾನಮಾಡಬಾರದು ಎಂದು ಹೇಳುವುದಕ್ಕಲ್ಲ! ನಾವು ಸಾಧುಗಳಾಗಲು ಬಯಸುವುದಿಲ್ಲ, ಯೋಗಿಗಳಾಗಲು ಬಯಸುತ್ತೇವೆ. ದೇಹ ಯೋಗದಲ್ಲಿ ಭಾಗ ವಹಿಸಲಿ ಎಂದು ಬಯಸುತ್ತೇವೆ. ಹಾಗಾಗಿ ಅದು ಯೋಗ್ಯವಾಗಿ ಇರುವುದನ್ನು ಕಾಪಾಡಿಕೊಂಡು ಬರಲು ಅವಶ್ಯವಾದದ್ದನ್ನು ನಾವು ಕೈಕೊಳ್ಳಬೇಕು. ಹಾಗಿದ್ದಾಗ್ಯೂ ಇದು ನೈತಿಕ ಸ್ಥಿತಿ ಭೌತಿಕ ಸ್ಥಿತಿಗಿಂತ ಅತಿ ಹೆಚ್ಚು ಮಹತ್ವದ್ದೆಂದು ಎಂದು ನಿಮಗೆ ಹೇಳುವುದಕ್ಕಾಗಿದೆ.

**CWM, 5/170** **– ಶ್ರೀಮಾತೆ**

*

**ದೈವೀ ಶಕ್ತಿಯನ್ನು ಸ್ವೀಕರಿಸಲು ಕ್ಷಮತೆ ಇಲ್ಲದಿರುವುದು**

"ನಿನ್ನನ್ನು ತೆರೆದಿರಿಸಿಕೋ, ನೀನು ದೈವೀ ಶಕ್ತಿಯನ್ನು ಸ್ವೀಕರಿಸುವಿ, ನಂಬಿಕೆಯನ್ನಿಟ್ಟುಕೋ, ಸದಿಚ್ಛೆಯುಳ್ಳವನಾಗು, ನಿನ್ನನ್ನು ರಕ್ಷಿಸಲಾಗುವುದು" ಎಂದು ನಿನಗೆ ಹೇಳಲಾಗಿದೆ. ಮತ್ತು ನಿಜವಾಗಿ ನಿನ್ನನ್ನು ದೈವೀ ಪ್ರಜ್ಞೆಯಲ್ಲಿ, ಶಕ್ತಿಯಲ್ಲಿ, ದೈವೀ ರಕ್ಷಣೆಯಲ್ಲಿ ಮುಳುಗು ಹಾಕುವಂತೆ ಮಾಡಲಾಗಿದೆ. ನಿನ್ನಲ್ಲಿ ನಂಬಿಕೆಯಿರುವಷ್ಟರ ಮಟ್ಟಿಗೆ, ನಿನ್ನನ್ನು ತೆರೆದಿರಿಸಿ ಇಟ್ಟುಕೊಳ್ಳುವಷ್ಟರ ಮಟ್ಟಿಗೆ

ನೀನು ಅದೆಲ್ಲವನ್ನೂ ಸ್ವೀಕರಿಸುವಿ; ಮತ್ತು ಅದು ನೀನು ಯೋಗ್ಯನಾಗಿರುವುದಕ್ಕೆ, ಚಿಕ್ಕ ಆಂತರಿಕ ಕ್ಷೋಭೆಗಳನ್ನು ತಿರಸ್ಕರಿಸುವುದಕ್ಕೆ, ಇವು ಬಂದಾಗ ವ್ಯವಸ್ಥೆಯನ್ನು ಮರುಸ್ಥಾಪಿಸುವುದಕ್ಕೆ, ಸಂಭವಿಸಬಹುದಾಗಿದ್ದ ಆಕ್ರಮಣಗಳು ಹಾಗೂ ಅಪಘಾತಗಳು ಇವುಗಳ ವಿರುದ್ಧ ನಿನ್ನನ್ನು ರಕ್ಷಿಸಿಕೊಳ್ಳುವುದಕ್ಕೆ ಸಹಾಯ ಮಾಡುವುದು. ಆದರೆ ನಿನ್ನ ಸತ್ತೆಯಲ್ಲಿ ಎಲ್ಲಿಯೋ ಒಂದೆಡೆ–ನಿನ್ನ ದೇಹದಲ್ಲಿಯಾಗಲಿ, ಪ್ರಾಣಿಕದಲ್ಲಿಯಾಗಲಿ, ಮನಸ್ಸಿನಲ್ಲಾಗಲಿ, ಇಲ್ಲವೆ ಹಲವಾರು ಭಾಗಗಳಲ್ಲಿಯಾಗಲಿ, ಒಂದೇ ಭಾಗದಲ್ಲಿಯಾಗಲಿ–ಅವರೋಹಣ ಮಾಡುತ್ತಿರುವ ಈ ದೈವೀ ಶಕ್ತಿಯನ್ನು ಸ್ವೀಕರಿಸುವುದಕ್ಕೆ ಕ್ಷಮತೆ ಇಲ್ಲದಿದ್ದರೆ ಅದು ಯಂತ್ರದಲ್ಲಿ ಸಿಕ್ಕಿ ಹಾಕಿಕೊಂಡ ಉಸುಕಿನ ಕಣದ ಹಾಗೆ ಕಾರ್ಯ ಮಾಡುತ್ತದೆ, ಒಂದು ಒಳ್ಳೆಯ ಯಂತ್ರ ಒಳ್ಳೆಯ ರೀತಿಯಲ್ಲಿ ಕಾರ್ಯ ಮಾಡುತ್ತಿರುತ್ತದೆ, ಪ್ರತಿಯೊಂದೂ ಸರಿಯಾಗಿ ನಡೆದಿರುತ್ತದೆ ಮತ್ತು ನೀವು ಅದರಲ್ಲಿ ಒಂದಿಷ್ಟು ಉಸುಕು ಸುರುವಿದರೆ (ಬಹಳಷ್ಟಲ್ಲ, ಉಸುಕಿನ ಒಂದು ಕಣವನ್ನು ಹಾಕಿದರೆ) ಹಠಾತ್ತನೆ ಪ್ರತಿಯೊಂದೂ ಹಾಳಾಗಿ ಹೋಗುತ್ತದೆ ಮತ್ತು ಯಂತ್ರ ನಿಂತು ಹೋಗುತ್ತದೆ. ಸರಿ, ಗ್ರಹಣ ಶಕ್ತಿಯಲ್ಲಿ ಎಲ್ಲಿಯೋ ಇರುವ ಚಿಕ್ಕ ಕೊರತೆ, ದೈವೀ ಶಕ್ತಿಯನ್ನು ಸ್ವೀಕರಿಸಲು ಶಕ್ತವಾಗದೆ ಇರುವುದು, ಅದು ಪೂರ್ತಿ ಮುಚ್ಚಿಕೊಂಡಿರುವುದು (ಮನುಷ್ಯ ಅದರತ್ತ ನೋಡಿದಾಗ, ಎಲ್ಲಿಯೋ ಒಂದೆಡೆ ಅದು ಕಪ್ಪು ಚುಕ್ಕೆಯಂತಿರುತ್ತದೆ, ಕಲ್ಲಿನಂತೆ ಗಟ್ಟಿಯಾಗಿರುವ ಹಾಗಾಗಿರುತ್ತದೆ: ದೈವೀ ಶಕ್ತಿ ಅದರಲ್ಲಿ ಪ್ರವೇಶಿಸಲಾಗುವುದಿಲ್ಲ, ಅದು ಸ್ವೀಕರಿಸುವುದನ್ನು ತಿರಸ್ಕರಿಸುತ್ತದೆ – ಸ್ವೀಕರಿಸಲಾಗುವುದಿಲ್ಲ ಇಲ್ಲವೆ ಸ್ವೀಕರಿಸಲು ಬಯಸುವುದಿಲ್ಲ,) ಕೂಡಲೆ ಅದು ದೊಡ್ಡ ಅಸಮತೋಲನವನ್ನು ಉಂಟು ಮಾಡುತ್ತದೆ. ಮತ್ತು ಮೇಲ್ಗಡೆ ಚಲಿಸುತ್ತಿದ್ದ, ಅಷ್ಟೊಂದು ಆಶ್ಚರ್ಯಕರ ರೀತಿಯಲ್ಲಿ ಅರಳಿಕೊಳ್ಳುತ್ತಿದ್ದ ವಿಷಯ, ಕೆಲವೊಮ್ಮೆ ನೀವು ಸಾಮಾನ್ಯ ಸಮತೋಲನದಲ್ಲಿದ್ದಾಗ, ಒಳ್ಳೆಯ ಆರೋಗ್ಯ ಹೊಂದಿದ್ದಾಗ, ಪ್ರತಿಯೊಂದೂ ಸರಿಯಾಗಿ ನಡೆದು ಹೋಗುತ್ತಿದ್ದಾಗ, ನಿಮಗೆ ದೂರುವುದಕ್ಕಾಗಿ ಏನೂ ಇಲ್ಲದಿದ್ದಾಗ ತಾನು ರೋಗಗ್ರಸ್ತವಾಗಿರುವುದನ್ನು ಕಂಡುಕೊಳ್ಳುತ್ತದೆ. ನೀವು ಹೊಸ ವಿಚಾರವೊಂದನ್ನು ಗ್ರಹಿಸಿದ, ಹೊಸ ಪ್ರಚೋದನೆ ಪಡೆದ, ನಿಮ್ಮಲ್ಲಿ ಶ್ರೇಷ್ಠ ಅಭೀಪ್ಸೆಯಿದ್ದ ಮತ್ತು ಶ್ರೇಷ್ಠ ದೈವೀ ಶಕ್ತಿಯನ್ನು ಸ್ವೀಕರಿಸಿದ, ಅದ್ಭುತ ಅನುಭವ ಪಡೆದ, ನಿಮ್ಮ ಆಂತರಿಕ ದ್ವಾರಗಳನ್ನು ತೆರೆದಿರಿಸಿದ ಸುಂದರ ಅನುಭವವಾದ, ಮೊದಲು ನಿಮಗೆ ಪರಿಚಿತವಿರದ ಜ್ಞಾನ ನೀಡಿದ ಒಂದು ದಿನದಂದು ಪ್ರತಿಯೊಂದು ಒಳ್ಳೆಯ ರೀತಿಯಲ್ಲಿ ನಡೆದು

ಹೋಗುತ್ತದೆ ಎಂಬ ನಿಶ್ಚಿತತೆಯನ್ನು ಹೊಂದಿದ್ದಿರಿ. ... ಮರುದಿನ ನೀವು ರೋಗಗ್ರಸ್ತರಾಗುತ್ತೀರಿ. ಹಾಗಾಗಿ "ಅದಿನ್ನೂ ಇದೆಯೆ?" ಎಂದು ಹೇಳುತ್ತೀರಿ. "ಅದು ಅಸಾಧ್ಯವಾದದ್ದು, ಅದು ಸಂಭವಿಸಬಾರದು," ಎನ್ನುತ್ತೀರಿ. ಆದರೆ ಅದು ಬಹಳ ಸರಳವಾಗಿ ಇದೀಗ ನಾನು ಹೇಳಿದ ಹಾಗೆ ಒಂದು ಉಸುಕಿನ ಕಣವಾಗಿರುತ್ತದೆ. ಸ್ವೀಕರಿಸಲಾಗದ ಏನೋ ಒಂದಿತ್ತು, ಅದು ಕೂಡಲೆ ಅಸಮತೋಲನವನ್ನು ತರುತ್ತದೆ. ಅದು ಅತಿ ಚಿಕ್ಕದಾಗಿದ್ದರೂ ಸಾಕಷ್ಟಾಗುತ್ತದೆ, ನೀವು ರೋಗಗ್ರಸ್ತರಾಗುತ್ತೀರಿ.

**CWM, 5/176** **– ಶ್ರೀಮಾತೆ**

*

**ನಂಬಿಕೆ ಹಾಗೂ ರೋಗ ಚಿಕಿತ್ಸೆ**

ಯಾವ ದ್ರವ್ಯದಿಂದ ನಂಬಿಕೆ ಹಾಗೂ ವಿಶ್ವಾಸಗಳು ರೂಪುಗೊಂಡಿರುತ್ತವೆ ಎಂಬುದನ್ನು ಮನುಷ್ಯ ತಿಳಿದುಕೊಂಡಿರಬೇಕು. ಏಕೆಂದರೆ, ಉದಾಹರಣೆಗೆ ನೀವು ಸಾಮಾನ್ಯ ರೀತಿಯಲ್ಲಿ, ಬಹಳ ಸಾಮಾನ್ಯ ರೀತಿಯ ಸ್ಥಿತಿಗಳಡಿಯಲ್ಲಿ ಜೀವಿಸುತ್ತಿದ್ದರೆ – ದುಂದು ವೆಚ್ಚದ ವಿಚಾರಗಳು, ಖಿನ್ನತೆಯನ್ನುಂಟು ಮಾಡುವ ಶಿಕ್ಷಣ ಇವುಗಳಿಲ್ಲದಿದ್ದರೆ – ಸರಿ, ನಿಮ್ಮ ತಾರುಣ್ಯದಾದ್ಯಂತ, ನೀವು ಮೂವತ್ತು ವರ್ಷದವರಾಗುವವರೆಗೆ ನಿಮಗೆ ಜೀವನದಲ್ಲಿ ಪರಿಪೂರ್ಣ ವಿಶ್ವಾಸವಿರುತ್ತದೆ. ಉದಾಹರಣೆಗೆ, ನಿಮಗೆ ತಲೆಶೂಲೆಯಾದುದನ್ನು ಕಂಡು ಗಲಿಬಿಲಿಗೊಳಗಾಗಿ, ವೈದ್ಯರ ಒಳಿಗೆ ಓಡಿ ಹೋಗಿ ಔಷಧ ತಂದುಕೊಡುವ ಜನರಿಂದ ನೀವು ಸುತ್ತುವರಿದುಕೊಂಡು ಇರದೆ ಇದ್ದಾಗ, ಸಾಮಾನ್ಯ ಪರಿಸ್ಥಿತಿಗಳಡಿಯಲ್ಲಿ ಜೀವಿಸುತ್ತಿದ್ದಾಗ ಮತ್ತು ನಿಮಗೆ ಏನೋ ಸಂಭವಿಸಿದಾಗ – ಅಪಘಾತವಾಗಲಿ ಇಲ್ಲವೆ ರೋಗವಾಗಲಿ – ಆದಾಗ ದೇಹದಲ್ಲಿ ತಾನು ಸರಿಹೋಗುವೆನೆಂಬ ಈ ನಿಶ್ಚಿತತೆ ಹಾಗೂ ಪರಿಪೂರ್ಣ ವಿಶ್ವಾಸವಿರುತ್ತದೆ: "ಅದೇನೂ ಅಲ್ಲ, ಅದು ಸಾಗಿ ಹೋಗುವುದು, ಅದು ನಿಶ್ಚಿತವಾಗಿ ಹೊರಟು ಹೋಗುವುದು. ನಾನು ನಾಳೆ ಇಲ್ಲವೆ ಕೆಲವೇ ದಿನಗಳಲ್ಲಿ ಗುಣಮುಖನಾಗುವೆ" – ನಿಮಗೆ ಹಿಡಿದುಕೊಂಡದ್ದು ಏನೇ ಆಗಿರಬಹುದು. ಅದು ನಿಜವಾಗಿ ದೇಹದ ಸಾಮಾನ್ಯ ಸ್ಥಿತಿ. ತನ್ನ (ದೇಹದ) ಮುಂದೆ ಇಡೀ ಜೀವನ ಚಾಚಿಕೊಂಡಿದೆ ಮತ್ತು ಎಲ್ಲವೂ ಒಳ್ಳೆಯದಾಗುವುದು. ಮತ್ತು ಇದು ಭವ್ಯ ರೀತಿಯಲ್ಲಿ ಸಹಾಯಕವಾಗುವುದು. ಹತ್ತು ಸಂದರ್ಭಗಳಲ್ಲಿ ಮನುಷ್ಯ ಒಂಬತ್ತರಷ್ಟು ಸಲ ಗುಣಮುಖನಾಗುತ್ತಾನೆ.

“ಇದೇನೂ ಅಲ್ಲ, ಅದಾಗಿದ್ದಾದರೂ ಏನು? ಕೇವಲ ಒಂದು ಅಪಘಾತ, ಅದು ಸಾಗಿ ಹೋಗುವುದು, ಅದೇನೂ ಅಲ್ಲ” ಎಂಬ ವಿಶ್ವಾಸದೊಂದಿಗೆ ಮನುಷ್ಯ ಬಹು ಬೇಗನೆ ಗುಣಮುಖನಾಗುತ್ತಾನೆ. ಈ ವಿಶ್ವಾಸವನ್ನು ಬಹಳ ಕಾಲದವರೆಗೆ ಕಾಪಾಡಿಕೊಂಡು ಬರುವ ಜನರಿದ್ದಾರೆ, ತಮಗೇನೂ ಆಗುವುದಿಲ್ಲವೆಂಬ ಗಾಢ ನಂಬಿಕೆ ಅದಾಗಿರುತ್ತದೆ. ಅವರ ಜೀವನ ಪೂರ್ತಿಯಾಗಿ ಅವರೆದುರಿಗೆ ಇರುತ್ತದೆ ಮತ್ತು ಅವರಿಗೇನೂ ಸಂಭವಿಸುವುದಿಲ್ಲ. ಅವರಿಗೆ ಏನು ಸಂಭವಿಸಬಹುದು ಎಂಬುದಕ್ಕೆ ಯಾವ ಮಹತ್ವವೂ ಇರುವುದಿಲ್ಲ, ಅವಶ್ಯವಾಗಿ ಎಲ್ಲವೂ ಒಳ್ಳೆಯ–ದಾಗುತ್ತದೆ, ಅವರೆದುರಿಗೆ ಅವರ ಇಡೀ ಜೀವನವಿರುತ್ತದೆ. ಸ್ವಾಭಾವಿಕವಾಗಿ, ನೀವು ಅಸ್ವಸ್ಥ ವಿಚಾರಗಳು ಹಾಗೂ ಜನರಿರುವ ಪರಿಸರಗಳಲ್ಲಿ ಜೀವಿಸುತ್ತಿದ್ದರೆ, ಅವರು ದುರಂತಗಳು ಹಾಗೂ ಅನಾಹುತಗಳು ಇರುವ ವಿಷಯಗಳನ್ನು ವಿವರವಾಗಿ ಹೇಳುತ್ತ ತಮ್ಮ ಸಮಯ ಕಳೆಯುತ್ತಿದ್ದರೆ ಆಗ ನೀವು ತಪ್ಪಾಗಿ ಯೋಚಿಸಬಹುದು. ಮತ್ತು ನೀವು ತಪ್ಪಾಗಿ ಯೋಚಿಸಿದರೆ ಅಂತಹ ಯೋಚನೆ ನಿಮ್ಮ ದೇಹದ ಮೇಲೆ ಪ್ರತಿಕ್ರಿಯೆ ತೋರಿಸುತ್ತದೆ. ಹಾಗಿಲ್ಲದಿದ್ದರೆ ದೇಹ, ಅದಿದ್ದ ಹಾಗೆ, ಈ ಗಾಢ ನಂಬಿಕೆಯನ್ನು ನಲವತ್ತು ಇಲ್ಲವೆ ಐವತ್ತು ವರ್ಷಗಳವರೆಗೆ ಕಾಪಾಡಿಕೊಂಡು ಬರಬಲ್ಲದು – ಅದು ಜನರ ಮೇಲೆ ಅವಲಂಬಿಸಿರುತ್ತದೆ, ಕೆಲವರು ಸಾಮಾನ್ಯ, ಸಮತೋಲನದ ಜೀವನವನ್ನು ಹೇಗೆ ಜೀವಿಸಬೇಕೆಂಬುದನ್ನು ತಿಳಿದಿರುತ್ತಾರೆ. ಆದರೆ ದೇಹ ತನ್ನ ಜೀವನದ ಬಗ್ಗೆ ಗಾಢ ನಂಬಿಕೆಯೊಂದಿ–ಗಿರುತ್ತದೆ. ಯೋಚನೆ ಮಧ್ಯೆ ಪ್ರವೇಶಿಸಿ ಎಲ್ಲ ಬಗೆಯ ಅನಾರೋಗ್ಯಕರ ಕಲ್ಪನೆಗಳನ್ನು ಒಳಗೆ ತಂದಾಗ, ನಾನು ಹೇಳಿದ ಹಾಗೆ, ಅದು ಪ್ರತಿಯೊಂದನ್ನು ಬದಲಿಸುತ್ತದೆ. ನಾನು ಅಂತಹ ಉದಾಹರಣೆಗಳನ್ನು ನೋಡಿದ್ದೇನೆ. ಚಿಕ್ಕ ಮಕ್ಕಳು ಓಡುತ್ತಿರುವಾಗ, ಆಟವಾಡುತ್ತಿರುವಾಗ ಈ ಬಗೆಯ ಅಪಘಾತಗಳಿಗೆ ಈಡಾದಾಗ, ಅವರು ಅದನ್ನು ಕುರಿತು ಯೋಚನೆ ಕೂಡ ಮಾಡುತ್ತಿರಲಿಲ್ಲ.

*


**ಕ್ರಿಯಾಶೀಲ ನಂಬಿಕೆ**

ಈಗ ನೀವು “ಕ್ರಿಯಾಶೀಲ ನಂಬಿಕೆ” ಕುರಿತು ಮಾತನಾಡುತ್ತಿದ್ದೀರಿ. ಕ್ರಿಯಾಶೀಲ ನಂಬಿಕೆ ಭಿನ್ನವಾದ ಏನೋ ಒಂದು. ಮನುಷ್ಯ ತನ್ನೊಳಗೆ ದೈವೀ ಕೃಪೆಯಲ್ಲಿ ನಂಬಿಕೆಯನ್ನಿರಿಸಿದರೆ ಹಾಗೂ ದೈವೀ ಕೃಪೆ ತನ್ನ ಮೇಲೆ ಗಮನವಿರಿಸುತ್ತಿದೆ ಎಂಬುದನ್ನರಿತುಕೊಂಡರೆ, ಏನೇ ಸಂಭವಿಸಲಿ ದೈವೀ ಕೃಪೆ

ಅಲ್ಲಿದೆ, ತನ್ನ ಮೇಲೆ ಗಮನವಿರಿಸಿದೆ ಎಂದು ಭಾವಿಸಿದರೆ ಈ ಬಗೆಯ ನಂಬಿಕೆಯನ್ನು ಅವನು ತನ್ನ ಜೀವನಪರ್ಯಂತ ಮತ್ತು ಯಾವಾಗಲೂ ಕಾಪಾಡಿಕೊಂಡು ಬರಬಹುದು, ಮತ್ತು ಇದರೊಂದಿಗೆ ಮನುಷ್ಯ ಎಲ್ಲ ಅಪಾಯಗಳ ಮೂಲಕ ಸಾಗಿ ಹೋಗಬಹುದು, ಎಲ್ಲ ತೊಂದರೆಗಳನ್ನು ಎದುರಿಸಬಹುದು ಮತ್ತು ಯಾವುದೂ ಅಲುಗಾಡುವುದಿಲ್ಲ, ಏಕೆಂದರೆ ನಿಮ್ಮಲ್ಲಿ ನಂಬಿಕೆಯಿದೆ ಮತ್ತು ದೈವೀ ಕೃಪೆ ನಿಮ್ಮೊಂದಿಗಿದೆ. ಅದು ಅನಂತಪಟ್ಟು ದೃಢವಾದದ್ದು, ಹೆಚ್ಚು ಪ್ರಜ್ಞಾಪೂರ್ಣವಾದದ್ದು, ಬಹಳ ಕಾಲ ಉಳಿದುಕೊಳ್ಳುವ ಶಕ್ತಿಯಾಗಿದ್ದು ಅದು ನಿಮ್ಮ ಭೌತಿಕ ಮೈಕಟ್ಟಿನ ಸ್ಥಿತಿಗಳ ಮೇಲೆ ಅವಲಂಬಿಸಿರುವುದಿಲ್ಲ, ದೈವೀ ಕೃಪೆಯೊಂದರ ಹೊರತಾಗಿ ಬೇರೆ ಯಾವುದರ ಮೇಲೂ ಅವಲಂಬಿಸಿರುವುದಿಲ್ಲ, ಮತ್ತು ಹಾಗಾಗಿ ಅದು ದೈವೀ ಸತ್ಯದ ಮೇಲಷ್ಟೇ ವಾಲಿಕೊಂಡಿರುತ್ತದೆ, ಯಾವುದೂ ಅದನ್ನು ಅಲುಗಾಡಿಸಲಾರದು. ಅದು ಬಹಳ ಭಿನ್ನವಾದದ್ದು.

**CWM, 5/296–97** **– ಶ್ರೀಮಾತೆ**

*



"ಎಲ್ಲ ಸಂದರ್ಭಗಳಲ್ಲಿ ನಿಮ್ಮ ಗುರುವಿಗೆ, ಅವನು ಯಾರೇ ಆಗಿರಲಿ, ನಿಷ್ಠಾವಂತರಾಗಿರಿ. ನೀವು ಸಾಗಿ ಹೋಗಬಹುದಾಗುವಷ್ಟು ದೂರ ಅವನು

ನಿಮ್ಮನ್ನು ಕರೆದೊಯ್ಯುತ್ತಾನೆ. ಭಗವಂತನೇ ನಿಮ್ಮ ಗುರುವಾಗುವ ಭಾಗ್ಯ ನಿಮ್ಮದಾಗಿದ್ದರೆ ಆಗ ನಿಮ್ಮ ಸಿದ್ಧಿಗೆ ಮಿತಿ ಇರುವುದಿಲ್ಲ.

**CWM, 12/63** **– ಶ್ರೀಮಾತೆ**

*

## ನಂಬಿಕೆಯ ಸೇತುವೆಯನ್ನು ನಿರ್ಮಾಣ ಮಾಡುವುದು

### ಜಗತ್ತಿನ ಅಸ್ತಿತ್ವ ಭಗವಂತನಿರುವುದನ್ನು ಪ್ರಮಾಣೀಕರಿಸಲು ಸಾಕಾಗುತ್ತದೆ

ಒಂದು ಬಗೆಯ ಪರಿಪೂರ್ಣತೆಗಾಗಿ ಮನುಷ್ಯನಲ್ಲಿ ದಾಹವಿರುತ್ತದೆ: ಅದು ಬಹುಶಃ ತನ್ನನ್ನು ತಾನೇ ದಾಟಿ ಹೋಗುವುದಕ್ಕಾಗಿರಬಹುದು, ತಾನಿರುವುದಕ್ಕಿಂತ ಉಚ್ಚತರವಾದುದರತ್ತ ತಲುಪುವುದಕ್ಕಾಗಿರಬಹುದು; ಒಬ್ಬ ಲೋಕೋಪಕಾರಿ–ಯಾಗಿದ್ದರೆ, ಇನ್ನೊಬ್ಬನಲ್ಲಿ ಮನುಕುಲ ಇನ್ನೂ ಹೆಚ್ಚು ಒಳ್ಳೆಯದಾಗಲಿ ಇಲ್ಲವೆ ಕಡಿಮೆ ಅಸಂತೋಷಕರವಾದದ್ದು, ಕಡಿಮೆ ದುಃಖಿತವಾದದ್ದು ಆಗಲಿ ಎಂಬ ಅಭೀಪ್ಸೆಯಿರಬಹುದು, ಇಂತಹ ಎಲ್ಲ ಬಗೆಯ ವಿಷಯಗಳಿರುತ್ತವೆ. ಮನುಷ್ಯ ಅವುಗಳಿಗಾಗಿ ಯೋಗಾಚರಣೆ ಮಾಡಬಹುದು, ಆದರೆ ಅದು ನಂಬಿಕೆಯನ್ನು ಇರಿಸಿಕೊಂಡ ಹಾಗಲ್ಲ. ನೆಚ್ಚಿಕೊಳ್ಳುವುದೆಂದರೆ ಭಗವಂತನಿಲ್ಲದೆ ಜಗತ್ತೊಂದು ಅಸ್ತಿತ್ವದಲ್ಲಿರಲು ಸಾಧ್ಯವಿಲ್ಲ ಎಂಬ ನಂಬಿಕೆಯನ್ನು ಹೊಂದಿರುವುದಾಗಿದೆ, ಜಗತ್ತಿನ ಅಸ್ತಿತ್ವವೇ ಸ್ವತಃ ಭಗವಂತನ ಅಸ್ತಿತ್ವವನ್ನು ಪ್ರಮಾಣೀಕರಿಸುತ್ತದೆ. ಮತ್ತು ಕೇವಲ ಒಂದು ನಂಬಿಕೆಯಲ್ಲ, ಮನುಷ್ಯ ಯೋಚಿಸಿ ಕಂಡುಕೊಂಡದ್ದಲ್ಲ ಇಲ್ಲವೆ ಬೇರೆಯವರಿಂದ ಕಲಿತುಕೊಂಡದ್ದಲ್ಲ, ಅಂತಹದೇನೂ ಅಲ್ಲ. ಅದು ನಂಬಿಕೆ, ಜೀವಂತ ಜ್ಞಾನದಂತಿರುವ ನಂಬಿಕೆ, ದೊರಕಿಸಿದ ವಿಷಯವಲ್ಲ, ಜಗತ್ತಿನ ಅಸ್ತಿತ್ವವೇ ಭಗವಂತನಿರುವುದನ್ನು ಪ್ರಮಾಣೀಕರಿಸುವುದಕ್ಕೆ ಸಾಕಾಗುತ್ತದೆ. ಭಗವಂತನಿಲ್ಲದೆ ಜಗತ್ತಿರುವುದಿಲ್ಲ. ಮತ್ತು ಇದು ಎಷ್ಟು ಸ್ಪಷ್ಟವಾಗಿದೆ ಎಂದರೆ ಹಾಗಿರದೆ ಇರುವುದನ್ನು ಕುರಿತು ಯೋಚಿಸಲು ಮನುಷ್ಯ ಸ್ವಲ್ಪ ಮಟ್ಟಿಗೆ ದಡ್ಡನಾಗಿರಬೇಕು. ಭಗವಂತನನ್ನು "ಉದ್ದೇಶ" ಇಲ್ಲವೆ "ಗುರಿ" ಇಲ್ಲವೆ "ಕೊನೆ" ಇಂತಹ ಅರ್ಥದಲ್ಲಿ ಕಂಡುಕೊಳ್ಳುವುದಲ್ಲ, ಜಗತ್ತು ಅದಿದ್ದ ಹಾಗೆ ಭಗವಂತನೇ ಆಗಿದೆ – ಹೆಚ್ಚಾಗಿ ವಿರೂಪಗೊಂಡ ಮುಖದಲ್ಲಿ, ಆದರೆ ಆದಾಗ್ಯೂ ...

ನನಗೆ ಅದಿನ್ನೂ ಅದಕ್ಕಿಂತ ಹೆಚ್ಚು ಬಲವತ್ತರವಾದ ವಿಷಯ, ನಾನು

ಗುಲಾಬಿ ಹೂವಿನತ್ತ ನೋಡುತ್ತೇನೆ, ಅದು ಸ್ವಯಂಪ್ರೇರಿತ ಸೌಂದರ್ಯವನ್ನು ತನ್ನೊಳಗೆ ಎಷ್ಟೊಂದು ಕೇಂದ್ರೀಕರಣಗೊಳಿಸಿಕೊಂಡ ವಸ್ತುವಾಗಿರುತ್ತದೆ – ಅದು ಮನುಷ್ಯನಿಂದ ತಯಾರು ಮಾಡಿದ್ದಲ್ಲ, ಸ್ವಯಂಪ್ರೇರಿತವಾದದ್ದು, ಒಂದು ಅರಳಿಕೊಳ್ಳುವಿಕೆ; ಅಲ್ಲಿ ಭಗವಂತನಿದ್ದಾನೆ ನಿಶ್ಚಿತತೆ ಪಡೆಯುವುದಕ್ಕೆ ಕೇವಲ ಅದರತ್ತ ನೋಡಬೇಕು. ಅದೊಂದು ನಿಶ್ಚಿತತೆ. ನಂಬದೆ ಇರುವುದು ಅಸಾಧ್ಯವಾದದ್ದು. ಅದು ಆ ಜನರಿದ್ದ ಹಾಗಿದೆ (ಇದು ವಿಚಿತ್ರವಾದದ್ದು) ಅವರು ಪ್ರಕೃತಿಯನ್ನು ಕುರಿತು ಅಭ್ಯಾಸ ಮಾಡುತ್ತಾರೆ, ಅದನ್ನು ನಿಜವಾಗಿ, ಕೂಲಂಕಷವಾಗಿ, ಅಭ್ಯಾಸ ಮಾಡುತ್ತಾರೆ, ಪ್ರತಿಯೊಂದರ ಕಾರ್ಯ ವಿಧಾನವೇನು, ಅದು ತಯಾರಾಗಿ ಬಂದದ್ದು ಹೇಗೆ, ಅಸ್ತಿತ್ವದಲ್ಲಿರುವುದು ಹೇಗೆ ಎಂಬುದೆಲ್ಲವನ್ನು ಗಮನಿಸುತ್ತಾರೆ, ಭಗವಂತ ಅಲ್ಲಿದ್ದಾನೆ ಎಂಬುದರ ಬಗ್ಗೆ ಮನವರಿಕೆ ಮಾಡಿಕೊಳ್ಳದೆ ಇದನ್ನೆಲ್ಲ ನಿಷ್ಕಾಪಟ್ಯದಿಂದ, ಲಕ್ಷ್ಯಗೊಟ್ಟು ಅವರು ಹೇಗೆ ಕೈಕೊಳ್ಳಬಲ್ಲರು? ನಾವು ಅದನ್ನು ಭಗವಂತನೆಂದು ಕರೆಯುತ್ತೇವೆ – ಆ ಭಗವಂತ ಚಿಕ್ಕವನಾಗಿದ್ದಾನೆ! (ಶ್ರೀಮಾತೆಯವರು ನಗುತ್ತಾರೆ.) ಅದು ಅಲ್ಲಿದೆ ಎಂಬುದಕ್ಕೆ ಅಸ್ತಿತ್ವ ನಿರ್ವಿವಾದವಾದ ಪ್ರಮಾಣವಾಗಿದೆ. ... ಅಲ್ಲಿ ಆ ದೈವೀ ವಸ್ತು(ತತ್)ವಲ್ಲದೆ ಬೇರೇನೂ ಇಲ್ಲ ... ಅದು ನಾವು ಹೆಸರಿಸಲಾಗದ, ವ್ಯಾಖ್ಯೆ ನೀಡಲಾಗದ, ವರ್ಣಿಸಲಾಗದ, ಏನೋ ಒಂದು, ಆದರೆ ಅದು ನಮ್ಮ ಭಾವನೆಗೆ ಬರುತ್ತದೆ ಮತ್ತು ಹೆಚ್ಚು ಹೆಚ್ಚಾಗಿ ಅದಾಗಬಲ್ಲೆವು. ಎಲ್ಲ ಪರಿಪೂರ್ಣತೆಗಳಿಗಿಂತ ಹೆಚ್ಚು ಪರಿಪೂರ್ಣವಾದ, ಎಲ್ಲ ಸೌಂದರ್ಯಗಳಿಗಿಂತ ಹೆಚ್ಚು ಸುಂದರವಾದ, ಎಲ್ಲ ಅದ್ಭುತಗಳಿಗಿಂತ ಹೆಚ್ಚು ಅದ್ಭುತವಾದ ದೈವಿಕವಾದ ಏನೋ ಒಂದು; ಅದರಿಂದಾಗಿ ಅಸ್ತಿತ್ವದಲ್ಲಿರುವ ಇಡಿಯಾದುದೆಲ್ಲವೂ ಅದನ್ನು ಅಭಿವ್ಯಕ್ತ–ಪಡಿಸಲಾಗದು. ಅಲ್ಲಿ ದೈವಿಕವಾದ ತತ್ ಅಲ್ಲದೆ ಬೇರೇನೂ ಇಲ್ಲ. ಅದು ಶೂನ್ಯದಲ್ಲಿ ತೇಲುತ್ತಿರುವ ಏನೋ ಒಂದಲ್ಲ. ಅಲ್ಲಿ ತತ್ ಅಲ್ಲದೆ ಬೇರೇನೂ ಇಲ್ಲ.

**CWM, 14/341–42** **– ಶ್ರೀಮಾತೆ**

*

**ಮಹತ್ವಾಕಾಂಕ್ಷೆಯೊಂದಿಗೆ ಕಳಂಕಿತವಾದ ನಂಬಿಕೆ**

**ಪ್ರಶ್ನೆ :** *ಶ್ರೀಮಾತೆಯವರೆ, ಮಹತ್ವಾಕಾಂಕ್ಷೆಯಿಂದ ಕಳಂಕಿತವಾದ, ಅಹಂಮನ್ಯತೆ–ಯಿಂದ ಕೂಡಿದ ನಂಬಿಕೆ ಎಂದರೇನು?*

**ಶ್ರೀಮಾತೆ :** ಹೌದು, ಉದಾಹರಣೆಗೆ ಮನುಷ್ಯ ಮಹತ್ವ ಹೊಂದಿದ ಯಾರೋ ಒಬ್ಬರಾಗಬೇಕೆಂದು ಬಯಸಿದರೆ, ಇಲ್ಲವೆ ಶ್ರೇಷ್ಠ ಸಾಧಕನೆಂದು, ಶ್ರೇಷ್ಠ ಸನ್ಯಾಸಿಯೆಂದು, ಶ್ರೇಷ್ಠ ಯೋಗಿಯೆಂದು ತನ್ನ ಸುತ್ತಲಿದ್ದವರಿಂದ ಹೊಗಳಿಕೆಯನ್ನು ಬಯಸಿದರೆ, ಅತ್ಯಂತ ಮಹತ್ವವುಳ್ಳವನಾಗಲು ಬಯಸಿದರೆ ಆಗ ಅದನ್ನು ಮಹತ್ವಾಕಾಂಕ್ಷೆಯಿಂದ ತುಂಬಿಕೊಂಡ ನಂಬಿಕೆ ಎಂದು ಕರೆಯುತ್ತಾರೆ. ಇದು ಸಂಭವಿಸಬಹುದೆಂದು ನಿಮ್ಮಲ್ಲಿ ನಂಬಿಕೆ ಇರುತ್ತದೆ, ನಿಮಗೆ ಭಗವಂತನಲ್ಲಿ ನಂಬಿಕೆಯಿದೆ, ಆದರೆ ಅದು ಚಿಕ್ಕ ವೈಯಕ್ತಿಕ ಒಣಜಂಬಕ್ಕಾಗಿ, ಇದು ಈ ನಂತರ ಪರಿಶುದ್ಧವಾದ, ನಿಷ್ಕಪಟವಾದ, ನೈಜವಾದ ಏನೋ ಒಂದಲ್ಲ. ಅದು ಇಡಿಯಾಗಿ ವೈಯಕ್ತಿಕ ಲಾಭಕ್ಕಾಗಿ ಇರುತ್ತದೆ. ಸ್ವಾಭಾವಿಕವಾಗಿ ಇದರಲ್ಲಿ ಸ್ವ–ಸಮರ್ಪಣೆಯ ಯಾವ ಪ್ರಶ್ನೆಯೂ ಇರುವುದಿಲ್ಲ, ಅದು ನಿಮಗೆ ಕೂಡಿಡಲು ಸಾಧ್ಯವಾಗುವಷ್ಟು ಶಕ್ತಿಗಳನ್ನು ಕೂಡಿಡುವುದಾಗಿದೆ, ಅದು ನಿಜವಾದ ಚಲನೆಯ ವಿರುದ್ಧವಾಗಿರುತ್ತದೆ. ಮನುಷ್ಯ ಯೋಚಿಸಬಹುದಾದುದಕ್ಕಿಂತಲೂ ಹೆಚ್ಚಾಗಿ ಇದು ಬಹಳಷ್ಟು ಸಲ ಸಂಭವಿಸುತ್ತದೆ. ಮಹತ್ವಾಕಾಂಕ್ಷೆಯ ಈ ಚಲನೆ ಬಹಳಷ್ಟು ಸಲ ಸತ್ತೆಯ ಆಳಗಳಲ್ಲಿಯೇ ಅವಿತುಕೊಂಡಿರುತ್ತದೆ ಮತ್ತು ಅದು ನಿಮ್ಮನ್ನು ಮುನ್ನೂಕುತ್ತದೆ, ಹಿಂದಿನಿಂದ ಹೀಗೆ ... ಅದು ನಿಮಗೆ ಚಾಟಿ ಏಟು ನೀಡುತ್ತದೆ, ಅದರಿಂದಾಗಿ ನೀವು ಮುಂದುವರಿಯುತ್ತೀರಿ. ಅದು ಪರದೆಯ ಹಿಂದಿರುವ ಒಂದು ಬಗೆಯ ಗರ್ವ.

**CWM, 6/237–38** **– ಶ್ರೀಮಾತೆ**

*

**ಸಂಭವಿಸುವುದೆಲ್ಲ ಯಾವಾಗಲೂ ಅತ್ಯಂತ ಒಳ್ಳೆಯದಕ್ಕಾಗಿರುತ್ತದೆ ಎಂಬ ನಂಬಿಕೆ**

ಸದ್ಯದ ಕ್ಷಣದಲ್ಲಿ ಅದು ಒಳ್ಳೆಯದೆಂದು ನಾವು ಪರಿಗಣಿಸದೆ ಇರಬಹುದು, ಏಕೆಂದರೆ ನಾವು ಅಜ್ಞಾನಿಗಳೂ ಹಾಗೂ ಕುರುಡರೂ ಆಗಿದ್ದೇವೆ, ನಾವು ವಿಷಯಗಳ ಪರಿಣಾಮಗಳನ್ನು ನೋಡುವುದಿಲ್ಲ ಮತ್ತು ನಂತರ ಏನು ಸಂಭವಿಸಲಿದೆ ಎಂಬುದು ನಮಗೆ ತಿಳಿದಿರುವುದಿಲ್ಲ. ಆದರೆ ನಾವು ನಂಬಿಕೆಯನ್ನು ಇಟ್ಟುಕೊಳ್ಳಬೇಕು: ಅದು ಹಾಗಿದ್ದುದಾದರೆ, ನಾವು ಭಗವಂತನನ್ನು ನೆಚ್ಚಿ–ಕೊಂಡಿದ್ದರೆ, ಅವನಿಗೆ ನಮ್ಮ ಪೂರ್ತಿ ಜವಾಬ್ದಾರಿಯನ್ನು ವಹಿಸಿಕೊಟ್ಟರೆ, ನಮಗಾಗಿ ಪ್ರತಿಯೊಂದನ್ನೂ ನಿರ್ಧರಿಸುವುದನ್ನು ಅವನಿಗೆ ಬಿಟ್ಟುಕೊಟ್ಟರೆ, ಸರಿ,

ಸಂಭವಿಸುವುದೆಲ್ಲ ಯಾವಾಗಲೂ ನಮ್ಮ ಅತ್ಯಂತ ಒಳ್ಳೆಯದಕ್ಕಾಗಿರುತ್ತದೆ ಎಂದು ತಿಳಿದುಕೊಳ್ಳಬೇಕು. ಇದು ಪರಿಪೂರ್ಣ ವಾಸ್ತವ ಸಂಗತಿ. ನೀವು ಶರಣಾಗತರಾಗುವಷ್ಟರ ಮಟ್ಟಿಗೆ ನಿಮಗೆ ಅತ್ಯಂತ ಒಳ್ಳೆಯದಾಗುವುದು. ಇದು ನಿಮಗೆ ಇಷ್ಟವಾದುದಕ್ಕೆ, ನೀವು ಆದ್ಯತೆ ನೀಡುತ್ತಿರುವುದಕ್ಕೆ ಇಲ್ಲವೆ ನಿಮ್ಮ ಆಸೆಗೆ ಅನುಗುಣವಾಗಿರದೇ ಇರಬಹುದು, ಏಕೆಂದರೆ ಈ ವಿಷಯಗಳೆಲ್ಲ ಕುರುಡಾಗಿ–ರುತ್ತವೆ: ಅದು ಆಧ್ಯಾತ್ಮಿಕ ದೃಷ್ಟಿಕೋನದಿಂದ ಅತ್ಯಂತ ಒಳ್ಳೆಯದಾಗಿರುತ್ತದೆ, ನಿಮ್ಮ ಪ್ರಗತಿಗಾಗಿ, ನಿಮ್ಮ ಅಭಿವೃದ್ಧಿಗಾಗಿ, ನಿಮ್ಮ ಆಧ್ಯಾತ್ಮಿಕ ಬೆಳವಣಿಗೆಗಾಗಿ, ನಿಮ್ಮ ನಿಜವಾದ ಜೀವನಕ್ಕಾಗಿ ಅತ್ಯಂತ ಒಳ್ಳೆಯದಾಗಿರುತ್ತದೆ. ಅದು ಯಾವಾಗಲೂ ಅದೇ ಆಗಿರುತ್ತದೆ. ನೀವು ಈ ನಂಬಿಕೆಯನ್ನು ಕಾಪಾಡಿಕೊಂಡು ಬರಬೇಕು, ಏಕೆಂದರೆ ನಂಬಿಕೆ ಭಗವಂತನಲ್ಲಿ ಇರಿಸಿದ ವಿಶ್ವಾಸದ ಅಭಿವ್ಯಕ್ತಿ ಮತ್ತು ಭಗವಂತನಿಗೆ ನೀವು ಮಾಡಿಕೊಂಡಿರುವ ಸ್ವ–ಸಮರ್ಪಣೆಯಾಗಿರುತ್ತದೆ. ಮತ್ತು ಅದನ್ನು ಕೈಕೊಂಡಾಗ, ಅದು ಪರಿಪೂರ್ಣವಾಗಿ ಅದ್ಭುತವಾಗಿರುವ ಏನೋ ಒಂದು. ಅದು ವಾಸ್ತವ ಸಂಗತಿ, ಇವು ಕೇವಲ ಶಬ್ದಗಳಲ್ಲ, ಅದು ವಾಸ್ತವ ಸಂಗತಿ, ತಿಳಿಯಿತೆ? ನಿಮಗೆ ಸಂಭವಿಸಿದ ಎಲ್ಲ ಬಗೆಯ ಸಂಗತಿಗಳತ್ತ, ಅವು ಸಂಭವಿಸಿದಾಗ ಅರ್ಥವಾಗಿರದೆ ಇರುವವುಗಳತ್ತ ನೀವು ಹಿಂತಿರುಗಿ ನೋಡಿದಾಗ, ನಿಮಗೆ ಅವಶ್ಯವಾದದ್ದೇ ಆಗಿತ್ತು ಎಂಬುದನ್ನು ಅರಿತುಕೊಳ್ಳುವಿರಿ, ಅದು ಅವಶ್ಯವಾದ ಪ್ರಗತಿಯನ್ನು ಸಾಧಿಸುವತ್ತ ನಿಮ್ಮನ್ನು ಒತ್ತಾಯಪಡಿಸುವುದಕ್ಕಿತ್ತು. ಅಪವಾದಕ್ಕೆ ಅವಕಾಶ ಕೊಡದೆ ಇದು ಯಾವಾಗಲೂ ಹಾಗಿರುತ್ತದೆ. ನಮ್ಮ ಕುರುಡುತನ ಅದನ್ನು ನೋಡುವುದಕ್ಕೆ ತಡೆ ಒಡ್ಡುತ್ತದೆ.

**CWM, 6/349** **– ಶ್ರೀಮಾತೆ**


*

ಆ ಯೋಗದತ್ತ ನೀವು ಬಂದಾಗ ನಿಮ್ಮ ಎಲ್ಲ ಮಾನಸಿಕ ನಿರ್ಮಾಣಗಳು, ನಿಮ್ಮ ಎಲ್ಲ ಪ್ರಾಣಿಕ ಹಂದರಗಳು ಚೂರು ಚೂರಾಗುವಂತೆ ಮಾಡಲು ನೀವು ತಯಾರಾಗಿರಬೇಕು. ನಿಮ್ಮ ಗತಕಾಲದ ಆತ್ಮವನ್ನು ಹಾಗೂ ಅದರ ಅಂಟಿಕೊಳ್ಳುವಿಕೆಗಳನ್ನು ಒಟ್ಟಿನಲ್ಲಿ ಮರೆಯಬೇಕಾಗುವುದು, ಅದನ್ನು ನಿಮ್ಮ ಪ್ರಜ್ಞೆಯಿಂದ ಕಿತ್ತಿಹಾಕಿ ಹೊಸಜನ್ಮ ತಾಳಬೇಕಾಗುವುದು, ಎಲ್ಲ ಬಂಧನದಿಂದ ಮುಕ್ತರಾಗಬೇಕಾಗುವುದು. ನೀವೇನಾಗಿದ್ದಿರಿ ಎಂಬುದನ್ನು ಕುರಿತು

ಯೋಚಿಸುವುದು ಬೇಡ, ನೀವೇನಾಗಲು ಅಭೀಪ್ಸೆ ಪಡುತ್ತೀರಿ ಎಂಬುದನ್ನು ಕುರಿತು ಯೋಚಿಸಿರಿ, ನೀವು ಸಿದ್ಧಿಸಿಕೊಳ್ಳಬೇಕಾದುದರಲ್ಲಿ ಒಟ್ಟಿನಲ್ಲಿ ಇದ್ದು ಬಿಡಿರಿ. ನಿಮ್ಮ ಮೃತ ಗತಕಾಲದಿಂದ ಹೊರಳಿರಿ ಮತ್ತು ನೇರವಾಗಿ ಭವಿಷ್ಯದತ್ತ ನೋಡಿರಿ. ನಿಮ್ಮ ಧರ್ಮ, ದೇಶ, ಕುಟುಂಬ ಅಲ್ಲಿರುತ್ತವೆ, ಅದೆಲ್ಲವೂ ಭಗವಂತ.

**CWM, 3/83–84** **– ಶ್ರೀಮಾತೆ**

*



ಆತ್ಮವಿಶ್ವಾಸದ ಮತ್ತು ಭಗವಂತನಲ್ಲಿರಿಸಿದ ನಂಬಿಕೆಯ ಒಂದು ನಗು ಅತ್ಯಂತ ಹಾನಿಯನ್ನುಂಟು ಮಾಡಲು ಸಾಧ್ಯವಾಗಬಹುದಾದ ಬಲವಿದ್ದ ಹಾಗೆ – ಅದು ಶತ್ರುಗಳ ಮುಂಚೂಣಿಯನ್ನು ಸ್ಫೋಟಿಸುತ್ತದೆ, ಸೈನಿಕರ ಸಾಲುಗಳಲ್ಲಿ

ಅಲ್ಲೋಲ ಕಲ್ಲೋಲವನ್ನು ಪಸರಿಸುತ್ತದೆ ಮತ್ತು ನಿಮ್ಮನ್ನು ವಿಜಯಿಯಾಗಿಸಿ ಮುನ್ನಡೆಸುತ್ತದೆ.

**CWM, 3/139** **– ಶ್ರೀಮಾತೆ**

*

**ಯಾವಾಗಲೂ ನಂಬಿಕೆಯನ್ನು ಕಾಪಾಡಿಕೊಂಡು ಬರಬೇಕು**

**ಪ್ರಶ್ನೆ :** *"ಯಾವಾಗಲೂ ದೋಷಗಳನ್ನು ಹಾಗೂ ತಪ್ಪಾದ ಚಲನೆಗಳನ್ನು ಅವಲೋಕನ ಮಾಡುವುದರಿಂದ ಖಿನ್ನತೆ ಉಂಟಾಗುತ್ತದೆ, ಎದೆಗುಂದುವಿಕೆ ಬರುತ್ತದೆ" ಅದು ನಂಬಿಕೆಯನ್ನು ಹೇಗೆ ಎದೆಗುಂದಿಸುತ್ತದೆ?*

**ಶ್ರೀಮಾತೆ :** ಅಲ್ಲಿ ಹೇಳಲಾದದ್ದು ದೈವೀ ಕೃಪೆಯಲ್ಲಿ ನಂಬಿಕೆ ಇರಿಸುವುದನ್ನು ಮತ್ತು ಕೈಗೆತ್ತಿಕೊಂಡದ್ದರಲ್ಲಿ ಕೊನೆಯ ಯಶಸ್ಸನ್ನು ಪಡೆಯುವುದನ್ನು ಕುರಿತಾದದ್ದು. ನೀನು ಯೋಗಾಚರಣೆಯನ್ನು ಪ್ರಾರಂಭಿಸಿರುವಿ ಮತ್ತು ಅದರಾದ್ಯಂತ ಸಾಗಿ ಹೋಗಿ ಯೋಗದ ಕೊನೆಯನ್ನು ತಲುಪುವೆ ಎಂಬ ನಂಬಿಕೆಯನ್ನು ಹೊಂದಿರುವಿ. ಆದರೆ ನೀನು ನಿನ್ನ ವೇಳೆಯನ್ನು ಮುನ್ನಡೆಗೆ ಆತಂಕ ಒದಗಿಸುತ್ತಿರುವುದನ್ನು ನೋಡುತ್ತ ಕಳೆದರೆ, ಕೊನೆಗೆ ಹೇಳುತ್ತೀ: "ಅಹಾ, ನಾನೆಂದಿಗೂ ಯಶಸ್ವಿಯಾಗುವುದಿಲ್ಲ, ಅದು ಸಾಧ್ಯವಿಲ್ಲ, ಅದು ಈ ರೀತಿ ನಡೆದು ಹೋಗುತ್ತಿದ್ದರೆ ನಾನಲ್ಲಿಗೆ ತಲುಪಲಾಗುವುದಿಲ್ಲ." ಹಾಗಾಗಿ ಇದು ನಂಬಿಕೆಯನ್ನು ಕಳೆದುಕೊಳ್ಳುವುದಾಗಿದೆ. ತಾನು ಯಶಸ್ವಿಯಾಗುವೆ ಎಂಬ ನಂಬಿಕೆಯನ್ನು ಮನುಷ್ಯ ಯಾವಾಗಲೂ ಕಾಪಾಡಿಕೊಂಡು ಬರಬೇಕು.

ಬಹಳಷ್ಟು ಜನರು ಯೋಗಾಚರಣೆಯನ್ನು ಪ್ರಾರಂಭಿಸುತ್ತಾರೆ ಮತ್ತು ಕೆಲ ಸಮಯ ಕಳೆದ ನಂತರ ಬಂದು ಹೇಳುತ್ತಾರೆ: "ಓಹ್, ನಾನು ಅದರಾದ್ಯಂತ ಎಂದಿಗೂ ಸಾಗಿ ಹೋಗಲಾರೆ, ನನಗೆ ಅತಿ ಹೆಚ್ಚಿನ ತೊಂದರೆಗಳಿವೆ." ಹಾಗಾಗಿ ಇದರರ್ಥ ನಂಬಿಕೆ ಹೊಂದದೆ ಇರುವುದಾಗಿದೆ. ಮನುಷ್ಯ ಪ್ರಾರಂಭಿಸಿದ್ದರೆ, ಅದನ್ನು ನಂಬಿಕೆಯಿಂದ ಕೈಕೊಂಡಿರುತ್ತಾನೆ, ತಾನು ಗುರಿಯನ್ನು ತಲುಪುವೆ ಎಂದುಕೊಂಡಿರುತ್ತಾನೆ. ಈ ನಂಬಿಕೆಯನ್ನು ಕೊನೆಯವರೆಗೂ ಉಳಿಸಿಕೊಂಡು ಬರಬೇಕು. ನಂಬಿಕೆಯನ್ನು ಕಾಪಾಡಿಕೊಂಡು ಬರುವುದರಿಂದ ಮನುಷ್ಯ ಕೊನೆಗೆ ಗುರಿಯನ್ನು ಸಿದ್ಧಿಸಿಕೊಳ್ಳುತ್ತಾನೆ. ಆದರೆ ಮಾರ್ಗದ ಮಧ್ಯದಲ್ಲಿ "ಇಲ್ಲ, ನನಗೆ ಸಾಧ್ಯವಿಲ್ಲ" ಎನ್ನುತ್ತ ನಿಮ್ಮ ಬೆನ್ನನ್ನು ತಿರುಗಿಸಿದರೆ, ಆಗ ಸ್ಪಷ್ಟವಾಗಿ ನೀವು

ಕೊನೆಯನ್ನು ತಲುಪುವುದಿಲ್ಲ. ಕೆಲವು ಜನರು (ಆಧ್ಯಾತ್ಮದ) ಮಾರ್ಗದ ಮೇಲೆ ಸಾಗುವುದನ್ನು ಪ್ರಾರಂಭಿಸುತ್ತಾರೆ, ಕೆಲ ಸಮಯ ಕಳೆದ ನಂತರ, ಅದು ಭಾರದ ನಡಿಗೆ, ದಣಿವನ್ನುಂಟು ಮಾಡುವಂತಹದು, ಕಠಿಣವಾದದ್ದು ಮತ್ತು ತಮ್ಮ ಕಾಲುಗಳು ಸರಿಯಾಗಿ ನಡೆಯುತ್ತಿಲ್ಲ, ಪಾದಗಳು ನೋವನ್ನು ಅನುಭವಿಸಲು ಪ್ರಾರಂಭಿಸುತ್ತವೆ ಎಂಬುದನ್ನು ತಾವೇ ಸ್ವತಃ ಕಂಡುಕೊಳ್ಳುತ್ತಾರೆ. ಅವರು: "ಓಹ್ ಮುನ್ನಡೆದು ಹೋಗುವುದು ಬಹಳ ಕಠಿಣವಾದದ್ದು." ಹಾಗಾಗಿ: "ನಾನು ಪ್ರಾರಂಭಿಸಿರುವೆ, ನಾನು ಕೊನೆಯವರೆಗೆ ಸಾಗಿ ಹೋಗುವೆ" – ಕೈಕೊಳ್ಳಬೇಕಾದುದು ಅದೊಂದೇ ಎಂದು ಹೇಳುವುದರ ಬದಲಾಗಿ – ಅವರು ಅಲ್ಲಿ ನಿಂತುಬಿಡುತ್ತಾರೆ, "ಓ ನಾನು ಎಂದಿಗೂ ಯಶಸ್ಸು ಪಡೆಯಲು ಶಕ್ತನಾಗುವುದಿಲ್ಲ" ಎಂದು ಹೇಳುತ್ತ ಗೋಳಾಡುತ್ತಾರೆ, ಮತ್ತು ನಂತರ ಅವರು ಮಾರ್ಗವನ್ನು ತ್ಯಜಿಸುತ್ತಾರೆ. ಅವರು ಮಾರ್ಗವನ್ನು ತ್ಯಜಿಸಿದರೆ, ಯಶಸ್ಸು ದೊರಕಲಾರದು ಎಂಬುದು ಸ್ಪಷ್ಟವಿದೆ. ಇದು ಮನುಷ್ಯ ತನ್ನ ನಂಬಿಕೆಯನ್ನು ಕಳೆದುಕೊಳ್ಳುವುದಾಗಿದೆ.

ನಂಬಿಕೆಯನ್ನು ಕಾಪಾಡಿಕೊಂಡು ಬರಲು ಹೇಳಬೇಕಾದುದು ಹೀಗಿದೆ: "ಒಳ್ಳೆಯದು, ನನಗೆ ತೊಂದರೆಗಳಿವೆ, ಆದರೆ ನಾನು ಸಾಗಿ ಹೋಗುವೆ." ನಿರಾಶೆ – ಅದು ನಿಮ್ಮ ಕಾಲುಗಳನ್ನು ಕತ್ತರಿಸುತ್ತದೆ, ನಿಮ್ಮನ್ನು ತಡೆಯುತ್ತದೆ, "ಅದು ಮುಗಿದು ಹೋಯಿತು, ನಾನಿನ್ನು ಮುಂದುವರಿಯಲಾರೆ" ಎಂದು ಹೇಳುವ ಸ್ಥಿತಿಯಲ್ಲಿ ಅದು ನಿಮ್ಮನ್ನು ಬಿಟ್ಟು ಕೊಡುತ್ತದೆ. ಅದು ನಿಜವಾಗಿ ಮುಗಿದುಹೋದ ಹಾಗಿರುತ್ತದೆ, ಅದು ಅನುವು ಮಾಡಿಕೊಡದೇ ಇರಬೇಕಾದ ಸಂಗತಿಯಾಗಿದೆ.

ಪ್ರಾರಂಭ ಮಾಡಿದಾಗ ನೀವು ಕೊನೆಯವರೆಗೆ ಸಾಗಿ ಹೋಗಬೇಕು. ಕೆಲವೊಮ್ಮೆ ಉತ್ಸಾಹದಿಂದ ನನ್ನ ಬಳಿ ಬರುವ ಜನರಿಗೆ ನಾನು ಹೇಳುವುದು ಹೀಗಿದೆ: "ಸ್ವಲ್ಪ ಯೋಚನೆ ಮಾಡಿರಿ, ಅದು ಸರಳ ಮಾರ್ಗವಲ್ಲ, ನಿಮಗೆ ಕಾಲಾವಧಿಯ ಆವಶ್ಯಕತೆ ಇರುತ್ತದೆ, ನಿಮಗೆ ತಾಳ್ಮೆ ಬೇಕಾಗುತ್ತದೆ, ನಿಮಗೆ ಸಹಿಷ್ಣುತೆ ಮತ್ತು ಪಟ್ಟುಹಿಡಿಯುವಿಕೆ ಹಾಗೂ ಧೈರ್ಯ ಮತ್ತು ದಣಿವರಿಯದ ಸದಿಚ್ಛೆ ಇವೆಲ್ಲ ಅವಶ್ಯವಾಗುವವು, ಇದೆಲ್ಲವನ್ನೂ ಹೊಂದುವ ಕ್ಷಮತೆ ನಿಮ್ಮಲ್ಲಿದೆಯೇ ಎಂಬುದನ್ನು ಲಕ್ಷ್ಯಗೊಟ್ಟು ನೋಡಿರಿ. ಆದರೆ ಒಮ್ಮೆ ನೀವು ಪ್ರಾರಂಭಿಸಿದಿರೆಂದರೆ, ಅದು ಮುಗಿದು ಹೋದ ಹಾಗೆ, ಇನ್ನು ಮುಂದೆ

ಹಿಂತಿರುಗಿ ಹೋಗುವುದಿರುವುದಿಲ್ಲ; ನೀವು ಕೊನೆಯವರೆಗೆ ಮುಂದುವರಿದು–ಕೊಂಡು ಹೋಗಲೇಬೇಕು."

**CWM, 6/440–41** – **ಶ್ರೀಮಾತೆ**

*

**ಮನುಷ್ಯ ತನ್ನನ್ನು ಅತಿಯಾಗಿ ಹೊಗಳಿಕೊಳ್ಳಬಾರದು**

ಎಷ್ಟೋ ಸಲ, ಮನುಷ್ಯ ತನ್ನನ್ನು ಹೊಗಳಿಕೊಂಡಾಗ ಅದು ಬಹಳ ಬಾಲಿಶವಾಗಿರಬಹುದು... ಆದರೆ ಮನುಷ್ಯ ಏನನ್ನೋ ಕುರಿತು ತನ್ನನ್ನು ಹೊಗಳಿಕೊಂಡಾಗ "ಓ ಅದರ ಬಗ್ಗೆ ನನಗೆ ಖಾತ್ರಿಯಿದೆ, ನಾನು ಎಂದಿಗೂ ತಪ್ಪು ಮಾಡುವುದಿಲ್ಲ" ಕೂಡಲೆ ಪ್ರತಿಕೂಲವಾದ ರೂಪತಾಳುವಿಕೆ ಅಲ್ಲಿಗೆ ಸಾಗಿ ಹೋಗುವುದನ್ನು ನಾನು ನೋಡುತ್ತೇನೆ, ಆ ಹೊಗಳಿಕೊಳ್ಳುವಿಕೆಯಿಂದ ಉಂಟಾದ ಚಿಕ್ಕ ರಂಧ್ರದಲ್ಲಿ ಅದು ಪ್ರವೇಶಿಸುತ್ತದೆ. ಅದು ಅಂತರಂಗದಲ್ಲಿ ಆ ರೀತಿ ಪ್ರವೇಶಿಸುತ್ತದೆ ಮತ್ತು ನಂತರ ಒಳನುಗ್ಗುತ್ತದೆ ಮತ್ತು ಹಾಗಾಗಿ ನೀವು ಕೈಕೊಳ್ಳಲು ಬಯಸದೆ ಇದ್ದುದನ್ನು ಕೈಕೊಳ್ಳುವಂತೆ ಪ್ರತಿಯೊಂದನ್ನು ತಯಾರು ಮಾಡುತ್ತದೆ. ಆದರೆ ಇದೊಂದು ಮೋಜಿನ ವಿಷಯವಾಗಿದೆ, ಅದು ನೀವು ಪ್ರಗತಿ ಸಾಧಿಸುವುದಕ್ಕೆ ಸಹಾಯ ಮಾಡುವ ವಿಷಯವಾಗಿರುವುದಿಲ್ಲ. (ಶ್ರೀಮಾತೆಯವರು ನಗುತ್ತಾರೆ). ಆದರೆ ಅದನ್ನು ಹೇಗೆ ತೆಗೆದುಕೊಳ್ಳ–ಬೇಕೆಂಬುದು ನಿಮಗೆ ತಿಳಿದಿದ್ದರೆ ಪ್ರಗತಿ ಸಾಧಿಸುವುದಕ್ಕೆ ಅದು ಸಹಾಯ ನೀಡುತ್ತದೆ: "ಸರಿ ಇನ್ನೊಮ್ಮೆ ನಾನು ನನ್ನನ್ನು ಅತಿಯಾಗಿ ಹೊಗಳಿಕೊಳ್ಳುವುದಿಲ್ಲ."

ಈ ಶಕ್ತಿಗಳು ಮಾನಸಿಕ ಹಾಗೂ ಪ್ರಾಣಿಕ ಸ್ತರಗಳ ಮೇಲೆ ಪ್ರಜ್ಞಾಪೂರ್ಣ–ವಾಗಿರುವುದರಿಂದ, ಮನುಷ್ಯ (ಹೊಗಳಿಕೊಳ್ಳುವಿಕೆಯನ್ನು) ಶಬ್ದಗಳಲ್ಲಿ ಉಚ್ಚರಿಸ–ಬೇಕಾಗಿರುವುದಿಲ್ಲ. ಉದಾಹರಣೆಗೆ, ಯೋಚನೆ ಇದ್ದರೆ, ಏನನ್ನೋ ತಿದ್ದಲು ನೀವು ಸರಿಯಾಗಿ ಕಾರ್ಯ ಕೈಕೊಂಡಿದ್ದರೆ, ಅದು ಕೆಟ್ಟ ರೂಢಿಯಾಗಿರಬಹುದು ಇಲ್ಲವೆ ಪ್ರಾಪಂಚಿಕ ದೌರ್ಬಲ್ಯವಾಗಿರಬಹುದು, ಅದಾವುದೇ ಇರಲಿ, ಅದನ್ನು ತಿದ್ದಲು ನೀವು ಬಹಳ ಕಷ್ಟಪಟ್ಟು ಕಾರ್ಯ ಕೈಕೊಂಡಿರುತ್ತೀರಿ, ಮತ್ತು ನೀವು ಸರಿಯಾಗಿ ಕಾರ್ಯ ಕೈಕೊಂಡಿದ್ದರಿಂದ ಒಂದಿಷ್ಟರ ಮಟ್ಟಿಗೆ ಯಶಸ್ವಿಯಾಗಿರುತ್ತೀರಿ. ಆಗ ಸರಳವಾಗಿ ನೀವು ಮನಸ್ಸಿನಲ್ಲಿ ಯಶಸ್ವಿಯಾದುದರ ಬಗ್ಗೆ ಹೇಳಿಕೊಂಡರೆ, ಅದು ಮುಂದಿನ ಕ್ಷಣ ಮತ್ತೆ ಪ್ರಾರಂಭವಾಗುತ್ತದೆ. ಅದೇಂದರೆ ಆ ವಿಷಯವನ್ನು

ಕುರಿತು ಯೋಚನೆ ಕೂಡ ಮಾಡಬಾರದು, ಅದು ಬಾಯಿಂದ ಹೇಳುವ ಪ್ರಶ್ನೆಯಲ್ಲ, ಯೋಚನೆ ಮಾಡುವುದನ್ನು ಕುರಿತಾದ ಪ್ರಶ್ನೆಯಾಗಿರುತ್ತದೆ: "ಏಕೆ, ಅದು ಮೊದಲು ಹಾಗಿತ್ತು ಮತ್ತು ಈಗ ಈ ರೀತಿಯದಾಗಿದೆ. ಅಹಾ, ಎಷ್ಟೊಂದು ಚೆನ್ನಾಗಿದೆ!" ಅದು ಮುಗಿದು ಹೋದಂತೆ, ಮುಂದಿನ ಕ್ಷಣ ಹಳೆಯದು ಮತ್ತೆ ಪ್ರಾರಂಭವಾಗುತ್ತದೆ.

**CWM, 7/18–19** **– ಶ್ರೀಮಾತೆ**

*

**ನಮ್ಮ ಸ್ವಭಾವದ ಭಿನ್ನ ಭಾಗಗಳಲ್ಲಿರುವ ನಂಬಿಕೆ**

ನಿಮ್ಮಲ್ಲಿ, ಪ್ರತಿಯೊಬ್ಬನಲ್ಲಿ ದೈವೀ ಕೃಪೆಯಲ್ಲಿ ಅತಿ ಶ್ರೇಷ್ಠ ನಂಬಿಕೆ–ಯನ್ನಿರಿಸಿಕೊಂಡಿರುವ ಭಾಗ ಯಾವುದು? ಆ ನಂಬಿಕೆ ಭೌತಿಕದಲ್ಲಿರಬಹುದು, ಪ್ರಾಣಿಕದಲ್ಲಿರಬಹುದು, ಅದು ಚೈತ್ಯದಲ್ಲಿಯೂ ಇರಬಹುದು, ಅದು ಈ ಭಾಗದಲ್ಲಿ ಇಲ್ಲವೆ ಆ ಭಾಗದಲ್ಲಿ, ಇಲ್ಲವೆ ಈ ಕ್ರಿಯೆಯಲ್ಲಿ ಅಥವಾ ಆ ಕ್ರಿಯೆಯಲ್ಲಿ ಇರಬಹುದು. ಉದಾಹರಣೆಗೆ ಕೆಲವು ಜನರಿದ್ದಾರೆ, ಅವರಲ್ಲಿ ದೈವೀ ಕೃಪೆಯೊಂದಿಗೆ ಸಂಪರ್ಕ ಸಿದ್ಧಿಸಿಕೊಂಡ ಹಾಗೂ ದೈವೀ ಕೃಪೆಯಲ್ಲಿ ನಂಬಿಕೆಯಿರುವ ಸ್ಥಿತಿಯಿರುತ್ತದೆ, ಮತ್ತು ಅವರು ಪ್ರಾಣಿಕ ಇಲ್ಲವೆ ಭೌತಿಕ ಪ್ರಜ್ಞೆಯಲ್ಲಿದ್ದಾಗ ಅಲ್ಲಿ ಅದೇನೂ ಉಳಿದಿರುವುದಿಲ್ಲ. ಇನ್ನು ಕೆಲವರಿದ್ದಾರೆ, ಬಹುಶಃ ಅವರಲ್ಲಿ ಬಹಳಷ್ಟು ಮಾನಸಿಕ ಜ್ಞಾನವಿರುವುದಿಲ್ಲ, ಆದರೆ ದೈವೀ ಕೃಪೆಯಲ್ಲಿ ಅವರು ತಮ್ಮ ಭೌತಿಕದಲ್ಲಿ, ದೇಹದಲ್ಲಿ ಪರಿಪೂರ್ಣ ನಂಬಿಕೆಯನ್ನು, ಇಡಿಯಾದ ವಿಶ್ವಾಸವನ್ನು ಹೊಂದಿರುತ್ತಾರೆ ಮತ್ತು ಈ ನಂಬಿಕೆ ಹಾಗೂ ವಿಶ್ವಾಸಗಳೊಂದಿಗೆ ಜೀವಿಸುತ್ತಾರೆ. ಇತರರು ಕೇವಲ ತಮ್ಮ ಆಳವಾದ ಭಾವನೆಗಳಲ್ಲಿ ಅದನ್ನು ಹೊಂದಿರುತ್ತಾರೆ, ಅವರ ಯೋಚನೆಗಳು ಅಲೆಮಾರಿ (vagabond) ಆಗಿರುತ್ತವೆ. ಪ್ರಾಣಿಕ ನಂಬಿಕೆ ಹೊಂದಿದ ಜನರೂ ಕೂಡ ಇದ್ದಾರೆ – ಇಂತಹರು ಅಪರೂಪಕ್ಕೆ ಕಂಡುಬರುತ್ತಾರೆ, ಆದರೆ ಅವರು ಅಸ್ತಿತ್ವದಲ್ಲಿದ್ದಾರೆ – ಅವರು ದೈವೀ ಕೃಪೆಯಲ್ಲಿ ಪ್ರಾಣಿಕ ನಂಬಿಕೆಯನ್ನು ಹೊಂದಿರುತ್ತಾರೆ, ಆ ನಂಬಿಕೆಯಿಂದಾಗಿ ಸಾಮರ್ಥ್ಯವನ್ನು ಹೊಂದಿರುವ ಅಸಾಧಾರಣ ಭಾವನೆ–ಯೊಂದಿಗೆ ಎಲ್ಲವೂ ಪರಿಪೂರ್ಣವಾಗಿ ಸರಿಯಾಗಿ ನಡೆದುಕೊಂಡು ಹೋಗುತ್ತದೆ.

**CWM, 7/114–15** **– ಶ್ರೀಮಾತೆ**

*

**ಪ್ರಶ್ನೆ :** *ಮನುಷ್ಯ ಕೆಲವೊಮ್ಮೆ ತನ್ನಲ್ಲಿಯೇ (ನಂಬಿಕೆಯ) ಭಾವನೆ ತಂದುಕೊಳ್ಳುವ ಹಾಗೂ ಬೇರೆ ಸಮಯದಲ್ಲಿ ಅದನ್ನು ಯೋಚನೆಯಲ್ಲಿ ತಂದುಕೊಳ್ಳುವ ರೀತಿ ಸಾಧ್ಯವಾಗಬಹುದೆ?*

**ಶ್ರೀಮಾತೆ :** ಇದು ಇನ್ನೊಂದು ಗೋಚರ ಸಂಗತಿ. ಇದರರ್ಥ ದೈವೀ ಕೃಪೆಯಲ್ಲಿ ಈ ನಂಬಿಕೆ, ಈ ವಿಶ್ವಾಸ ಚೈತ್ಯದಲ್ಲಿರುತ್ತದೆ – ಹಿಂದೆ, ಅಲ್ಲಿ ಚೈತ್ಯದಲ್ಲಿ ಯಾವಾಗಲೂ ಇರುತ್ತದೆ. ಹಾಗಾಗಿ ಕೆಲವೊಮ್ಮೆ ಅದು ಭಾವನೆಯಲ್ಲಿರುತ್ತದೆ, ಕೆಲವೊಮ್ಮೆ ಯೋಚನೆಯಲ್ಲಿರುತ್ತದೆ. ಅದು ಕೆಲವೊಮ್ಮೆ ಚೈತ್ಯದ ಸಂಪರ್ಕದಲ್ಲಿರುವ ದೇಹ ಕೂಡ ಆಗಿರಬಹುದು, ಚೈತ್ಯದ ಪ್ರಭಾವದಡಿಯಲ್ಲಿ ಅದರ ಬಗ್ಗೆ ತಿಳಿದುಕೊಂಡಿರದೆ ಇರಬಹುದು; ಮತ್ತು ಆ ಕ್ಷಣದಲ್ಲಿ ಈ ಬಗೆಯ ವಿಶ್ವಾಸ, ನಂಬಿಕೆ ಮುಂಭಾಗಕ್ಕೆ ಬರುತ್ತದೆ ಹಾಗೂ ಆಧಾರ ನೀಡುತ್ತದೆ. ಚೈತ್ಯದೊಡನೆ ಕ್ಷಣಿಕ ಸಂಪರ್ಕಗಳಿದ್ದಾಗ ಮನುಷ್ಯನಿಗೆ ಇದು ಸಂಭವಿಸುತ್ತದೆ. ಉದಾಹರಣೆಗೆ ನೀವು ದೊಡ್ಡ ತೊಂದರೆಯೊಂದರಲ್ಲಿ ಇಲ್ಲವೆ ದೊಡ್ಡ ಭೌತಿಕ ಅಪಾಯ–ವೊಂದರಲ್ಲಿ ಇರುವುದನ್ನು ಕಂಡುಕೊಂಡಾಗ ಮತ್ತು ಹಠಾತ್ತನೆ ಇದರ ಭಾವನೆ ತಂದುಕೊಂಡರೆ, – ನಿಮ್ಮತ್ತ ಬರುತ್ತಿರುವ ಶಕ್ತಿಯ ಹಾಗೂ ನಂಬಿಕೆಯ ಶಕ್ತಿ ದೈವೀ ಕೃಪೆಯಲ್ಲಿರಿಸಿದ ಪರಿಪೂರ್ಣ ವಿಶ್ವಾಸದ ಭಾವನೆ ತಂದುಕೊಂಡರೆ ಅದು ಸಹಾಯಕವಾಗುವುದು. ಹಾಗಾಗಿ ಅದರರ್ಥ ಮನುಷ್ಯ ಚೈತ್ಯದೊಂದಿಗೆ ಸಂಪರ್ಕ ಹೊಂದಿರುತ್ತಾನೆ ಮತ್ತು ಅದು ಅವನ ಸಹಾಯಕ್ಕೆ ಬರುತ್ತದೆ – ಅದು ನಿಮಗೆ ವಿಶೇಷ ದೈವೀ ಕೃಪೆಯನ್ನು ದಯಪಾಲಿಸಿದ ಹಾಗಿರುತ್ತದೆ. ಇಲ್ಲಿ ಹೆಚ್ಚು ಮೇಲಿಂದ ಮೇಲೆ ಇರಬೇಕಾದ ಸ್ಥಿತಿ ಇದೇ ಆಗಿದೆ, ಏಕೆಂದರೆ ಈ ಸಂಪರ್ಕ ಪ್ರಜ್ಞಾಪೂರ್ವಕವಾಗಿ, ಉದ್ದೇಶಪೂರ್ವಕವಾಗಿ ಎಲ್ಲ ಕಾಲಕ್ಕೆ ಸ್ಥಾಪಿತಗೊಳ್ಳುತ್ತದೆ. ಈ ನಿದರ್ಶನ ಮೇಲಿಂದ ಮೇಲೆ ಇರಬೇಕು, ಇಲ್ಲಿ ಅದು ಅತ್ಯಂತ ಸಾಮಾನ್ಯಮಟ್ಟದ್ದು. ಅದು ಕ್ರಿಯಾಶೀಲವಾದ ಭಾಗಕ್ಕೆ ಅನುಗುಣವಾಗಿ ಇಲ್ಲವೆ ಚಲನೆಯ ಆವಶ್ಯಕತೆಗೆ ಅನುಗುಣವಾಗಿ ಇರುತ್ತದೆ, ಅದು ಇಲ್ಲಿ ಇಲ್ಲವೆ ಅಲ್ಲಿ ಇರುತ್ತದೆ, ಅದರಿಂದಾಗಿ ಒಮ್ಮೆಗೆ ನಿಮ್ಮನ್ನು ವಶಕ್ಕೆ ತೆಗೆದುಕೊಳ್ಳುವ ಮತ್ತು ರಕ್ಷಣೆ ನೀಡುವ ಈ ವಿಶ್ವಾಸದ ಬಗ್ಗೆ ಭಾವನೆ ತಂದುಕೊಳ್ಳುತ್ತೀರಿ. ಅದಿರುವುದು ಹಾಗೆ.

**CWM, 7/115–16** **– ಶ್ರೀಮಾತೆ**

*

**ನಂಬಿಕೆಗೆ ತೊಂದರೆ ಉಂಟುಮಾಡುವ ಮೂರು ಕಾರಣಗಳು**

ತಮ್ಮಲ್ಲಿ ಅಲುಗಾಡದ ನಂಬಿಕೆ ಎಂದು ಕರೆಯಲಾಗುವಂತಹದು ಇದೆ ಎನ್ನುವವರು ಹೇಳುತ್ತಾರೆ: "ಪ್ರತಿಯೊಂದನ್ನೂ ಕೈಕೊಳ್ಳುತ್ತಿರುವವನು ಭಗವಂತ, ಅವನು ಪ್ರತಿಯೊಂದನ್ನೂ ಕೈಕೊಳ್ಳಬಲ್ಲನು; ನನ್ನಲ್ಲಿ, ಇತರರಲ್ಲಿ, ಎಲ್ಲೆಡೆಯಲ್ಲಿ ಸಂಭವಿಸುವುದೆಲ್ಲ ಭಗವಂತ ಮಾತ್ರ ಕೈಕೊಂಡದ್ದಾಗಿರುತ್ತದೆ." ಇದನ್ನು ಒಂದು ಬಗೆಯ ತರ್ಕದಿಂದ ಅನುಸರಿಸುತ್ತ ಬಂದ ಅವರು ಕೆಲ ಸಮಯದ ನಂತರ ಅವರಲ್ಲಿ ವಿಶ್ವಾಸವಿರದಿದ್ದರೆ ಜಗತ್ತಿನಲ್ಲಿ ಸಂಭವಿಸುವ ಎಲ್ಲ ಅತ್ಯಂತ ಭಯಾನಕ ತಪ್ಪುಗಳಿಗಾಗಿ ಭಗವಂತನನ್ನು ದೂಷಿಸುತ್ತಾರೆ ಮತ್ತು ಅವನನ್ನು ನಿಜವಾದ ಕ್ರೂರ ಹಾಗೂ ಭಯಾನಕ ದೈತ್ಯನನ್ನಾಗಿ ಮಾಡುತ್ತಾರೆ.

ಮತ್ತೆ ಹೇಳುವುದಾದರೆ ನಂಬಿಕೆಯಿದ್ದ ಜನರಿರುತ್ತಾರೆ, ಆದರೆ ಅವರು ತಮಗೆ ಹೇಳಿಕೊಳ್ಳುತ್ತಾರೆ: "ಸರಿ, ಭಗವಂತನಲ್ಲಿ ನನಗೆ ನಂಬಿಕೆ ಇದೆ, ಆದರೆ ಈ ಜಗತ್ತು ಹೇಗಿದೆ ಎಂಬುದನ್ನು ನಾನು ಸರಿಯಾಗಿ ನೋಡುತ್ತೇನೆ. ಮೊದಲ–ನೆಯದಾಗಿ ನಾನು ಎಷ್ಟೊಂದು ವೇದನೆಗೊಳಗಾಗಿದ್ದೇನೆ, ಅಲ್ಲವೆ? ನಾನು ನನ್ನ ಎಲ್ಲ ನೆರೆಹೊರೆಯವರಿಗಿಂತ ಬಹಳ ಅಸಂತುಷ್ಟನಾಗಿದ್ದೇನೆ." – ಏಕೆಂದರೆ ಮನುಷ್ಯ ಯಾವಾಗಲೂ ತನ್ನ ನೆರೆಹೊರೆಯವರಿಗಿಂತ ಯಾವಾಗಲೂ ಹೆಚ್ಚು ಅಸಂತುಷ್ಟನಾಗಿರುತ್ತಾನೆ – "ನಾನು ಬಹಳ ಅಸಂತುಷ್ಟನಾಗಿದ್ದೇನೆ, ಜೀವನ ನನಗೆ ಕ್ರೂರವಾಗಿದೆ. ಆದರೆ ಭಗವಂತ ಭಗವಂತನೇ, ಅವನು ಸರ್ವ ರೀತಿಯಲ್ಲಿ ಒಳ್ಳೆಯವನು, ಸರ್ವ ಸಾಮರಸ್ಯ ಹೊಂದಿದವನು, ಸರ್ವ ರೀತಿಯಿಂದ ಉದಾರ–ನಾದವನು, ಹೀಗಿದ್ದಾಗ್ಯೂ ನಾನು ಇಷ್ಟೊಂದು ಅಸಂತುಷ್ಟನಾಗಿರುವುದೇಕೆ? ಅವನು ಸಾಮರ್ಥ್ಯರಹಿತನಾಗಿರಬೇಕು, ಹಾಗಿಲ್ಲದಿದ್ದರೆ ಇಷ್ಟೊಂದು ಒಳ್ಳೆಯವನಾದ ಅವನು ನಾನು ಇಷ್ಟೊಂದು ವೇದನೆಗೆ ಒಳಗಾಗಲು ಅನುವು ಮಾಡಿಕೊಟ್ಟದ್ದೇಕೆ? ಇದು ತೊಂದರೆ ಉಂಟುಮಾಡುವ ಎರಡನೆಯ ಕಾರಣ.

ಮೂರನೆಯದು: ಇನ್ನು ಕೆಲವು ಜನರಿದ್ದಾರೆ, ಅವರಲ್ಲಿ ವಕ್ರವಾದ, ಅತಿಯಾದ ವಿನಮ್ರತೆ ಇರುತ್ತದೆ: ಅವರು ತಮಗೆ ಹೇಳಿಕೊಳ್ಳುತ್ತಾರೆ: "ನಿಶ್ಚಿತವಾಗಿ ಭಗವಂತ ನನ್ನನ್ನು ಚೆಲ್ಲಿಕೊಟ್ಟಿದ್ದಾನೆ. ನಾನು ಯಾವುದಕ್ಕೂ ಸರಿಯಾದವನಲ್ಲ, ಅವನು ನನ್ನೊಡನೆ ಏನನ್ನೂ ಕೈಕೊಳ್ಳಲಾರ, ನನಗುಳಿದ ಒಂದೇ ಕಾರ್ಯವೆಂದರೆ

ಈ ಆಟವನ್ನು ಬಿಟ್ಟುಕೊಡುವುದಾಗಿದೆ, ಏಕೆಂದರೆ ನಾನು ಅಯೋಗ್ಯನಾಗಿದ್ದೇ–ನೆಂಬುದನ್ನು ಅವನು ಕಂಡುಕೊಳ್ಳುತ್ತಾನೆ." ಹಾಗಾಗಿ ಮನುಷ್ಯ ನಂಬಿಕೆಗೆ ಇಡಿಯಾದ ಹಾಗೂ ಸಂಪೂರ್ಣ ವಿಶ್ವಾಸವನ್ನು ಅಧಿಕವಾಗಿ ಇರಿಸದಿದ್ದರೆ, ಅಲ್ಲಿ ತೊಂದರೆಗಳಿರುತ್ತವೆ. ಹಾಗಾಗಿ ಅವೆರಡೂ (ನಂಬಿಕೆ ಮತ್ತು ವಿಶ್ವಾಸ) ಅವಶ್ಯವಾಗಿವೆ.

**CWM, 8/38–39** **– ಶ್ರೀಮಾತೆ**

*

**ಮಾರ್ಗದಲ್ಲಿ ನಡೆದು ಹೋಗುವುದು**

ಹಾಗಾಗಿ ಬಹಳಷ್ಟು ಜನರು ಮಾರ್ಗದಲ್ಲಿರುವ ಸುರಕ್ಷಿತತೆ, ಹಾಗೂ ದೈವೀ ರಕ್ಷಣೆಯ ಬಗ್ಗೆ ಸಂಶಯಪಡುತ್ತಾರೆ, ಏಕೆಂದರೆ ಇತರರು ದಾರಿ ತಪ್ಪಿಸಿಕೊಂಡು ಹೋಗಿರುತ್ತಾರೆ. ಈ ದಿನ ಸಾಯಂಕಾಲ ನಿಮಗೆ ಓದಿ ಹೇಳಿದುದನ್ನು ತಮಗೆ ತಾವೇ ಹೇಳಿಕೊಳ್ಳುವುದರ ಬದಲಾಗಿ ತಮ್ಮ ಅಹಂಕಾರದಲ್ಲಿ ಅವರು ಭಯದಿಂದ ನಡುಗುತ್ತಾರೆ. ಸಾಕಷ್ಟು ಪರಿಶುದ್ಧರಾಗಲು, ನಿಷ್ಕಪಟರಾಗಲು ಅವಶ್ಯವಾದ ಕಾಳಜಿ ವಹಿಸದೆ, ಯೋಗದ ಮಾರ್ಗವನ್ನು ಅನುಸರಿಸುವವರನ್ನು ಬೆದರಿಸುವ ಚಿಕ್ಕ ಇಲ್ಲವೆ ದೊಡ್ಡ ಅನಾಹುತಗಳಿಗೆ ಕಾರಣವೇನು? ಅತ್ಯಗತ್ಯದ್ದಾದ ಪರಿಶುದ್ಧತೆಯನ್ನು ಹೊಂದಲು ನಿರಾಕರಿಸಿದವರಿಗೆ ಯಾವ ರಕ್ಷಣೆಯೂ ಇಲ್ಲ, ಯಾವ ದೈವೀ ಕೃಪೆಯೂ ಅವರನ್ನು ರಕ್ಷಿಸಲಾರದು. ಇದಕ್ಕೆ ನಾನು ಅಧಿಕವಾಗಿ ಸೇರಿಸುತ್ತಿರುವುದು ಹೀಗಿದೆ: ಭಯ ಒಂದು ಅಶುದ್ಧತೆ, ಅತ್ಯಂತ ದೊಡ್ಡ ಅಶುದ್ಧತೆಗಳಲ್ಲಿ ಅದೊಂದು. ಪೃಥ್ವಿಯ ಮೇಲಿನ ದೈವೀ ಕಾರ್ಯವನ್ನು ನಾಶಗೊಳಿಸಲು ಬಯಸುವ ದೈವೀ ವಿರೋಧೀ ಶಕ್ತಿಗಳಿಂದ ಅದು ನೇರವಾಗಿ ಬರುತ್ತದೆ. ಯೋಗವನ್ನು ಕೈಕೊಳ್ಳಲು ನಿಜವಾಗಿ ಬಯಸುವವರ ಮೊದಲ ಕರ್ತವ್ಯವೆಂದರೆ ತಮ್ಮೆಲ್ಲ ಶಕ್ತಿಯಿಂದ, ಎಲ್ಲ ನಿಷ್ಕಾಪಟ್ಯದಿಂದ, ತಮಗೆ ಸಾಧ್ಯವಿದ್ದ ಎಲ್ಲ ತಾಳಿಕೊಳ್ಳುವಿಕೆಯಿಂದ, ಭಯದ ನೆರಳನ್ನೂ ಕೂಡ ನಿರ್ಮೂಲ ಮಾಡುವುದಾಗಿದೆ. ಯೋಗದ ಮಾರ್ಗದ ಮೇಲೆ ನಡೆಯಲು ಮನುಷ್ಯ ನಿರ್ಭೀತನಾಗಿರಬೇಕು, ಮತ್ತು ಎಂದಿಗೂ ಕ್ಷುದ್ರ, ಚಿಕ್ಕ, ನಿಶ್ಯಕ್ತ, ಅಹಿತಕರ, ತನ್ನ ಬೆನ್ನ ಮೇಲೆ ಕುಗ್ಗಿಕೊಳ್ಳುವ ಭಯದಲ್ಲಿ ಲೋಲರಾಗುವುದು ಬೇಡ.

ಅದಮ್ಯ ಧೈರ್ಯ, ಪರಿಪೂರ್ಣ ನಿಷ್ಕಾಪಟ್ಯ, ನಿಷ್ಕಪಟ ಸ್ವ–ಸಮರ್ಪಣ. ಇವುಗಳಿರುವುದರಿಂದಾಗಿ ಮನುಷ್ಯ ಲೆಕ್ಕಾಚಾರ ಮಾಡುವುದಿಲ್ಲ, ವ್ಯವಹಾರಕ್ಕಿಳಿ–ಯುವುದಿಲ್ಲ, ಪ್ರತಿಯಾಗಿ ಏನನ್ನಾದರೂ ಪಡೆಯುವುದಕ್ಕಾಗಿ ಕೊಡುವುದಿಲ್ಲ, ರಕ್ಷಣೆ ದೊರಕುತ್ತದೆ ಎಂಬ ಕಾರಣದಿಂದ ವಿಶ್ವಾಸವಿರಿಸುವುದಿಲ್ಲ. ಪ್ರಮಾಣಗಳನ್ನು ಬೇಡುವ ನಂಬಿಕೆಯನ್ನು ಹೊಂದಿರುವುದಿಲ್ಲ. – ಮಾರ್ಗದ ಮೇಲೆ ನಡೆಯಲು ಇದು ಅತ್ಯಗತ್ಯವಾದದ್ದು ಮತ್ತು ಇದು ಮಾತ್ರ ನಿಮ್ಮನ್ನು ಎಲ್ಲ ಅಪಾಯದಿಂದ ರಕ್ಷಿಸುತ್ತದೆ. (ಮೌನ)

**CWM, 8/260–61** **– ಶ್ರೀಮಾತೆ**

*

**ನಂಬಿಕೆಗಾಗಿ ಅಭೀಪ್ಸೆ ಪಡಿರಿ**

ಅತಿ ಕಡಿಮೆ ಜನರಿಗೆ ಸ್ವಯಂಪ್ರೇರಿತ ನಂಬಿಕೆಯನ್ನು ಹೊಂದಿರುವ ಸುದೈವವಿರುತ್ತದೆ. ಆದರೆ ಮನುಷ್ಯ ತನ್ನ ಅಭೀಪ್ಸೆಯಲ್ಲಿ ಬಹಳ ನಿಷ್ಕಪಟ–ನಾಗಿದ್ದರೆ ಅದನ್ನು ಅವನು ದೊರಕಿಸುತ್ತಾನೆ. ಅಭೀಪ್ಸೆ ನಿಷ್ಕಪಟವಾಗಿದ್ದರೆ, ಸತತ ಉಳಿದುಕೊಳ್ಳುತ್ತಿದ್ದರೆ ಅದು ಪ್ರತಿಯೊಂದನ್ನೂ ತರಬಲ್ಲದು. ಮನುಷ್ಯ ತನ್ನಂತರಂಗದಲ್ಲಿ ನಂಬಿಕೆಯ ಚಿಕ್ಕ ಅಂಶವನ್ನು ಹೊಂದಿರುತ್ತಾನೆ, ಆ ನಂಬಿಕೆ ತಂದೆ ತಾಯಂದಿರು ಹೇಳಿಕೊಟ್ಟದ್ದರಲ್ಲಿಂದ ಬಂದಿರಬಹುದು ಇಲ್ಲವೆ ಮನುಷ್ಯ ಪುಸ್ತಕಗಳನ್ನು ಓದಿ ಅದನ್ನು ದೊರಕಿಸಿರಬಹುದು. ಒಟ್ಟಿನಲ್ಲಿ ನಿಮ್ಮ ಶಿಕ್ಷಣ ಈ ಬಗೆಯ ನಂಬಿಕೆಯ ಆಧಾರ ಪಡೆದಿರುತ್ತದೆ. ನಿಮಗೆ ಶಿಕ್ಷಣ ನೀಡಿದವರು ಕೆಲವೊಂದು ವಿಷಯಗಳನ್ನು ನಿಮಗೆ ಹೇಳಿರುತ್ತಾರೆ. ಆಗ ಅವುಗಳನ್ನು ಪರಿಶೀಲಿಸಲು ನಿಮ್ಮಲ್ಲಿ ಸಾಧನಗಳಿರಲಿಲ್ಲ, ಏಕೆಂದರೆ ನೀವು ಬಹಳ ಚಿಕ್ಕವರಾಗಿದ್ದಿರಿ, ಮತ್ತು ನಿಮಗೆ ಅನುಭವವಿರಲಿಲ್ಲ. ಆದರೆ ಅವರು ಹೇಳಿದ್ದರಲ್ಲಿ ನಿಮಗೆ ನಂಬಿಕೆಯಿದೆ ಮತ್ತು ಆ ನಂಬಿಕೆಯೊಂದಿಗೆ ಮುಂದುವರಿದುಕೊಂಡು ಹೋಗುತ್ತೀರಿ, ಅದನ್ನು ಹೆಚ್ಚಿಸಲು ಮನುಷ್ಯ ತನ್ನ ಅಭೀಪ್ಸೆಯನ್ನು ಉಪಯೋಗಿಸಬಲ್ಲನು.

**CWM, 6/394** **– ಶ್ರೀಮಾತೆ**

*

ದೈವೀ ಕೃಪೆ ಮತ್ತು ಸಹಾಯ ಇವುಗಳಿಗಾಗಿ ಅಭೀಪ್ಸೆಪಡುವವರಿಗೆ ಅವು ಯಾವಾಗಲೂ ಅಲ್ಲಿರುತ್ತವೆ, ಅವುಗಳನ್ನು ನಂಬಿಕೆ ಹಾಗೂ ಗಾಢ ವಿಶ್ವಾಸದಿಂದ ಸ್ವೀಕರಿಸಿದಾಗ ಅವುಗಳ ಸಾಮರ್ಥ್ಯ ಮಿತಿಯಿಲ್ಲದ್ದಾಗಿರುತ್ತದೆ.

**CWM, 13/111** **– ಶ್ರೀಮಾತೆ**

*

**ನಂಬಿಕೆಗಾಗಿ ಷರತ್ತುಗಳು**

ಬಹುಮಟ್ಟಿಗೆ ಶಿಶು ಸದೃಶ ವಿಶ್ವಾಸವಿರುವುದು ಅತ್ಯಂತ ಮಹತ್ವದ ಷರತ್ತು, ಅದು ಬರುವುದು ನಿಶ್ಚಿತ ಎಂದು ತಿಳಿದಿರುವ ಮಗುವಿನ ಮುಚ್ಚುಮರೆ ಇಲ್ಲದ ವಿಶ್ವಾಸ, ಅವನು ಅದರ ಬಗ್ಗೆ ತನ್ನನ್ನೇ ಕೇಳುವುದಿಲ್ಲ, ಅವನಿಗೇನಾದರೂ ಅವಶ್ಯವಾದಾಗ ಅದು ಬರುವುದೆಂಬ ನಿಶ್ಚಿತತೆ ಅವನಲ್ಲಿರುತ್ತದೆ. ಸರಿ, ಇದೇ ಈ ಬಗೆಯ ವಿಶ್ವಾಸವನ್ನಿಟ್ಟುಕೊಂಡಿರುವುದು – ಇದು ನಿಜವಾಗಿ ಅತ್ಯಂತ ಮಹತ್ವದ ಷರತ್ತು.

ಅಭೀಪ್ಸೆಪಡುವುದು ಅತ್ಯಗತ್ಯವಾದದ್ದು. ಅಭೀಪ್ಸೆಪಡುವ ಕೆಲವು ಜನರು ನಂಬಿಕೆ ಹಾಗೂ ನಂಬಿಕೆಯಿಲ್ಲದಿರುವುದು, ವಿಶ್ವಾಸ ಹಾಗೂ ಅವಿಶ್ವಾಸ, ವಿಜಯ ನಿಶ್ಚಿತವೆಂದು ಭಾವಿಸುವ ಆಶಾವಾದ ಮತ್ತು ಅನಾಹುತ ಯಾವಾಗ ಬರಲಿದೆ ಎಂದು ತಮ್ಮನ್ನೇ ಕೇಳುವ ನಿರಾಶಾವಾದ ಇವುಗಳ ನಡುವಿರುವ ಸಂಘರ್ಷದೊಂದಿಗೆ ಅಭೀಪ್ಸೆಪಡುತ್ತಾರೆ. ಇಂತಹದು ಸತ್ತೆಯಲ್ಲಿದ್ದರೆ, ನೀವು ಅಭೀಪ್ಸೆಪಡಬಹುದು, ಆದರೆ ಏನನ್ನೂ ದೊರಕಿಸಲಾರಿರಿ. ಮತ್ತು ನೀವು ಹೇಳುತ್ತೀರಿ: "ನಾನು ಅಭೀಪ್ಸೆಪಟ್ಟೆ, ಆದರೆ ಏನನ್ನೂ ದೊರಕಿಸಲಿಲ್ಲ." ಅದು ಹಾಗಾಗುವುದು ಏಕೆಂದರೆ ನಿಮ್ಮಲ್ಲಿರುವ ಗಾಢ ನಂಬಿಕೆಯ ಕೊರತೆಯಿಂದ ನಿಮ್ಮ ಅಭೀಪ್ಸೆಯನ್ನು ಎಲ್ಲ ಕಾಲದಲ್ಲಿ ನಾಶಗೊಳಿಸುತ್ತೀರಿ. ನಿಮ್ಮಲ್ಲಿ ನಿಜವಾಗಿ ವಿಶ್ವಾಸ–ವಿರುವುದಾದರೆ... ಮಕ್ಕಳನ್ನು ಅವರಷ್ಟಕ್ಕೆ ಬಿಟ್ಟುಕೊಟ್ಟಾಗ, ಹಿರಿಯರಿಂದ ಅವರು ವಿರೂಪಗೊಳ್ಳದಿದ್ದಾಗ ಅವರಲ್ಲಿ ಎಲ್ಲವೂ ಒಳ್ಳೆಯದಾಗುತ್ತದೆ ಎಂಬ ಶ್ರೇಷ್ಠ ವಿಶ್ವಾಸವಿರುತ್ತದೆ. ಉದಾಹರಣೆಗೆ ಅವರಿಗೆ ಒಂದು ಚಿಕ್ಕ ಅಪಘಾತವಾದಾಗ, ಅದು ಗಂಭೀರವಾಗುವುದೆಂದು ಅವರು ಎಂದೂ ಯೋಚಿಸುವುದಿಲ್ಲ, ಅದರ ಪರಿಣಾಮ ಸ್ವಲ್ಪ ಕಾಲದಲ್ಲಿ ಮುಗಿದು ಹೋಗುವುದು ಎಂಬ ಸ್ವಯಂಪ್ರೇರಿತ

ಮನವರಿಕೆ ಅವರಲ್ಲಿರುತ್ತದೆ. ಅದರ ಪರಿಣಾಮಕ್ಕೆ ಕೊನೆ ಹೇಳುವುದಕ್ಕೆ ಇದು ಸಾಮರ್ಥ್ಯಪೂರ್ಣವಾಗಿ ಸಹಾಯ ಮಾಡುತ್ತದೆ.

ಸರಿ, ಮನುಷ್ಯ ದೈವೀ ಶಕ್ತಿಗಾಗಿ ಅಭೀಪ್ಸೆಪಟ್ಟಾಗ, ದೈವೀ ಸಹಾಯವನ್ನು ಬೇಡಿದಾಗ, ಅದು ಬರುವುದು ಎಂದು ಅಲುಗಾಡದ ನಿಶ್ಚಿತತೆಯಿಂದ ಮನುಷ್ಯ ಬೇಡಿದಾಗ, ಅದು ಬರದೇ ಇರುವುದು ಅಸಾಧ್ಯವಾದದ್ದು, ಆಗ ಅದು ಬರುವುದು ನಿಶ್ಚಿತ. ಈ ಬಗೆಯದು, ಹೌದು ಇದು ನಿಜವಾಗಿ ಆಂತರಿಕ ತೆರೆದಿರಿಸಿಕೊಳ್ಳುವಿಕೆ, ಇದು ವಿಶ್ವಸನೀಯತೆ. ಕೆಲವರು ಸತತ ಈ ಸ್ಥಿತಿಯಲ್ಲಿರುತ್ತಾರೆ. ಏನನ್ನೋ ಸ್ವೀಕರಿಸಬೇಕಾದಾಗ ಅವರು ಅಲ್ಲಿ ಸದಾ ಇರುತ್ತಾರೆ. ಇನ್ನು ಕೆಲವರಿದ್ದಾರೆ, ಹೊಂದಬೇಕಾದ ಏನೋ ಒಂದಿದ್ದಾಗ, ಶಕ್ತಿಯೊಂದು ಅವರೋಹಣ ಮಾಡುತ್ತಿದ್ದಾಗ ಅವರು ಯಾವಾಗಲೂ ಅನುಪಸ್ಥಿತರಿರುತ್ತಾರೆ, ಅವರು ಆ ಕ್ಷಣದಲ್ಲಿ ತಮ್ಮನ್ನು ಮುಚ್ಚಿಹಾಕಿಕೊಂಡಿರುತ್ತಾರೆ. ಅದು ಹಾಗಿರುವಾಗ ಶಿಶು ಸದೃಶ ವಿಶ್ವಾಸ ಹೊಂದಿದವರು ಯಾವಾಗಲೂ ಸರಿಯಾದ ಸಮಯದಲ್ಲಿ ಅಲ್ಲಿರುತ್ತಾರೆ.

ಇದು ವಿಚಿತ್ರವಾದದ್ದು ಅಲ್ಲವೆ? ಬಾಹ್ಯದಲ್ಲಿ ಯಾವ ಭಿನ್ನತೆ ಇರುವುದಿಲ್ಲ. ಅವರಲ್ಲಿ ಅದೇ ಬಗೆಯ ಸದ್ಭಾವನೆ, ಅದೇ ಬಗೆಯ ಅಭೀಪ್ಸೆ, ಒಳ್ಳೆಯದನ್ನು ಕೈಕೊಳ್ಳಬೇಕೆಂಬ ಇಚ್ಛೆ ಇರಬಹುದು. ಆದರೆ ಯಾರ ಅಂತರಂಗದಲ್ಲಿ ಈ ಮುಗುಳ್ನಗುವ ಗಾಢ ವಿಶ್ವಾಸವಿರುತ್ತದೆಯೋ, ಪ್ರಶ್ನಿಸುವುದಿಲ್ಲವೋ, ಇಲ್ಲವೆ ಅದು ತಮಗೆ ದೊರಕುವುದೋ ಇಲ್ಲವೋ ಎಂದು, ಭಗವಂತ ಉತ್ತರ ನೀಡುವನೋ ಇಲ್ಲವೋ ಎಂದು ತಮ್ಮನ್ನೇ ಕೇಳಿಕೊಳ್ಳುವುದಿಲ್ಲವೋ, ಅವರಿಗೆ ಆ ಪ್ರಶ್ನೆ ಉದ್ಭವಿಸುವುದಿಲ್ಲ, ಅದು ತಿಳಿದುಕೊಂಡ ಏನೋ ಆಗಿರುತ್ತದೆ. ... "ಅವಶ್ಯವಾದದ್ದನ್ನೆಲ್ಲ ನನಗೆ ಕೊಡಲಾಗುವುದು, ನಾನು ಪ್ರಾರ್ಥಿಸಿದರೆ ನನಗೆ ಉತ್ತರ ದೊರಕುವುದು, ನಾನು ತೊಂದರೆಯಲ್ಲಿದ್ದಾಗ, ಸಹಾಯ ಯಾಚಿಸಿದರೆ ಸಹಾಯ ದೊರಕುವುದು, ಸಹಾಯ ಬರುವುದಷ್ಟೇ ಅಲ್ಲ, ಪ್ರತಿಯೊಂದನ್ನೂ ವ್ಯವಸ್ಥಿತಗೊಳಿಸಲಾಗುವುದು. ಸ್ವಯಂಪ್ರೇರಿತ, ಮುಚ್ಚುಮರೆಯಿಲ್ಲದ, ಪ್ರಶ್ನಿಸದ ವಿಶ್ವಾಸವಿದ್ದರೆ, ಅದು ಬೇರೆ ಯಾವುದಕ್ಕಿಂತಲೂ ಹೆಚ್ಚು ಚೆನ್ನಾಗಿ ಕಾರ್ಯ ಮಾಡುತ್ತದೆ ಮತ್ತು ಪರಿಣಾಮಗಳು ಅದ್ಭುತವಾಗಿರುತ್ತವೆ. ಮನಸ್ಸಿನ ವೈರುಧ್ಯಗಳು, ಸಂಶಯಗಳು ಇವುಗಳೊಂದಿಗೆ ಮನುಷ್ಯ ಪ್ರತಿಯೊಂದನ್ನೂ

ಹಾಳುಮಾಡುತ್ತಾನೆ. ಮನುಷ್ಯ ತೊಂದರೆಯಲ್ಲಿದ್ದಾಗ ಈ ಬಗೆಯ ಯೋಚನೆ ಅವನಲ್ಲಿ ಬರುತ್ತಿದ್ದರೆ: "ಓಹ್, ಅದು ಅಸಾಧ್ಯ! ನಾನದನ್ನು ಎಂದಿಗೂ ವ್ಯವಸ್ಥೆಗೆ ಒಳಪಡಿಸಲಾರೆ, ಅದು ಇನ್ನೂ ಉಲ್ಬಣಗೊಳ್ಳುವಂತಿದ್ದರೆ, ನನಗೆ ಬೇಡಾದ ಸ್ಥಿತಿಯು ಇನ್ನೂ ಹೆಚ್ಚು ಕೆಟ್ಟದ್ದಾಗುವುದಿದ್ದರೆ, ಇನ್ನೂ ಮುಂದೆ ನಾನು ಜಾರಿಕೊಂಡು ಹೋಗುವಂತಾದರೆ, ಆದರೆ, ...". ಆ ರೀತಿಯದು ಇರುತ್ತದೆ ಮತ್ತು ಅವನು ತನ್ನ ಹಾಗೂ ತಾನು ಸ್ವೀಕರಿಸಲು ಬಯಸುವ ಶಕ್ತಿ ಇವುಗಳ ನಡುವೆ ಒಂದು ಗೋಡೆಯನ್ನು ನಿರ್ಮಿಸುತ್ತಾನೆ. ಚೈತ್ಯ ಸತ್ತೆಯಲ್ಲಿ ಈ ವಿಶ್ವಾಸವಿರುತ್ತದೆ. ಅದ್ಭುತ ರೀತಿಯಲ್ಲಿರುತ್ತದೆ. ಅಲ್ಲಿ ಛಾಯೆಯಿರುವುದಿಲ್ಲ, ವಾದವಿರುವುದಿಲ್ಲ, ವೈರುಧ್ಯವಿರುವುದಿಲ್ಲ. ಅದು ಹಾಗಿದ್ದಾಗ ಉತ್ತರ ದೊರಕಿಸದ ಪ್ರಾರ್ಥನೆ ಇರುವುದಿಲ್ಲ, ಸಿದ್ಧಿಸಿಕೊಳ್ಳಲಾಗದ ಅಭೀಪ್ಸೆಯಿರುವುದಿಲ್ಲ.

**CWM, 6/403–04** **– ಶ್ರೀಮಾತೆ**

*

**ಮನುಷ್ಯ ನಂಬಿಕೆಯನ್ನು ಸುರಕ್ಷಿತವಾಗಿ ಇರಿಸಿಕೊಳ್ಳುವುದಕ್ಕೆ ಅವನ ವೈಯಕ್ತಿಕ ಪ್ರಯತ್ನದ ಆವಶ್ಯಕತೆ ಇದೆ**

ಮನುಷ್ಯ ತನ್ನ ನಂಬಿಕೆಯನ್ನು ಸುರಕ್ಷಿತವಾಗಿರಿಸಲು, ಅಂತರಂಗದಲ್ಲಿ ಬೆಳೆಯುವುದಕ್ಕೆ ಅನುವು ಮಾಡಿಕೊಡಲು ನಿಸ್ಸಂಶಯವಾಗಿ ವೈಯಕ್ತಿಕ ಪ್ರಯತ್ನದ ಆವಶ್ಯಕತೆ ಇದೆ. ಬಹಳ ದಿನಗಳ ನಂತರ, ಒಂದು ದಿನ, ಹಿಂತಿರುಗಿ ನೋಡುತ್ತ ಸಂಭವಿಸಿದ ಪ್ರತಿಯೊಂದು, ಅತ್ಯಂತ ಕೆಟ್ಟದಾದದ್ದೆಂದು ತೋರಿಬರುವುದೂ ಕೂಡ ದೈವೀ ಕೃಪೆಯಿಂದಾಗಿತ್ತು, ಅದು ನಾವು ಮಾರ್ಗದಲ್ಲಿ ಮುಂದುವರಿಯುವಂತೆ ಮಾಡುವುದಕ್ಕಾಗಿತ್ತು; ಮತ್ತು ಆಗ ವೈಯಕ್ತಿಕ ಪ್ರಯತ್ನವೂ ಕೂಡ ಒಂದು ಕೃಪೆಯಾಗಿತ್ತು ಎಂಬುದರ ಬಗ್ಗೆ ಅರಿವುಳ್ಳವ–ರಾಗುತ್ತೇವೆ. ಆದರೆ ಆ ಹಂತವನ್ನು ತಲುಪುವುದಕ್ಕಿಂತ ಮೊದಲು ಮನುಷ್ಯ ಬಹಳ ಮುನ್ನಡೆ ಸಾಧಿಸಿರಬೇಕಾಗುತ್ತದೆ, ಬಹಳಷ್ಟು ಹೋರಾಟ ನಡೆಸಿರಬೇಕಾಗುತ್ತದೆ, ಮತ್ತು ಕೆಲವೊಮ್ಮೆ ಬಹಳಷ್ಟು ವೇದನೆಗೆ ಕೂಡ ಒಳಗಾಗಬೇಕಾಗಿರುತ್ತದೆ, ಜಡ ನಿಷ್ಕ್ರಿಯತೆಯಲ್ಲಿ ಕುಳಿತು "ನಾನು ನಂಬಿಕೆಯನ್ನು ಹೊಂದುವುದಿದ್ದರೆ, ಅದು ನನಗೆ ದೊರಕುತ್ತದೆ, ಭಗವಂತ ನನಗೆ ಅದನ್ನು ಕೊಡುತ್ತಾನೆ," ಎಂದು ಹೇಳುವುದು ಸೋಮಾರಿತನದ ಮನೋಭಾವ, ಅಪ್ರಜ್ಞೆ

ಮತ್ತು ಬಹುಮಟ್ಟಿಗೆ ದುರದೃಷ್ಟಕರ ಮನೋಭಾವ ಇವೆಲ್ಲವುಗಳಿಂದ ಕೂಡಿರುತ್ತದೆ. ಆಂತರಿಕ ಜ್ವಾಲೆ ಪ್ರಜ್ವಲಿಸುವಂತೆ ಮನುಷ್ಯ ಅದಕ್ಕೆ ಆಹಾರ ನೀಡಬೇಕು, ಮನುಷ್ಯ ತೊರೆದು ಬಿಡಲು ಬಯಸುವ ಎಲ್ಲ ದೋಷಗಳನ್ನು, ಪ್ರಗತಿಗೆ ಅಡ್ಡಬರುವುದೆಲ್ಲವನ್ನು, ಮಾರ್ಗದಲ್ಲಿ ಅಂಧಕಾರ ತರುವುದನ್ನು ಉರುವಲಿನ ರೂಪದಲ್ಲಿ ಆ ಜ್ವಾಲೆಯಲ್ಲಿ ಎಸೆದು ಬಿಡಬೇಕು. ಮನುಷ್ಯ ಆ ಜ್ವಾಲೆಗೆ ಉರುವಲು ಒದಗಿಸದಿದ್ದರೆ ಅದು ಮನುಷ್ಯನ ಅಪ್ರಜ್ಞೆ, ಜಡತ್ವ ಇವುಗಳಡಿಯ ಬೂದಿಯಲ್ಲಿ ಹೊಗೆಯಾಡುತ್ತದೆ ಮತ್ತು ನಂತರ ಶತಮಾನಗಳು ಸಾಗಿ ಹೋಗಬೇಕಾಗುತ್ತವೆ. ಅನಂತಪಟ್ಟು ಬೆಲೆಯುಳ್ಳದ್ದು ಜನ್ಮ ತಾಳುವಾಗ ಅದರ ಮೇಲೆ ಗಮನವಿರಿಸುವ ರೀತಿಯಲ್ಲಿ ಮನುಷ್ಯ ತನ್ನ ನಂಬಿಕೆಯ ಮೇಲೆ ಗಮನವಿರಿಸಬೇಕು ಮತ್ತು ಅದನ್ನು ಕೆಡಿಸುವ ಎಲ್ಲದರಿಂದ ಅದನ್ನು ರಕ್ಷಿಸಬೇಕು. ಪ್ರಾರಂಭದ ಅಜ್ಞಾನ ಹಾಗೂ ಅಂಧಕಾರ ಇವುಗಳೊಡನೆ ಹೋರಾಡಲು, ಜಯಿಸಲು ನಂಬಿಕೆ ಭಗವಂತನ ಸಾಮರ್ಥ್ಯದ ನೇರ ಅಭಿವ್ಯಕ್ತಿಯಾಗಿರುತ್ತದೆ.

**CWM, 9/351–52** **– ಶ್ರೀಮಾತೆ**

*

**ಮನುಷ್ಯ ತನ್ನ ನಂಬಿಕೆಯನ್ನು ಹೆಚ್ಚಿಸುವುದು ಹೇಗೆ?**

**ಪ್ರಶ್ನೆ :** *ಶ್ರೀಮಾತೆಯವರೆ, ನಂಬಿಕೆ ಯಾವುದರ ಮೇಲೆ ಅವಲಂಬಿಸುತ್ತದೆ?*

**ಶ್ರೀಮಾತೆ:** ಬಹುಶಃ ದೈವೀ ಕೃಪೆಯ ಮೇಲೆ. ಕೆಲವು ಜನರು ಅದನ್ನು ಸ್ವಯಂಪ್ರೇರಿತರಾಗಿ ಹೊಂದಿರುತ್ತಾರೆ. ಇನ್ನು ಕೆಲವರಿದ್ದಾರೆ, ಅವರು ಅದನ್ನು ಹೊಂದಲು ದೊಡ್ಡ ಪ್ರಯತ್ನ ಮಾಡಬೇಕಾಗುವುದು.

*

**ಪ್ರಶ್ನೆ :** *ನಂಬಿಕೆಯನ್ನು ಹೆಚ್ಚಿಸಿಕೊಳ್ಳುವುದು ಹೇಗೆ?*

**ಶ್ರೀಮಾತೆ :** ಅಭೀಪ್ಸೆಯ ಮೂಲಕ ಹೆಚ್ಚಿಸಿಕೊಳ್ಳಬಹುದು ಎಂದು ನನಗನಿಸುತ್ತದೆ. ಕೆಲವರು ಅದನ್ನು ಸ್ವಯಂಪ್ರೇರಿತವಾಗಿ ಹೊಂದಿರುತ್ತಾರೆ. ನಿಮಗೆ ತಿಳಿದ ಹಾಗೆ ನಂಬಿಕೆ ಇಲ್ಲದಿದ್ದರೆ ಪ್ರಾರ್ಥನೆ ಮಾಡುವುದು ಕಷ್ಟವಾಗುತ್ತದೆ, ಆದರೆ ಮನುಷ್ಯ ತನ್ನ ನಂಬಿಕೆಯನ್ನು ಇಲ್ಲವೆ ಅಭೀಪ್ಸೆಪಡುವುದನ್ನು ಹೆಚ್ಚಿಸುವುದಕ್ಕೆ ಅಭೀಪ್ಸೆಯೊಂದನ್ನು ಹೊಂದುವುದಕ್ಕೆ, ನಂಬಿಕೆಯನ್ನು ಹೊಂದಲು ಒಂದು

ಅಭೀಪ್ಸೆಯನ್ನಿರಿಸಿಕೊಳ್ಳುವುದಕ್ಕೆ ಪ್ರಾರ್ಥನೆಯನ್ನು ಒಂದು ಸಾಧನವನ್ನಾಗಿ ಮಾಡಬಲ್ಲನು. ಈ ಗುಣಗಳಲ್ಲಿ ಬಹಳಷ್ಟಕ್ಕೆ ಪ್ರಯತ್ನದ ಆವಶ್ಯಕತೆ ಇರುತ್ತದೆ, ಮನುಷ್ಯನಲ್ಲಿ ಒಂದು ವಿಷಯವಿಲ್ಲದಿದ್ದರೆ ಮತ್ತು ಅದನ್ನು ಹೊಂದಲು ಬಯಸಿದರೆ ಸರಿ ಅದಕ್ಕೆ ಪೋಷಿಸಿಕೊಂಡು ಬಂದ ಶ್ರೇಷ್ಠ ಪ್ರಯತ್ನಗಳು, ಸತತವಿರುವ ಅಭೀಪ್ಸೆ, ಶಕ್ತಿಗುಂದದ ಸಂಕಲ್ಪ, ಪ್ರತಿಕ್ಷಣ ಇರುವ ನಿಷ್ಕಾಪಟ್ಯ, ಇವೆಲ್ಲವುಗಳ ಆವಶ್ಯಕತೆ ಇರುತ್ತದೆ, ಆಗ ಅದು ಒಂದು ದಿನ ಬರುವುದೆಂಬುದರ ಬಗ್ಗೆ ಅವನು ನಿಶ್ಚಿತತೆ ಹೊಂದಿರುತ್ತಾನೆ – ಅದು ಒಂದು ಸೆಕೆಂಡಿನಲ್ಲಿ ಬರಬಲ್ಲದು, ಅದನ್ನು ಹೊಂದಿದ ಜನರಿದ್ದಾರೆ, ಮತ್ತು ಅವರ ಮೇಲೆ ಒಂದು ಆಕ್ರಮಣ ಮಾಡುವ ವಿರೋಧೀ ಚಲನೆಗಳು ಅವರಲ್ಲಿರುತ್ತವೆ. ಇವರ ಸಂಕಲ್ಪ ನಿಷ್ಕಪಟದ್ದಾಗಿದ್ದರೆ ಅದು ಇವರ ನಂಬಿಕೆಯನ್ನು ರಕ್ಷಿಸುತ್ತದೆ ಮತ್ತು ಆಕ್ರಮಣಗಳನ್ನು ಹಿಮ್ಮೆಟ್ಟಿಸುತ್ತದೆ. ಇನ್ನು ಕೆಲವರಿದ್ದಾರೆ. ಅವರು ಸಂಶಯವನ್ನು ಅಭಿವೃದ್ಧಿಪಡಿಸಿಕೊಳ್ಳುತ್ತಾರೆ, ಅದು ಅವರಿಗೊಂದು ಹವ್ಯಾಸವಾಗಿರುತ್ತದೆ, – ಅದಕ್ಕಿಂತ ಹೆಚ್ಚು ಅಪಾಯಕಾರಿಯಾದದ್ದು ಬೇರೊಂದಿಲ್ಲ, ಅದು ಮನುಷ್ಯ ಹಣ್ಣಿನಲ್ಲಿ ಹುಳುವೊಂದು ಬರಲು ಅನುವು ಮಾಡಿಕೊಟ್ಟ ಹಾಗಿರುತ್ತದೆ, ಅದು ಕೊನೆಗೆ ಇಡೀ ಹಣ್ಣನ್ನು ಸಂಪೂರ್ಣವಾಗಿ ತಿಂದುಬಿಡುತ್ತದೆ. ಇದರರ್ಥ ಈ ಬಗೆಯ ಚಲನೆ ಬಂದಾಗ – ಸಾಮಾನ್ಯವಾಗಿ ಅದು ಮೊದಲು ಮನಸ್ಸಿನಲ್ಲಿ ಬರುತ್ತದೆ – ಆಗ ಮೊದಲು ಕೈಕೊಳ್ಳಬೇಕಾದುದೆಂದರೆ ಅದನ್ನು ತಿರಸ್ಕರಿಸಲು ಬಹಳ ನಿರ್ಧಾರಕ ಮನೋಭಾವ ಹೊಂದುವುದಾಗಿದೆ, ಏನು ಸಂಭವಿಸಲಿದೆ ಎಂದು ಅದರತ್ತ ನೋಡುತ್ತ ಮನುಷ್ಯ ಸಂತೋಷ ಪಡೆಯಬಾರದು; ಆ ಬಗೆಯ ಕುತೂಹಲ ಭಯಾನಕವಾದ ಅಪಾಯವಾಗಿರುತ್ತದೆ.

ಸರಳರು, ನಿಷ್ಕಪಟಿಗಳು, ಮುಚ್ಚುಮರೆಯಿಲ್ಲದವರು, ಬೌದ್ಧಿಕ ತೊಡಕು–ಗಳಿಲ್ಲದವರು ಆಗಿರುವ ಜನರಿಗಿಂತ ಬಹುಶಃ ಬುದ್ಧಿಜೀವಿಗಳಿಗೆ ನಂಬಿಕೆಯನ್ನು ಹೊಂದುವುದು ಹೆಚ್ಚು ಕಠಿಣವಾದದ್ದು, ಆದರೆ ಬುದ್ಧಿಜೀವಿಯಲ್ಲಿ ನಂಬಿಕೆಯಿದ್ದರೆ, ಆಗ ಅದು ಬಹಳ ಸಾಮರ್ಥ್ಯಪೂರ್ಣವಾಗಿರುತ್ತದೆ, ಅದು ನಿಜವಾಗಿ ಪವಾಡಗಳು ಕಾರ್ಯಗತವಾಗುವಂತೆ ಮಾಡಬಲ್ಲದು ಎಂದು ನನಗನಿಸುತ್ತದೆ.

**CWM, 6/121** **– ಶ್ರೀಮಾತೆ**

*



ನನ್ನ ಮಗು ತಾಳಿಕೋ! ದೈವೀ ಪ್ರಭುವಿನ ಹೃದಯದಲ್ಲಿ, ಅವನಲ್ಲಿ ನಂಬಿಕೆಯಿರಿಸಿ, ಹೊಸದಾಗಿ ಜನ್ಮತಾಳಿದ ಮಗುವಿನ ಹಾಗೆ ನುಸುಳಿಕೋ ಕೊನೆಗೆ ಪರಮ ದಿವ್ಯಾನಂದವಿರುತ್ತದೆ.

**Mother you said so: 6-12-1965** **– ಶ್ರೀಮಾತೆ**

*

ಪರಮೋಚ್ಚನ ಸಾಮರ್ಥ್ಯ ಅನಂತವಾಗಿದೆ – ಚಿಕ್ಕದಾಗಿರುವುದು ನಮ್ಮ ನಂಬಿಕೆ.

**CWM, 13/88** **– ಶ್ರೀಮಾತೆ**

*

## ನಂಬಿಕೆಯನ್ನು ಕುರಿತು ಧ್ಯಾನ

ಪರಿಪೂರ್ಣವಾಗಿ ಅತ್ಯಗತ್ಯವಾಗಿರುವ ಎರಡು ವಿಷಯಗಳಿವೆ: ತಾಳ್ಮೆ ಮತ್ತು ಯಾವುದೂ ಅಲುಗಾಡಿಸಲು ಶಕ್ಯವಾಗದ ನಂಬಿಕೆ, ತೋರಿಕೆಗೆ ಸಂಪೂರ್ಣ ಅಭಾವವಿದ್ದಾಗಲೂ, ನೀವು ವೇದನೆಗೆ ಒಳಗಾಗಿದ್ದರೂ ದುಃಖಿತರಾಗಿದ್ದರೂ

(ದೇಹದಲ್ಲಿ ಎಂಬರ್ಥದಲ್ಲಿ), ದಣಿದುಕೊಂಡಿದ್ದರೂ – ಉಳಿದುಕೊಳ್ಳುವುದು. ನಂಬಿಕೆಯನ್ನು ಹಿಡಿದುಕೊಂಡೇ ಸಾಗುವುದು, ತಾಳಿಕೊಳ್ಳುವುದು.

**CWM, 11/1** **– ಶ್ರೀಮಾತೆ**

*

ನಿಮ್ಮ ನಂಬಿಕೆಯ ಗಾಢತೆ ಬೆರಳಿಟ್ಟು ತೋರಿಸುವುದನ್ನು ಭಗವಂತ ಅದಾಗಲೆ ಆಯ್ದುಕೊಂಡಿರುತ್ತಾನೆ ಮತ್ತು ಅದನ್ನು ಕೈಕೊಳ್ಳಲಾಗುವುದು ಎಂಬ ಅರ್ಥ ಅಲ್ಲಿರುತ್ತದೆ. ಅಲುಗಾಡದ ನಂಬಿಕೆ ಭಗವಂತನ ಸಂಕಲ್ಪವಿರುವುದರ ಕುರುಹು, ಏನಾಗಲಿದೆ ಎಂಬುದರ ಸೂಚನೆ.

**CWM, 3/97** **– ಶ್ರೀಮಾತೆ**

*

ಅಪವಾದವಿಲ್ಲದೆ ಎಲ್ಲ ಸಂದರ್ಭಗಳಲ್ಲಿ ಏನೇ ಸಂಭವಿಸಲಿ, ಸ್ಥಿರತೆ ಮತ್ತು ಅಚಂಚಲತೆ ಹಾಗೂ ಪ್ರಶಾಂತ ಶಾಂತಿ, ದೈವೀ ಕೃಪೆಯಲ್ಲಿ ಅಲುಗಾಡದ ನಂಬಿಕೆ ಇವೆಲ್ಲ ನಿಮ್ಮಲ್ಲಿದ್ದರೆ ನಿಮಗೆ (ಕೆಟ್ಟದಾದ) ಏನೂ ಸಂಭವಿಸುವುದಿಲ್ಲ. ನಿಮಗೆ ಅನುಭವಗಳು ಬೇಕಾಗಿದ್ದರೆ ಇವೆಲ್ಲವನ್ನು ಹೊಂದಿರಬೇಕು, ಏಕೆಂದರೆ ಇವುಗಳಿಲ್ಲದ ಅನುಭವಗಳು ಒಳ್ಳೆಯವಲ್ಲ, ಆದರೆ ಇವುಗಳೊಂದಿಗೆ ಅವು ಉತ್ಕೃಷ್ಟವಾಗಿರುತ್ತವೆ.

**CWM, 7/82** **– ಶ್ರೀಮಾತೆ**

*

ಪ್ರವಾದಿಗಳಲ್ಲಿ ಕೆಲವರು, ಗತಕಾಲದಲ್ಲಿ, ಈ ಭವಿಷ್ಯದ್ದರ್ಶನವನ್ನು ಹೊಂದಿದ್ದರು, ಸಾಮಾನ್ಯವಾಗಿ ಕಂಡುಬರುವಂತೆ ವಿಷಯಗಳು ಮಿಶ್ರಣ–ಕ್ಕೊಳಗಾಗಿದ್ದವು, ಮತ್ತು ಅವರ ಭವಿಷ್ಯದ್ದರ್ಶನಗಳೊಂದಿಗೆ, ಬರಲಿರುವ ಅತಿಮಾನಸ ಜಗತ್ತಿನ ದರ್ಶನವಾಗಲಿ ಹಾಗೂ ಪರಿವರ್ತನೆಗೆ ಒಪ್ಪಿಗೆ ನೀಡುವ ಮನುಕುಲದ ಭಾಗವನ್ನು ಎತ್ತಿ ಹಿಡಿಯುವುದರ ದರ್ಶನವಾಗಲಿ ಇರಲಿಲ್ಲ. ಹಾಗಾಗಿ ಆ ಗತಕಾಲದಲ್ಲಿ, ಈ ವಿರೂಪಗೊಂಡ ಮಾನವ ಪ್ರಜ್ಞೆಯ ಭಾಗದಲ್ಲಿ ಜನಿಸಿದವರಿಗೆ ಭರವಸೆ ನೀಡಲು, ಅವರು ನಂಬಿಕೆಯ ಮೂಲಕ ಪಾಪ, ನರಕಗಳಿಂದ ವಿಮೋಚನೆ ಪಡೆಯುವುದನ್ನು ಕಲಿಸಿಕೊಟ್ಟರು: ಭೌತದ್ರವ್ಯದಲ್ಲಿ ಭಗವಂತನ ಯಜ್ಞಾಹುತಿಯ ಬಗ್ಗೆ ನಂಬಿಕೆ ಇದ್ದವರು: ಸ್ವಯಂಚಾಲಿತವಾಗಿ,

ಇನ್ನೊಂದು ಜಗತ್ತಿನಲ್ಲಿ ರಕ್ಷಣೆ ಪಡೆಯುತ್ತಿದ್ದರು – ಅದನ್ನು ಕೇವಲ ನಂಬಿಕೆಯಿಂದ, ಅರ್ಥಮಾಡಿಕೊಳ್ಳದೆ, ಬುದ್ಧಿಮತ್ತೆಯಿಲ್ಲದೆ ಪಡೆಯುತ್ತಿದ್ದರು. ಅವರು ಅತಿಮಾನಸ ಜಗತ್ತನ್ನು ನೋಡಿರಲಿಲ್ಲ, ಭೌತದ್ರವ್ಯದಲ್ಲಿ ಭಗವಂತನ ಶ್ರೇಷ್ಠ ಯಜ್ಞಾಹುತಿಯನ್ನು ನೋಡಿರಲಿಲ್ಲ, ಭಗವಂತನ ಈ ಯಜ್ಞಾಹುತಿ ಅವನು ಭೌತದ್ರವ್ಯದಲ್ಲಿ ತೊಡಗಿಕೊಂಡದ್ದಾಗಿದೆ (involution) ಮತ್ತು ಅದು ಭೌತದ್ರವ್ಯದಲ್ಲಿಯೇ ಭಗವಂತನ ಇಡಿಯಾದ ಜ್ಞಾನಪ್ರಕಾಶನ (revelation)ದಲ್ಲಿ ಪರಾಕಾಷ್ಠೆ ಕಂಡುಕೊಳ್ಳಬೇಕು.

**CWM, 9/300–01** **– ಶ್ರೀಮಾತೆ**

*

ಪ್ರಗತಿಗಾಗಿ ನಿರಾಶೆಯ ಆವಶ್ಯಕತೆ ಎಂದಿಗೂ ಇರುವುದಿಲ್ಲ, ಅದು ಯಾವಾಗಲೂ ದೌರ್ಬಲ್ಯ ಹಾಗೂ ತಮಸ್ಸುಗಳಿರುವುದರ ಕುರುಹಾಗಿರುತ್ತದೆ, ಅದು ಬಹಳಷ್ಟು ಸಲ ವಿರೋಧೀಶಕ್ತಿಯ ಸಾನ್ನಿಧ್ಯವಿರುವುದನ್ನು ಸೂಚಿಸುತ್ತದೆ, ಎಂದರೆ ಅದು ಸಾಧನೆಯ ವಿರುದ್ಧ ಉದ್ದೇಶಪೂರ್ವಕ ಕಾರ್ಯಮಾಡುತ್ತಿರುವ ಶಕ್ತಿಯಾಗಿರುತ್ತದೆ.

ಹಾಗಾಗಿ ಜೀವನದ ಎಲ್ಲ ಪರಿಸ್ಥಿತಿಗಳಲ್ಲಿ ನೀವು ಯಾವಾಗಲೂ ನಿರಾಶೆಯ ವಿರುದ್ಧ ಎಚ್ಚರಿಕೆ ವಹಿಸಬೇಕು. ಅಲ್ಲದೆ ಮಬ್ಬು ಮುಸುಕಿದ, ಮಂಕಾಗಿರುವ ನಿರಾಶೆಗೊಳಗಾಗುವ ಈ ರೂಢಿ, ಘಟನೆಗಳ ಮೇಲೆ ಅವಲಂಬಿಸಿರುವುದಿಲ್ಲ, ಆದರೆ ಸ್ವಭಾವದಲ್ಲಿರುವ ನಂಬಿಕೆಯ ಕೊರತೆಯಿಂದಾಗಿರುತ್ತದೆ. ನಂಬಿಕೆಯುಳ್ಳ ಮನುಷ್ಯ, ಅವನ ನಂಬಿಕೆ ಕೇವಲ ಅವನಲ್ಲಿರುವುದೇ ಆಗಿರಲಿ, ಎಲ್ಲ ತೊಂದರೆಗಳನ್ನು, ಪರಿಸ್ಥಿತಿಗಳನ್ನು, ಅವೆಷ್ಟೇ ವಿರೋಧವನ್ನೊಡ್ಡುತ್ತಿರಲಿ, ಯಾವುದೇ ಬಗೆಯ ಎದೆಗುಂದುವಿಕೆ ಇಲ್ಲವೆ ನಿರಾಶೆಗಳಿಲ್ಲದೆ ಎದುರಿಸಬಲ್ಲನು. ಅವನು ಪುರುಷನ ಹಾಗೆ ಕೊನೆಯವರೆಗೆ ಹೋರಾಡುತ್ತಾನೆ. ನಂಬಿಕೆಯ ಕೊರತೆಯಿರುವ ಸ್ವಭಾವಗಳು ತಾಳ್ಮೆಯ ಹಾಗೂ ಧೈರ್ಯದ ಕೊರತೆಯನ್ನೂ ಕೂಡ ಹೊಂದಿರುತ್ತವೆ.

**CWM, 10/56** **– ಶ್ರೀಮಾತೆ**

*

ಎಲ್ಲವೂ ಭಗವಂತನ ಆಳಿಕೆಗೆ ಒಳಗಾಗಿದೆ ಎಂಬ ನಂಬಿಕೆ ನಮ್ಮಲ್ಲಿದ್ದರೆ ಜಯಿಸಲಾಗದ, ಬದಲು ಮಾಡಲಾಗದ ಯಾವ ನಿಯಮವೂ ಪ್ರಕೃತಿ–

ಯಲ್ಲಿರುವುದಿಲ್ಲ. ಪ್ರಾಚೀನ ಕಾಲದಿಂದ ಬಂದ ರೂಢಿಗಳ ಸೆರೆಮನೆಯಿಂದ ಹೇಗೆ ಪಾರಾಗಬೇಕು ಎಂಬುದು ನಮಗೆ ತಿಳಿದಿದ್ದರೆ ಮತ್ತು ಭಗವಂತನ ಸಂಕಲ್ಪಕ್ಕೆ ಕಾದಿರಿಸಿಕೊಳ್ಳದೆ ನಮ್ಮನ್ನು ಹೇಗೆ ಸಮರ್ಪಿಸಬೇಕು ಎಂಬುದು ನಮಗೆ ತಿಳಿದಿದ್ದರೆ ಭಗವಂತನೊಡನೆ ನೇರ ಸಂಪರ್ಕಕ್ಕೆ ಬರುವುದು ನಮಗೆ ಸಾಧ್ಯವಾಗುತ್ತದೆ.

**CWM, 10/24** **– ಶ್ರೀಮಾತೆ**

*

ಸಾಮಾನ್ಯವಾಗಿ ಜನರು ಕುರುಡು ನಂಬಿಕೆ ಎಂದು ಕರೆಯುವುದನ್ನು, ವಾಸ್ತವದಲ್ಲಿ ನಿಜವಾದ ಜ್ಞಾನವನ್ನು ಪಡೆಯಲು ಸಾಕಷ್ಟು ಅಭಿವೃದ್ಧಿ ಹೊಂದಿರದ ಬುದ್ಧಿಮತ್ತೆ ಇರುವವರಿಗೆ, ದೈವೀ ಕೃಪೆ ಕೆಲವೊಮ್ಮೆ ನೀಡಿರುತ್ತದೆ. ಹಾಗಾಗಿ ಕುರುಡು ನಂಬಿಕೆ ಬಹಳ ಮರ್ಯಾದೆ ಪಡೆಯುವುದಕ್ಕೆ ಯೋಗ್ಯವಾದ ಏನೋ ಒಂದು. ಆದಾಗ್ಯೂ ನಿಜವಾದ ಜ್ಞಾನವನ್ನು ಹೊಂದಿರುವವನು, ಸಹಜವಾಗಿ, ಹೆಚ್ಚು ಶ್ರೇಷ್ಠ ಸ್ಥಾನದಲ್ಲಿರುತ್ತಾನೆ ಎಂಬುದು ಸ್ಪಷ್ಟ.

**CWM, 10/288** **– ಶ್ರೀಮಾತೆ**

*

ಹೃದಯದಲ್ಲಿ ಪರಿಶುದ್ಧರಾದವರಿಗೆ ಮತ್ತು ಅಲುಗಾಡದ ನಂಬಿಕೆಯನ್ನು ಹೊಂದಿದ ಜನರಿಗೆ ತೋರಿಕೆಗೆ ಕಂಡುಬರುವ ಅತ್ಯಂತ ಕೆಟ್ಟ ಸೋಲು ಕೇವಲ ಕೊನೆಯ ವಿಜಯದತ್ತ ಕರೆದೊಯ್ಯುವ ಪರದೆ ಧರಿಸಿದ ಮಾರ್ಗವಾಗಿರುತ್ತದೆ.

**CWM, 10/309** **– ಶ್ರೀಮಾತೆ**

*

ನಿಮ್ಮ ನಂಬಿಕೆ ನಿಮ್ಮನ್ನು ಸರ್ವಸಮರ್ಥನಾದ ಪರಮೋಚ್ಚನ ರಕ್ಷಣೆ–ಯಡಿಯಲ್ಲಿ ಇರಿಸುವುದು.

**CWM, 12/309** **– ಶ್ರೀಮಾತೆ**

*

ಮಹಾಸಾಹಸಿ (hero)ಯಲ್ಲಿ ಇರುವಂತಹ ಆತ್ಮವಿದ್ದವರಿಗೆ ಭವಿಷ್ಯತ್ತಿದೆ. ನಮ್ಮ ನಂಬಿಕೆ ಹೆಚ್ಚು ದೃಢವಾದ ಹಾಗೆ, ನಿಷ್ಕಪಟವಾದ ಹಾಗೆ ನಾವು

ಸ್ವೀಕರಿಸುವ ಸಹಾಯ ಹೆಚ್ಚು ಸಾಮರ್ಥ್ಯಪೂರ್ಣವಾದದ್ದು ಮತ್ತು ಪರಿಣಾಮಕಾರಿಯಾದದ್ದು ಆಗಿರುತ್ತದೆ.

**CWM, 13/17** **– ಶ್ರೀಮಾತೆ**

*

ನಿಮ್ಮ ಅಭೀಪ್ಸೆಗನುಗುಣವಾಗಿ ಭಗವಂತ ನಿಮ್ಮಲ್ಲಿರುತ್ತಾನೆ, ಅದರರ್ಥ ಅವನು ನಿಮ್ಮ ಬಾಹ್ಯ ಸ್ವಭಾವದ ಚಪಲಚಿತ್ತತೆಗಳಿಗೆ ಮಣಿಯುತ್ತಾನೆ ಎಂದಲ್ಲ. ನಾನಿಲ್ಲಿ ನಿಮ್ಮ ಸತ್ತೆಯ ಸತ್ಯವನ್ನು ಕುರಿತು ಹೇಳುತ್ತಿದ್ದೇನೆ. ಆದಾಗ್ಯೂ ಕೆಲವೊಮ್ಮೆ ಅವನು ನಿಮ್ಮ ಬಾಹ್ಯ ಅಭೀಪ್ಸೆಗಳಿಗೆ ಅನುಗುಣವಾಗಿ ತನ್ನನ್ನು ಅಳವಡಿಸಿಕೊಳ್ಳುತ್ತಾನೆ ಮತ್ತು ನೀವು ಭಕ್ತರ ಹಾಗೆ ಪರ್ಯಾಯವಾಗಿ ಪ್ರತ್ಯೇಕತೆಯಲ್ಲಿ ಹಾಗೂ ಏಕತೆಯಲ್ಲಿ, ದಿವ್ಯಾನಂದದಲ್ಲಿ ಹಾಗೂ ನಿರಾಶೆಯಲ್ಲಿ ಜೀವಿಸಿದರೆ ಭಗವಂತ ಕೂಡ ನೀವು ನಂಬಿಕೊಂಡ ರೀತಿಗನುಗುಣವಾಗಿ ನಿಮ್ಮಿಂದ ಪ್ರತ್ಯೇಕಗೊಳ್ಳುತ್ತಾನೆ ಮತ್ತು ನಿಮ್ಮೊಡನೆ ಏಕತೆಯಲ್ಲಿರುತ್ತಾನೆ. ಹೀಗೆ ಆಂತರಿಕ ಹಾಗೂ ಬಾಹ್ಯ ಮನೋಭಾವಗಳು ಬಹಳ ಮಹತ್ವದ್ದಾಗಿರುತ್ತವೆ. ನಂಬಿಕೆ ಎಷ್ಟು ಮಹತ್ವದ್ದೆಂದು, ಅದು ಪವಾಡವಾಗಿರುವುದನ್ನು, ಪವಾಡಗಳನ್ನು ಸೃಷ್ಟಿಸುವುದೆಂದು ಜನರು ತಿಳಿದಿರುವುದಿಲ್ಲ. ಪ್ರತಿಯೊಂದು ಕ್ಷಣ ನಿಮ್ಮನ್ನು ಮೇಲಕ್ಕೆತ್ತಿ ಭಗವಂತನತ್ತ ಎಳೆಯುವಂತಾಗಲಿ ಎಂದು ನೀವು ನಿರೀಕ್ಷಿಸುತ್ತಿದ್ದರೆ, ನಿಮ್ಮನ್ನು ಮೇಲಕ್ಕೆತ್ತಿ ಹಿಡಿಯಲು ಅವನು ಬರುತ್ತಾನೆ, ಅವನು ಅಲ್ಲಿ ನಿಮಗೆ ಬಹಳ ಹತ್ತಿರದಲ್ಲಿ ಇರುತ್ತಾನೆ.

**CWM, 13/76** **– ಶ್ರೀಮಾತೆ**

*

ಪ್ರತಿಯೊಂದು ಕ್ಷಣ ಮುಂಗಾಣಲಾಗದ, ಅನಿರೀಕ್ಷಿತವಾದ, ಅಪರಿಚಿತವಾದ ಎಲ್ಲವೂ ನಮ್ಮೆದುರಿಗಿರುತ್ತದೆ – ಮತ್ತು ನಮಗೆ ಏನು ಸಂಭವಿಸಲಿದೆ ಎಂಬುದು ಹೆಚ್ಚಾಗಿ ನಮ್ಮ ನಂಬಿಕೆಯ ಗಾಢತೆ ಹಾಗೂ ಪರಿಶುದ್ಧತೆಗಳ ಮೇಲೆ ಅವಲಂಬಿಸಿರುತ್ತದೆ.

**CWM, 14/80** **– ಶ್ರೀಮಾತೆ**

*

ದೈವೀ ಕೃಪೆಯ ಸರ್ವಸಾಮರ್ಥ್ಯದಲ್ಲಿರುವ ನಮ್ಮ ನಂಬಿಕೆ ದೈವೀ ಕೃಪೆ ಅದಿರುವಷ್ಟರ ಮಟ್ಟಿಗೆ ಎಂದೂ ಸಮವಾಗುವುದಿಲ್ಲ.

**July 1956** **– ಶ್ರೀಮಾತೆ**

*

ದೈವೀ ಕೃಪೆಯಲ್ಲಿ ಪರಿಪೂರ್ಣ ನಂಬಿಕೆ ಮತ್ತು ವಿಶ್ವಾಸ ಕೊನೆಯ ವಿಶ್ಲೇಷಣೆಯಲ್ಲಿ ಪರಮೋಚ್ಚ ವಿವೇಕವಾಗಿರುತ್ತದೆ.

**15-8-1956** **– ಶ್ರೀಮಾತೆ**

*

ತೋರಿಕೆಗೆ ಕಂಡುಬರುವ ಈ ಎಲ್ಲ ಅಸ್ತವ್ಯಸ್ತತೆಯ ಮೂಲಕ ಒಂದು ಹೊಸ ಹಾಗೂ ಹೆಚ್ಚು ಒಳ್ಳೆಯ ವ್ಯವಸ್ಥೆ ರೂಪುಗೊಳ್ಳುತ್ತಿದೆ. ಆದರೆ ಅದನ್ನು ನೋಡಲು ದೈವೀ ಕೃಪೆಯಲ್ಲಿ ನಿಮಗೆ ನಂಬಿಕೆ ಇರಬೇಕು, ಧೈರ್ಯ ತಂದುಕೊಳ್ಳಿರಿ.

*

ಎಲ್ಲವೂ ಕಳೆದು ಹೋಗಿದೆ ಎಂದು ತೋರಿಬರುತ್ತಿದ್ದಾಗ ಎಲ್ಲವನ್ನೂ ರಕ್ಷಿಸಲಾಗುವುದು. ನಿಮ್ಮ ವೈಯಕ್ತಿಕ ಸಾಮರ್ಥ್ಯದಲ್ಲಿ ಗಾಢ ವಿಶ್ವಾಸವನ್ನು ಕಳೆದುಕೊಂಡಾಗ ದೈವೀ ಕೃಪೆಯಲ್ಲಿ ವಿಶ್ವಾಸವಿರಿಸಬೇಕು.

**CWM, 14/89–90** **– ಶ್ರೀಮಾತೆ**

*

ದೈವೀ ಕೃಪೆಯಲ್ಲಿ ಪರಿಪೂರ್ಣ ಶಾಂತಿ ಮತ್ತು ಸ್ಥಿರತೆಯಿಂದ ಅಲುಗಾಡದ ಗಾಢ ವಿಶ್ವಾಸದೊಂದಿಗೆ ಉಳಿದುಕೊಳ್ಳುವುದರ ಮೂಲಕ ನೀವು ಪರಿಸ್ಥಿತಿಗಳಿಗೆ, ಸಾಧ್ಯವಿದ್ದಷ್ಟು ಒಳ್ಳೆಯವಾಗಿರಲು ಅನುವು ಮಾಡಿಕೊಡುತ್ತೀರಿ. ತಮ್ಮ ಇಡೀ ವಿಶ್ವಾಸವನ್ನು ಕೇವಲ ಭಗವಂತನಲ್ಲಿ ಇರಿಸಿದವರಿಗೆ ಯಾವಾಗಲೂ ಅತ್ಯಂತ ಒಳ್ಳೆಯದಾಗುತ್ತದೆ.

**CWM, 14/94** **– ಶ್ರೀಮಾತೆ**

*

ಎಂದಿಗೂ ಆಕ್ಷೇಪಣೆ ಮಾಡುವುದು ಬೇಡ. ನೀವು ಆಕ್ಷೇಪಣೆ ಮಾಡತೊಡಗಿದಾಗ ಎಲ್ಲ ಬಗೆಯ ಶಕ್ತಿಗಳು ನಿಮ್ಮೊಳಗೆ ಪ್ರವೇಶಿಸುತ್ತವೆ ಮತ್ತು ನಿಮ್ಮನ್ನು ಕೆಳಗೆಳೆಯುತ್ತವೆ. ಮುಗುಳ್ನಗುತ್ತಿರಬೇಕು. ನಾನು ಯಾವಾಗಲೂ ತಮಾಷೆ ಮಾಡುತ್ತಿರುವಂತೆ ತೋರಿಬರುತ್ತೇನೆ, ಆದರೆ ಅದು ಕೇವಲ ತಮಾಷೆಯಲ್ಲ. ಅದು ಚೈತ್ಯದಿಂದ ಜನ್ಮತಾಳಿದ ಗಾಢ ವಿಶ್ವಾಸ. ಭಗವಂತನ ವಿರುದ್ಧ ಯಾವುದೂ ನಿಲ್ಲಲಾರದು ಮತ್ತು ಕೊನೆಗೆ ಪ್ರತಿಯೊಂದು ಸರಿಯಾಗಿ ಹೊರಬರುತ್ತದೆ ಎಂಬುದನ್ನು ಒಂದು ಮುಗುಳ್ನಗು ಅಭಿವ್ಯಕ್ತಪಡಿಸುತ್ತದೆ.

**CWM, 14/221** **– ಶ್ರೀಮಾತೆ**

*

| **ಒಪ್ಪೋಲೆ : ಅಖಿಲ ಭಾರತ ಪತ್ರಿಕೆ, ಜೂನ್ 2016** | | |
|---|---|---|
| **ಪುಟ** | **ತಪ್ಪು** | **ಒಪ್ಪು** |
| 3 | ಪರಿತವರ್ತನೆ | ಪರಿವರ್ತನೆ |
| 19 | ಆದರಶದಲ್ಲಿ | ಆದರ್ಶದಲ್ಲಿ |


## ವಾರ್ತಾಪತ್ರ

## ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 11ನೇ ಜೂನ್ 2016ರ ಶನಿವಾರದಂದು ಶ್ರೀ ಅರವಿಂದರ 16ನೇ ವರ್ಷದ ಪುಣ್ಯಾವಶೇಷದ ದಿನವನ್ನಾಗಿ ಆಚರಿಸಲಾಯಿತು. ಬೆಳಿಗ್ಗೆ 10.00 ಗಂಟೆಯಿಂದ 10.20 ರವರೆಗೆ ಸಾಮೂಹಿಕ ಧ್ಯಾನವನ್ನು ಮಾಡಲಾಯಿತು. ತತ್ಸಂಬಂಧ 10.30 ರಿಂದ 12.00 ಗಂಟೆಯವರೆಗೆ ಡಾ॥ ಆರ್. ಎಲ್. ಕಶ್ಯಪ್, ಸಂಸ್ಥಾಪಕರು, ಶ್ರೀ ಅರವಿಂದೋ ಕಪಾಲಿಶಾಸ್ತ್ರಿ ಇನ್‌ಸ್ಟಿಟ್ಯೂಟ್ ಆಫ್ ವೇದಿಕ್ ಕಲ್ಚರ್ ಅವರಿಂದ "On Sri Aurobindo" ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಗುರು–ಬಂಧುಗಳು ಹಾಗೂ ಇತರರು ಹಾಜರಿದ್ದರು.

ದಿನಾಂಕ 11ನೇ ಜೂನ್‌ನಿಂದ 10ನೇ ಆಗಸ್ಟ್ 2016ರವರೆಗೆ "Sri Aurobindo's Relics Flower Decoration" ಇದರ ಬಗ್ಗೆ ಫೋಟೋ ಪ್ರದರ್ಶನವನ್ನು ಏರ್ಪಡಿಸಲಾಗಿದೆ.



*All ocean lived within a wandering drop,*
*A time-made body housed the Illimitable,*
*To live this Mystery out our souls came here.*

- Sri Aurobindo

**RNI No. 22511/1971**
No. of Pages **52 + 4 (Cov. Page)**
KAR Reg No : RNP/KA/BGS/368/2015-2017
Permitted to Post 10th of Every Month. Reg. Valid till : 31-12-2017
Licensed to Post at BG PSO, Mysore Road, Bengaluru - 560 026

ಶ್ರೀ ಅರವಿಂದ ಸಂಕೀರ್ಣದಲ್ಲಿ ನಿರ್ಮಿಸಲಾಗಿರುವ ಅತಿಥಿ ಗೃಹವು ಈಗಾಗಲೇ ತಿಳಿಸಿರುವಂತೆ ಗುರುಬಂಧುಗಳ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಅತಿಥಿ ಗೃಹದಲ್ಲಿ ತಂಗಲು ಬರುವ ಗುರು-ಬಂಧುಗಳ ಅನುಕೂಲಕ್ಕಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕೂಡ ಸೂಕ್ತ ದರಗಳಲ್ಲಿ ಅನುವುಗೊಳಿಸಲಾಗಿದೆ. ಶ್ರೀ ಅರವಿಂದ ಸೊಸೈಟಿ ಸದಸ್ಯರುಗಳಿಗೆ ರಿಯಾಯಿತಿಯಲ್ಲಿ ವಸತಿ ಊಟಗಳ ವ್ಯವಸ್ಥೆ ಇದೆ. ಇದಕ್ಕಾಗಿ ಸದಸ್ಯರು ತಮ್ಮ ಚಾಲ್ತಿಯಲ್ಲಿರುವ ಸದಸ್ಯತ್ವದ ಚೀಟಿಯನ್ನು ತೋರಿಸಬೇಕಾಗುತ್ತದೆ.

**ತತ್ಸಂಬಂಧ ಸಂಪರ್ಕಿಸಬೇಕಾದ ವಿಳಾಸ :**

ಆ್ಯಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ
ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು - 560 078
ದೂರವಾಣಿ : 080-22449882, 22459628

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase,Bengaluru - 560 078. Phone : 080 - 2244 9882.